# ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ.

**ಆಡಳಿತ ಕಛೇರಿ : ನಂ. 30, 15ನೇ ಅಡ್ಡ ರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು – 560 011**

## 52ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರ

ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್‌ನ 2025–26ನೇ ಸಾಲಿನ 52ನೆಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು **ದಿನಾಂಕ: 20.09.2026ನೇ ಭಾನುವಾರ ಬೆಳಿಗ್ಗೆ 10 ಘಂಟೆಗೆ** ಶ್ರೀ ಕೆ.ಆರ್. ಮರುದೇವಗೌಡ ರಂಗಮಂದಿರ, ಭಾರತ್ ವಿದ್ಯಾಸಂಸ್ಥೆ ಆವರಣ, 16ನೇ ಮುಖ್ಯ ರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು–560011. ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ **ಶ್ರೀ ಕೆ. ಎಸ್. ಸುಧಾಕರ್** ಇವರ ಅಧ್ಯಕ್ಷತೆಯಲ್ಲಿ ಕಾರ್ಯಸೂಚಿಯಲ್ಲಿ ನಮೂದಿಸಿರುವ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗಿ ಸೇರಲಿದೆ. ಸದಸ್ಯರು ದಯಮಾಡಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ಪ್ರಾರ್ಥನೆ.

## ಕಾರ್ಯಸೂಚಿ

| | | ಪುಟ ಸಂಖ್ಯೆ |
|---|---|---|
| 1. | ಸರ್ವಸದಸ್ಯರ ಸಭೆಯ ಸೂಚನೆಯನ್ನು ಓದಿ ದಾಖಲು ಮಾಡುವುದು. | 1 |
| 2. | ದಿನಾಂಕ: 14.09.2025ರಂದು ನಡೆದ ಬ್ಯಾಂಕಿನ 51ನೇ ಸರ್ವಸದಸ್ಯರ ಸಭೆಯ ನಡಾವಳಿಗಳನ್ನು ಓದಿ ದಾಖಲು ಮಾಡುವುದು. | 12–39 |
| 3. | 2025–26ನೇ ಸಾಲಿನ ವಾರ್ಷಿಕ ವರದಿ ಪರಿಶೀಲನೆ ಮತ್ತು ಅನುಮೋದನೆ. | 40–59 |
| 4. | 2025–26ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಪರಿಶೀಲನೆ ಹಾಗೂ ಅಂಗೀಕಾರ. | 61–207 |
| 5. | 2025–26ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚುವರಿ ಆಗಿರುವ ಖರ್ಚನ್ನು ಅನುಮೋದಿಸುವುದು. | 54–57 |
| 6. | 2027–28ನೇ ಸಾಲಿನ ವಾರ್ಷಿಕ ಅಂದಾಜು ಆಯವ್ಯಯ ಮಂಜೂರು ಮಾಡುವುದು. | 54–58 |
| 7. | 2026–27ನೇ ಸಾಲಿನ ಕಾರ್ಯಕ್ರಮದ ಪರಿಗಣನೆ. | 52–53 |
| 8. | ಕರ್ನಾಟಕ ಸಹಕಾರ ಕಾಯಿದೆ, ನಿಯಮಗಳ ಅನುಸಾರ ತಿದ್ದುಪಡಿಯಾಗಿರುವ ಪ್ರಕಾರ ಬ್ಯಾಂಕಿನ ಬೈಲಾ ತಿದ್ದುಪಡಿಗಳನ್ನು ಅನುಮೋಧಿಸುವುದು. | 5–11 |
| 9. | ಬ್ಯಾಂಕಿನ ಸದಸ್ಯರಿಂದ ಮತ್ತು ನಿರ್ದೇಶಕರಿಂದ ಬ್ಯಾಂಕಿನ ಸೇವೆಗಳ ಬಳಕೆಯ ಬಗ್ಗೆ ಪರಿಶೀಲನೆ. | |
| 10. | ನಿರ್ದೇಶಕರು ಮತ್ತು ಅವರ ಸಂಬಂಧಿಗಳ ಸಾಲಗಳ ಬಗ್ಗೆ ಪರಿಶೀಲನೆ. | 46 |
| 11. | ದೀರ್ಘಕಾಲದಿಂದ ವಸೂಲಾಗದೆ ಬಾಕಿ ಉಳಿದಿರುವ ಸಾಲಗಳನ್ನು ಮನ್ನಾ ಮಾಡುವ ಬಗ್ಗೆ ಪರಿಶೀಲನೆ /ತೀರ್ಮಾನ | |
| 12. | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು | |

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
**ಜಿ. ವೆಂಕಟೇಶ್**
ಪ್ರಭಾರ ಕಾರ್ಯದರ್ಶಿ

**ಬೆಂಗಳೂರು**
**ದಿನಾಂಕ : 28.08.2026**

## ಸೂಚನೆಗಳು

1. ಸದಸ್ಯರು ಸಭಾ ಭವನದಲ್ಲಿ ಕೂಡುವುದಕ್ಕೆ ಮುಂಚೆ ದಯಮಾಡಿ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಬೇಕಾಗಿ ವಿನಂತಿ.

2. ಉಪನಿಬಂಧನೆ 24(ಅ) ಪ್ರಕಾರ ವಾರ್ಷಿಕ ಸರ್ವಸದಸ್ಯರ ಸಭೆಗೆ ಪ್ರವೇಶ ಪಡೆಯಲು ಸದಸ್ಯರು ಗುರುತಿನ ಚೀಟಿಯನ್ನು ಹಾಜರುಪಡಿಸುವುದು ಕಡ್ಡಾಯ. ಮಾನ್ಯ ಸದಸ್ಯರು ವಾರ್ಷಿಕ ಸರ್ವಸದಸ್ಯರ ಸಭೆಗೆ ಆಗಮಿಸುವಾಗ ಮರೆಯದೆ ಸದಸ್ಯತ್ವದ ಗುರುತಿನ ಚೀಟಿಯನ್ನು ತರಬೇಕಾಗಿ ವಿನಂತಿ.

3. ತಮ್ಮ ಸಲಹೆ/ಸೂಚನೆಗಳನ್ನು ಸಭೆಯಲ್ಲಿ ಮಂಡಿಸಲು ಇಚ್ಛಿಸುವ ಸದಸ್ಯರು ಸಭೆಗೆ 7 ದಿನಗಳ ಮುಂಚೆ ಲಿಖಿತ ಮೂಲಕ ಕಾರ್ಯದರ್ಶಿಯವರಿಗೆ ತಲುಪಿಸಬೇಕು. ನಂತರ ಬಂದ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಲು ಅವಕಾಶವಿರುವುದಿಲ್ಲ.

4. ವಿಳಾಸ ಬದಲಾವಣೆ ಇದ್ದಲ್ಲಿ ತಕ್ಷಣ ಬ್ಯಾಂಕಿಗೆ ತಮ್ಮ ಹೊಸ ವಿಳಾಸವನ್ನೊಳಗೊಂಡ ಇತ್ತೀಚಿನ ಅಂಗೀಕೃತ ಪುರಾವೆಯನ್ನು ಅರ್ಜಿಯೊಂದಿಗೆ ಸಲ್ಲಿಸಿ ವಿಳಾಸ ಬದಲಾಯಿಸಿಕೊಳ್ಳತಕ್ಕದ್ದು.

5. 2025–26ನೇ ಸಾಲಿನ ವಾರ್ಷಿಕ ವರದಿ, ಲೆಕ್ಕಪರಿಶೋಧನಾ ವರದಿ ಮತ್ತು ಅದರ ಅನುವರ್ತನೆಯನ್ನು ಪ್ರತ್ಯೇಕವಾಗಿ ಮುದ್ರಿಸಿದ್ದು, ಇದರ ಪ್ರತಿಯನ್ನು ಸದಸ್ಯರು ದಿನಾಂಕ : 11.09.2026 ರಿಂದ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ಮತ್ತು ಎಲ್ಲಾ ಶಾಖೆಗಳಲ್ಲಿ ಹಾಗೂ ಸಭೆಯ ದಿನದಂದು ಪಡೆಯಬಹುದು.

6. ಬ್ಯಾಂಕಿನ Website : www.bcbbank.in ರಲ್ಲಿ ಸರ್ವಸದಸ್ಯರ ಸಭೆಯ ಸೂಚನಾ ಪತ್ರ ಮತ್ತು ವಾರ್ಷಿಕ ವರದಿ ಮತ್ತು ಆಡಿಟ್ ವರದಿಯನ್ನು ವೀಕ್ಷಿಸಬಹುದು.

7. ಬ್ಯಾಂಕಿನ ಕಾರ್ಯವ್ಯಾಪ್ತಿಯ ಹೊರಗೆ ವಾಸಿಸುತ್ತಿರುವಂತಹ ಸದಸ್ಯರುಗಳು ಯಾವುದೆ ರೀತಿಯ ಸಾಲ ಸೌಲಭ್ಯಗಳನ್ನು ಬ್ಯಾಂಕಿನಿಂದ ಪಡೆಯಲು ಅರ್ಹರಾಗಿರುವುದಿಲ್ಲ. ಆದುದರಿಂದ ಅಂತಹ ಸದಸ್ಯರುಗಳು ತಮ್ಮ ಸದಸ್ಯತ್ವವನ್ನು ತಕ್ಷಣ ರದ್ದುಗೊಳಿಸಿಕೊಳ್ಳಲು ಕೋರಲಾಗಿದೆ.

8. ಸಹಸದಸ್ಯತ್ವವನ್ನು ಹೊಂದಿರುವ ಸದಸ್ಯರುಗಳು ರೆಗ್ಯೂಲರ್ ಸದಸ್ಯತ್ವಕ್ಕೆ ಪರಿವರ್ತನೆ ಮಾಡಿಕೊಳ್ಳಲು ಕೋರಲಾಗಿದೆ.

9. ಷೇರು ಸರ್ಟಿಫಿಕೇಟನ್ನು ಪಡೆಯದೆ ಇರುವ ಸದಸ್ಯರು ಆಡಳಿತ ಕಛೇರಿಯಲ್ಲಿ ಷೇರು ಸರ್ಟಿಫಿಕೇಟನ್ನು ಪಡೆಯಬೇಕಾಗಿ ವಿನಂತಿ.

10. ಸದಸ್ಯರುಗಳ ಹಾಗೂ ಸಿಬ್ಬಂದಿ ವರ್ಗದ ಪ್ರತಿಭಾವಂತ ಮಕ್ಕಳಿಗೆ ಉತ್ತೇಜನ ಧನ ಸಹಾಯ ನೀಡುವುದಕ್ಕೆ ಸಂಬಂಧಿಸಿದಂತೆ, 2026–27ನೇ ಸಾಲಿನ ಮೇ–ಜೂನ್ ತಿಂಗಳಿನಲ್ಲಿ ನಡೆದ ಪರೀಕ್ಷೆಯಲ್ಲಿ ಸದಸ್ಯರುಗಳ ಹಾಗೂ ಸಿಬ್ಬಂದಿ ವರ್ಗದ ಮಕ್ಕಳು ಪಿ.ಯು.ಸಿ. 2ನೇ ವರ್ಷದ ಪರೀಕ್ಷೆಯಲ್ಲಿ ಮತ್ತು ಪದವಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಶೇ.85 ಕ್ಕಿಂತ ಹೆಚ್ಚಿಗೆ ಅಂಕ ಪಡೆದಂತಹವರು ಹಾಗೂ ರಾಷ್ಟ್ರ ಮಟ್ಟದ ಕ್ರೀಡಾ ವಿಭಾಗದಲ್ಲಿ ಪ್ರಶಸ್ತಿ ಪಡೆದವರು ಈ ಉತ್ತೇಜನ ಪಡೆಯಲು ಅರ್ಹರಾಗಿದ್ದು ವಾರ್ಷಿಕ ಮಹಾಸಭೆಯ ದಿನಾಂಕಕ್ಕೆ 7 ದಿವಸಗಳ ಮುಂಚಿತವಾಗಿ ಸದಸ್ಯತ್ವದ ದಾಖಲೆ ಹಾಗೂ ಅಂಕಪಟ್ಟಿ ಸಹಿತ ಕಾರ್ಯದರ್ಶಿಯವರಿಗೆ ಅರ್ಜಿ ಸಲ್ಲಿಸಬಹುದು.

11. ಮರಣೋತ್ತರ ಪರಿಹಾರ ನಿಧಿಯನ್ನು ಸದಸ್ಯರು ಮರಣ ಹೊಂದಿದ ಒಂದು ವರ್ಷದೊಳಗಾಗಿ ಅರ್ಜಿ ಸಲ್ಲಿಸಿದರೆ ಮಾತ್ರ ಈ ಪರಿಹಾರ ನಿಧಿಗೆ ವಾರಸುದಾರರು ಅರ್ಹರಾಗಿರುತ್ತಾರೆ.

12. ಸದಸ್ಯರುಗಳ ಠೇವಣಿಗಳ ಮೇಲೆ ನೀಡುವ ಬಡ್ಡಿಗೆ Sec.194A (3) (V) of Income Tax Act 1961 ಪ್ರಕಾರ T.D.S. ನಿಂದ ವಿನಾಯತಿ ಪಡೆಯಲು ಅರ್ಹ ಸದಸ್ಯರು/ಗ್ರಾಹಕರು ಆದಾಯ ತೆರಿಗೆ ಫಾರಂ ನಂ. 121 ನಲ್ಲಿ ಪಾನ್ ಸಂಖ್ಯೆಯನ್ನು ನಮೂದಿಸಿ ಬ್ಯಾಂಕಿನಲ್ಲಿ ಈ ಕೂಡಲೆ ಸಲ್ಲಿಸಲು ಕೋರಲಾಗಿದೆ. ಇದನ್ನು ಸಲ್ಲಿಸದಿದ್ದಲ್ಲಿ ವಾರ್ಷಿಕವಾಗಿ ಸಾಮಾನ್ಯರಿಗೆ ರೂ. 50,000/– ಮತ್ತು ಹಿರಿಯ ನಾಗರೀಕರಿಗೆ ರೂ. 1,00,000/–ಗಳ ಮೇಲ್ಪಟ್ಟು ಪಡೆಯುವ ಬಡ್ಡಿ ಮೇಲೆ ಶೇ.10 ರಂತೆ ಟಿ.ಡಿ.ಎಸ್. ಕಡಿತಗೊಳಿಸಲಾಗುವುದು. ರೂ. 2,50,000/– ವರೆಗಿನ ಬಡ್ಡಿ ಆದಾಯಗಳಿಸುವಂತಹವರು ಮತ್ತು 60 ವರ್ಷ ಮೇಲ್ಪಟ್ಟವರು ರೂ. 3,00,000/– ವರೆಗಿನ ಬಡ್ಡಿ ಆದಾಯಗಳಿಸುವವರು ಫಾರಂ ನಂ. 121 ಸಲ್ಲಿಸುವುದು. ಈ ಬಗ್ಗೆ ಹೆಚ್ಚಿನ ವಿವರಗಳಿಗೆ ಬ್ಯಾಂಕಿನ ಕೇಂದ್ರ ಕಛೇರಿ ಅಥವಾ ಶಾಖೆಗಳಲ್ಲಿ ಸಂಪರ್ಕಿಸಲು ಈ ಮೂಲಕ ವಿನಂತಿಸಲಾಗಿದೆ.

13. ಬ್ಯಾಂಕು IFSC No. ಪಡೆದಿದ್ದು IBKL0008BCB ಆಗಿರುತ್ತದೆ. NEFT/RTGS ಸೌಲಭ್ಯ ಒದಗಿಸುತ್ತಿದೆ ಇದರಿಂದ ಬೇರೆ ಬ್ಯಾಂಕುಗಳ ಖಾತೆಗಳಿಂದ ಹಣವನ್ನು NEFT/RTGS ಮೂಲಕ ತಮ್ಮ ಖಾತೆಗಳಿಗೆ ವರ್ಗಾಯಿಸಬಹುದು ಮತ್ತು ತಮ್ಮ ಖಾತೆಗಳಿಂದ ಬೇರೆ ಬ್ಯಾಂಕುಗಳ ಖಾತೆಗಳಿಗೆ ಸಹ ವರ್ಗಾಯಿಸಬಹುದು. ಬೇರೆ ಬ್ಯಾಂಕುಗಳಲ್ಲಿ ನೆಟ್ ಬ್ಯಾಂಕಿಂಗ್ ಸೌಲಭ್ಯ ಹೊಂದಿದ್ದರೆ ಆ ಖಾತೆಗಳಿಂದ ತಮ್ಮ ಮೊಬೈಲ್ ಫೋನ್ ಮೂಲಕ ತಮ್ಮ ಖಾತೆಗಳಿಗೆ ಹಣವನ್ನು ವರ್ಗಾಯಿಸಬಹುದು. ಈ ಸೌಲಭ್ಯ ಪಡೆಯಲು ವಿನಂತಿ. ಉಳಿತಾಯ/ಚಾಲ್ತಿ ಖಾತೆಗಳಲ್ಲಿನ ವ್ಯವಹಾರಗಳಿಗೆ SMS Alert ಪಡೆಯಲು ಸದಸ್ಯರು ತಮ್ಮ ಮೊಬೈಲ್ ಸಂಖ್ಯೆಯನ್ನು ಸಲ್ಲಿಸಬೇಕಾಗಿ ವಿನಂತಿ.

14. ಸಾಲಗಾರರು ಸಾಲದ ಕಂತುಗಳನ್ನು ಬಡ್ಡಿ ಸಹಿತ ಪ್ರತಿ ತಿಂಗಳು ನಿಗಧಿತ ಅವಧಿಯೊಳಗೆ ಮರುಪಾವತಿ ಮಾಡಿದ್ದಲ್ಲಿ ಪಾವತಿಸಿದ ಬಡ್ಡಿಯಲ್ಲಿ ಶೇ.1 ರಂತೆ ಬಡ್ಡಿ ರಿಯಾಯಿತಿ ನೀಡಲಾಗುವುದು. ಆಯಾ ಹಣಕಾಸು ವರ್ಷ ಪೂರ್ಣಗೊಂಡ ತಕ್ಷಣ ಈ ರಿಯಾಯಿತಿಯನ್ನು ಪಡೆಯಲು ಕೋರಿದೆ.

15. ಭಾರತೀಯ ರಿಸರ್ವ್ ಬ್ಯಾಂಕ್ ನಿಯಮಾನುಸಾರ 10 ವರ್ಷಕ್ಕೂ ಮೇಲ್ಪಟ್ಟ ಚಾಲ್ತಿಯಲ್ಲಿರದ ಎಲ್ಲಾ ತರಹದ ಠೇವಣಿ ಖಾತೆಗಳ ಮೊತ್ತವನ್ನು ಭಾರತೀಯ ರಿಸರ್ವ್ ಬ್ಯಾಂಕ್ DEAF ಖಾತೆಗೆ ವರ್ಗಾಯಿಸಬೇಕಾಗಿದ್ದು, ಸದಸ್ಯರು ಇದನ್ನು ಗಮನಿಸಿ ತಮ್ಮ ಠೇವಣಿ ಖಾತೆಗಳನ್ನು ಚಾಲ್ತಿ ಮಾಡುವಂತೆ ಮನವಿ ಮಾಡಿದೆ.

16.ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿ ಮತ್ತು ಬ್ಯಾಂಕಿನ ಉಪನಿಬಂಧನೆ 20.3ರ ಪ್ರಕಾರ ಎಲ್ಲಾ ಮಾನ್ಯ ಸದಸ್ಯರು ಕೆ.ವೈ.ಸಿ. ದಾಖಲೆಗಳನ್ನು ತಮ್ಮ ಸದಸ್ಯತ್ವ/ಉಳಿತಾಯ/ಚಾಲ್ತಿ ಖಾತೆಗಳಿಗೆ ಕಡ್ಡಾಯವಾಗಿ ಸಲ್ಲಿಸಬೇಕಾಗಿದ್ದು, ಸಲ್ಲಿಸದೆ ಇದ್ದಲ್ಲಿ ತಮ್ಮ ಉಳಿತಾಯ/ಚಾಲ್ತಿ ಖಾತೆಗಳು ನಿಷ್ಕ್ರೀಯ ಖಾತೆಗಳಾಗುತ್ತವೆ ಹಾಗೂ ಸದಸ್ಯತ್ವದ ಖಾತೆಗಳನ್ನು ಅಮಾನತ್ತು ಖಾತೆಗೆ ವರ್ಗಾಯಿಸಲಾಗುವುದು. ಆದುದರಿಂದ ಇದುವರೆವಿಗೂ ಕೆ.ವೈ.ಸಿ. ದಾಖಲೆಗಳನ್ನು ಸಲ್ಲಿಸದೆ ಇರುವ ಮಾನ್ಯ ಸದಸ್ಯರು ತಮ್ಮ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ 2 ಭಾವಚಿತ್ರ, ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ ಜೆರಾಕ್ಸ್ ಪ್ರತಿಗಳನ್ನು ನೀಡಬೇಕಾಗಿ ಕೋರಿದೆ.

17.ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮ 1960ಕ್ಕೆ ಮಾಡಿರುವ ತಿದ್ದುಪಡಿಗಳಿಗನುಸಾರವಾಗಿ ಬ್ಯಾಂಕಿನ ಉಪನಿಬಂಧನೆಗಳಿಗೆ ಸಮಗ್ರ ತಿದ್ದುಪಡಿಯಾಗಿರುವುದರಿಂದ ಮುಂಬರುವ ಬ್ಯಾಂಕಿನ ಸರ್ವಸದಸ್ಯರ ಸಭೆಗಳಲ್ಲಿ ಸುಸ್ತಿದಾರರಲ್ಲದ ಸದಸ್ಯರು ಮತ ಚಲಾಯಿಸಲು ಉಪನಿಬಂಧನೆ 44ರ ರೀತಿ ಈ ಕೆಳಕಂಡ ಅರ್ಹತೆಗಳನ್ನು ನಿಗದಿಪಡಿಸಲಾಗಿದೆ.

1) ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಒಬ್ಬ ಸದಸ್ಯನು ಉಪನಿಬಂಧನೆ 20 ರಲ್ಲಿ ನಿರ್ಧಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು.

ಅ) ಸದಸ್ಯನು ಕನಿಷ್ಠ ಷೇರು ಮೊಬಲಗು ರೂ.500/– ಹೊಂದಿರತಕ್ಕದ್ದು.

ಆ) ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು ರೂ.2,500/– ಅಥವಾ ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನ ಕೋರಿಕೆಯ ಮೊತ್ತ.

ಇ) ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು 2 ಇರತಕ್ಕದ್ದು.

2) ಅ) ಕಳೆದ 5 ವಾರ್ಷಿಕ ಮಹಾಸಭೆಗಳ ಪೈಕಿ ಎರಡು ವಾರ್ಷಿಕ ಮಹಾಸಭೆಗಳಿಗೆ ಹಾಜರಾಗಲು ತಪ್ಪುವ ಸದಸ್ಯರಿಗೆ ಒಂದು ವರ್ಷದ ಅವದಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ.

ಆ) ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಬ್ಯಾಂಕಿನ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಸದಸ್ಯರಿಗೆ ಒಂದು ವರ್ಷದ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ.

ಮೇಲೆ ತಿಳಿಸಿರುವ ಅಂಶಗಳನ್ನು ತಾವು ಗಮನಿಸಿ ತಮ್ಮ ಮೂಲ ಷೇರು ಮೊಬಲಗು ರೂ.500/–ಕ್ಕಿಂತ ಕಡಿಮೆ ಇದ್ದಲ್ಲಿ ವ್ಯತ್ಯಾಸದ ಮೊತ್ತವನ್ನು ತಕ್ಷಣ ಪಾವತಿಸಬೇಕೆಂದು ಹಾಗೂ ಕನಿಷ್ಠ ಸೇವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ಮನವಿ ಮಾಡಿದೆ.

ಇನ್ನೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕೇಂದ್ರ ಕಛೇರಿಯ ಷೇರು ವಿಭಾಗದಲ್ಲಿ ಖುದ್ದಾಗಿ ಅಥವಾ ದೂರವಾಣಿ ಮುಖಾಂತರ ಮಾಹಿತಿ ಪಡೆಯಲು ವಿನಂತಿ.

**ಬ್ಯಾಂಕಿನ ಎಲ್ಲಾ ನಿರ್ದೇಶಕರು ಮೇಲೆ ತಿಳಿಸಿರುವ ಬ್ಯಾಂಕಿನ ಸೇವೆಗಳನ್ನು ಬಳಸಿಕೊಂಡಿರುತ್ತಾರೆ.**

**ಸಭೆಯ ದಿನದಂದು ಬೆಳಿಗ್ಗೆ 9 ರಿಂದ 10 ಘಂಟೆಯವರೆಗೆ ಸದಸ್ಯರಿಗೆ ಉಪಹಾರವನ್ನು ಏರ್ಪಡಿಸಲಾಗಿದೆ.**

# ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ.

ಜಯನಗರ, ಬೆಂಗಳೂರು – 560 011

## ಬೈಲಾ ತಿದ್ದುಪಡಿಗಳು

| ಬೈಲಾ ಸಂಖ್ಯೆ | ಹಾಲಿ ಇರುವ ಬೈಲಾ | ತಿದ್ದುಪಡಿ ಬೈಲಾ | ತಿದ್ದುಪಡಿಗೆ ಕಾರಣ |
|---|---|---|---|
| 4.29 | "ಡೇಲಿಗೇಟ್" ಎಂದರೆ, ಮಹಾಸಭೆಯಲ್ಲಿ ಭಾಗವಹಿಸುವ ಮತ್ತು ಮತಚಲಾಯಿಸುವ ಅಧಿಕಾರದೊಂದಿಗೆ ಇತರ ಸಹಕಾರ ಸಂಘಗಳಲ್ಲಿ ಆ ಸಹಕಾರ ಸಂಘವನ್ನು ಪ್ರತಿನಿಧಿಸಲು ಮತ್ತು ಆತ ಪ್ರತಿನಿಧಿ ಎಂದು ಯಾವುದಕ್ಕೆ ನೇಮಕವಾಗಿರುವನೋ ಆ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಅನುಮೋದಿಸಲು ಅಥವಾ ಬೆಂಬಲಿಸಲು ಮಂಡಳಿಯಿಂದ ನೇಮಕವಾದ ಸಹಕಾರ ಸಂಘದ "ನಿರ್ದೇಶಕ". | 4.29 "ಡೇಲಿಗೇಟ್" ಎಂದರೆ, ಮಹಾಸಭೆಯಲ್ಲಿ ಭಾಗವಹಿಸುವ ಮತ್ತು ಮತಚಲಾಯಿಸುವ ಅಧಿಕಾರದೊಂದಿಗೆ ಇತರ ಸಹಕಾರ ಸಂಘಗಳಲ್ಲಿ ಆ ಸಹಕಾರ ಸಂಘವನ್ನು ಪ್ರತಿನಿಧಿಸಲು ಮತ್ತು ಆತ ಪ್ರತಿನಿಧಿ ಎಂದು ಯಾವುದಕ್ಕೆ ನೇಮಕವಾಗಿರುವನೋ ಆ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಅನುಮೋದಿಸಲು ಅಥವಾ ಬೆಂಬಲಿಸಲು ಮಂಡಳಿಯಿಂದ ನೇಮಕವಾದ ಸಹಕಾರ ಸಂಘದ "ಸದಸ್ಯ". | ಕರ್ನಾಟಕ ಸಹಕಾರ ಕಾಯಿದೆ 1959ರ ತಿದ್ದುಪಡಿಯ ದಿನಾಂಕ : 12.09.2025ರ ಪ್ರಕಾರ |
| 20<br><br>20.1 | **ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು:**<br>(1) ಸದಸ್ಯನು ಹೊಂದಿರತಕ್ಕ ಕನಿಷ್ಠ ಷೇರು ಬಂಡವಾಳವು ಐದು ನೂರು ರೂಪಾಯಿಗಳು;<br>(3) ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು ಎರಡು ಇರತಕ್ಕದ್ದು. | **20. ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು:**<br>**20.1** (1) ಸದಸ್ಯನು ಹೊಂದಿರತಕ್ಕ ಕನಿಷ್ಠ ಷೇರು ಬಂಡವಾಳವು ಒಂದು ಸಾವಿರ ರೂಪಾಯಿಗಳು.<br>(3) ಸದಸ್ಯನು ಕನಿಷ್ಠ ಠೇವಣಿಯೊಂದಿಗೆ ಸಕ್ರಿಯ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆ ಹೊಂದಿರತಕ್ಕದ್ದು. | |
| 44<br><br>44.3 | **ಮತ ನೀಡಿಕೆ :**<br>ಯಾವುದೇ ಸುಸ್ತಿದಾರ ಸದಸ್ಯನಿಗೆ ಮತ ನೀಡುವ ಹಕ್ಕು ಇರತಕ್ಕದ್ದಲ್ಲ. ಸಾಮಾನ್ಯ ಸಭೆಯ/ ಚುನಾವಣೆಯ ದಿನಾಂಕದಿಂದ ಕನಿಷ್ಠ 45 ದಿನಗಳ ಮುಂಚೆ ಬ್ಯಾಂಕಿಗೆ ಬರಬೇಕಿರುವ ಯಾವುದೇ ತರಹದ ಸುಸ್ತಿ ಬಾಕಿಯನ್ನು / ಇನ್ನಾವುದೇ ಬಾಕಿಯನ್ನು ತೀರುವಳಿ ಮಾಡಲು ನೋಟೀಸನ್ನು ಕೊಟ್ಟು ಅಂತಹ ಸದಸ್ಯನು ಸಭಾ/ ಚುನಾವಣಾ ದಿನಾಂಕದಿಂದ ಕನಿಷ್ಠ 21 ದಿನಗಳಿಗೆ ಮುಂಚಿತವಾಗಿ ಅಂತಹ ಬಾಕಿಯನ್ನು ಪಾವತಿ ಮಾಡಲು ತಪ್ಪಿದಲ್ಲಿ, ಅಂತಹ ಬಾಕಿದಾರನು ಸುಸ್ತಿದಾರನೆಂದು ಪರಿಗಣಿಸತಕ್ಕದ್ದು ಮತ್ತು ಅವನಿಗೆ ಓಟು ಮಾಡುವ ಹಕ್ಕು ಇರುವುದಿಲ್ಲ; | **44. ಮತ ನೀಡಿಕೆ :**<br>**44.3** ಯಾವುದೇ ಸುಸ್ತಿದಾರ ಸದಸ್ಯನಿಗೆ ಮತ ನೀಡುವ ಹಕ್ಕು ಇರತಕ್ಕದ್ದಲ್ಲ. ಸಾಮಾನ್ಯ ಸಭೆಯ/ಚುನಾವಣೆಯ ದಿನಾಂಕದಿಂದ ಕನಿಷ್ಠ 30 ದಿನಗಳ ಮುಂಚೆ ಬ್ಯಾಂಕಿಗೆ ಬರಬೇಕಿರುವ ಯಾವುದೇ ತರಹದ ಸುಸ್ತಿ ಬಾಕಿಯನ್ನು / ಇನ್ನಾವುದೇ ಬಾಕಿಯನ್ನು ತೀರುವಳಿ ಮಾಡಲು ನೋಟೀಸನ್ನು ಕೊಟ್ಟು ಅಂತಹ ಸದಸ್ಯನು ಸಭಾ/ ಚುನಾವಣಾ ದಿನಾಂಕದಿಂದ ಕನಿಷ್ಠ 20 ದಿನಗಳಿಗೆ ಮುಂಚಿತವಾಗಿ ಅಂತಹ ಬಾಕಿಯನ್ನು ಪಾವತಿ ಮಾಡಲು ತಪ್ಪಿದಲ್ಲಿ, ಅಂತಹ ಬಾಕಿದಾರನು ಸುಸ್ತಿದಾರನೆಂದು ಪರಿಗಣಿಸತಕ್ಕದ್ದು ಮತ್ತು ಅವನಿಗೆ ಓಟು ಮಾಡುವ ಹಕ್ಕು ಇರುವುದಿಲ್ಲ; | |

| | | | |
|---|---|---|---|
| 48<br>48.1<br>(ಬಿ) | **ಮಂಡಲಿಯ ನಿರ್ದೇಶಕರ ಚುನಾವಣೆ:**<br>ಬ್ಯಾಂಕಿನ ಮಂಡಲಿಯು–<br>ಮರಣ, ರಾಜೀನಾಮೆ, ಅನರ್ಹತೆ ಇತ್ಯಾದಿ ಯಾವುದೇ ಕಾರಣದಿಂದ ಪ್ರತಿನಿಧಿಯ ಅಥವಾ ನಿರ್ದೇಶಕನ ಪದದಲ್ಲಿ ಅಥವಾ ಪದಾಧಿಕಾರಿಗಳ ಪದದಲ್ಲಿ ಆಕಸ್ಮಿಕ ಖಾಲಿ ಸ್ಥಾನ ಉಂಟಾದಲ್ಲಿ, ಆ ಬಗ್ಗೆ ಕೂಡಲೇ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. | **48. ಮಂಡಲಿಯ ನಿರ್ದೇಶಕರ ಚುನಾವಣೆ**<br>**48.1** ಬ್ಯಾಂಕಿನ ಮಂಡಲಿಯು–<br>(ಬಿ) ಅಳಿಸಲಾಗಿದೆ | |
| 48.5 | ಬ್ಯಾಂಕಿನ ಯಾರೇ ಪ್ರತಿನಿಧಿಯ ಅಥವಾ ನಿರ್ದೇಶಕನ ಪದದಲ್ಲಿ ಯಾವುದೇ ಆಕಸ್ಮಿಕ ಖಾಲಿ ಸ್ಥಾನ ಉಂಟಾಗಿರುವ ಬಗ್ಗೆ ಅದಕ್ಕೆ ತಿಳಿವಳಿಕೆ ಕೊಟ್ಟ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಅಂತಹ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವಂತೆ ಆಡಳಿತ ಮಂಡಲಿಯು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. | **48.5 ಅಳಿಸಲಾಗಿದೆ** | |
| 49<br>49.2 | **ಅಧ್ಯಕ್ಷರು ಮತ್ತು ಉಪಾಧ್ಯಕ್ಷರ (ಪದಾಧಿಕಾರಿಗಳ) ಚುನಾವಣೆ:**<br>ಸಾಮಾನ್ಯ ಚುನಾವಣೆಯ ತರುವಾಯ, ಮಂಡಲಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅಧ್ಯಕ್ಷನ ಪದಕ್ಕೆ, ಉಪಾಧ್ಯಕ್ಷನ ಪದಕ್ಕೆ ಮತ್ತು ಇತರ ಯಾವುದೇ ಪದಾಧಿಕಾರಿಯ ಪದಕ್ಕೆ, ಇದ್ದಲ್ಲಿ, ಚುನಾವಣೆಗಳನ್ನು ನಡೆಸುವಂತೆ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕನು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. | **49. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ (ಪದಾಧಿಕಾರಿಗಳ) ಚುನಾವಣೆ :**<br>**49.2** ಮುಖ್ಯಕಾರ್ಯನಿರ್ವಾಹಕನು ಸಾಮಾನ್ಯ ಚುನಾವಣೆಯ ತರುವಾಯ, ಮಂಡಲಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅಧ್ಯಕ್ಷನ ಪದಕ್ಕೆ, ಉಪಾಧ್ಯಕ್ಷನ ಪದಕ್ಕೆ ಮತ್ತು ಇತರ ಯಾವುದೇ ಪದಾಧಿಕಾರಿಯ ಪದಕ್ಕೆ ಚುನಾವಣೆಗಾಗಿ ಮಂಡಲಿಯ ಸಭೆಯನ್ನು ಕರೆಯತಕ್ಕದ್ದು. ಅಧ್ಯಕ್ಷ, ಉಪಾಧ್ಯಕ್ಷನ ಚುನಾವಣೆಗಾಗಿ ಅಭ್ಯರ್ಥಿಯಾಗಿರದ ಸದಸ್ಯರಲ್ಲಿ ಒಬ್ಬರನ್ನು ಅಂಥ ಸಭೆಯ ಅಧ್ಯಕ್ಷತೆ ವಹಿಸುವುದಕ್ಕೆ ಆಯ್ಕೆ ಮಾಡತಕ್ಕದ್ದು. | |
| 49.2(ಅ) | ಬ್ಯಾಂಕಿನ ಆಡಳಿತ ಮಂಡಳಿ ಪದಾಧಿಕಾರಿಗಳೊಬ್ಬರ ವಿರುದ್ಧ ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು, ಸದರಿ ಪದಾಧಿಕಾರಿ ಅಧಿಕಾರ ಸ್ವೀಕರಿಸಿ ಎರಡು ವರ್ಷಗಳಾಗಿರಬೇಕು. | 49.2(ಅ) ಬ್ಯಾಂಕಿನ ಆಡಳಿತ ಮಂಡಳಿ ಪದಾಧಿಕಾರಿಗಳೊಬ್ಬರ ವಿರುದ್ಧ ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು, ಸದರಿ ಪದಾಧಿಕಾರಿ ಅಧಿಕಾರ ಸ್ವೀಕರಿಸಿ ಎರಡು ವರ್ಷಗಳಾಗಿರಬೇಕು. | |

| | | |
|---|---|---|
| (i) | ಬ್ಯಾಂಕಿನ ಆಡಳಿತ ಮಂಡಳಿಯ ಚುನಾಯಿತ ಸದಸ್ಯರಲ್ಲಿ ಮೂರನೇ ಒಂದರಷ್ಟು ಸದಸ್ಯರು ವಿನಂತಿ ಮಾಡದ ಹೊರತು ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು ಬರುವುದಿಲ್ಲ. ಅವಿಶ್ವಾಸ ಗೊತ್ತುವಳಿ ತಲುಪಿದ ಏಳು ದಿನಗಳೊಳಗಾಗಿ ಮುಖ್ಯ ಕಾರ್ಯನಿರ್ವಾಹಕನು ಪ್ರತಿಯನ್ನು ಕಾರ್ಯಕ್ಷೇತ್ರದ ನಿಬಂಧಕರಿಗೆ ತಲುಪಿಸತಕ್ಕದ್ದು. | (i) ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರಲ್ಲಿ ಮೂರನೇ ಒಂದರಷ್ಟು ಸದಸ್ಯರು ವಿನಂತಿ ಮಾಡದ ಹೊರತು ಅವಿಶ್ವಾಸ ನಿರ್ಣಯ ಗೊತ್ತುವಳಿಯನ್ನು ಮಂಡಿಸಲು ಬರುವುದಿಲ್ಲ. ಬ್ಯಾಂಕಿನ ವೃತ್ತಿಪರ ನಿರ್ದೇಶಕ ಅವಿಶ್ವಾಸ ನಿರ್ಣಯದ ಮತದಾನದ ಹಕ್ಕನ್ನು ಹೊಂದಿರತಕ್ಕದ್ದಲ್ಲ. |
| **49.3** | ಬ್ಯಾಂಕಿನ ಯಾರೇ ಪದಾಧಿಕಾರಿಯ ಪದದಲ್ಲಿ ಯಾವುದೇ ಆಕಸ್ಮಿಕ ಖಾಲಿ ಸ್ಥಾನ ಉಂಟಾಗಿರುವ ಬಗ್ಗೆ ಅದಕ್ಕೆ ತಿಳಿವಳಿಕೆ ಕೊಟ್ಟ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ, ಅಂಥ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವಂತೆ ಬ್ಯಾಂಕಿನ ಮಂಡಲಿಯು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. | **49.3** ಅಳಿಸಲಾಗಿದೆ |
| **51** | **ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ನೇಮಕವಾಗಲು ಅಥವಾ ಮುಂದುವರೆಯಲು ಅನರ್ಹತೆ:** ಬ್ಯಾಂಕಿನ ಯಾವುದೇ ಸದಸ್ಯನು ನಿರ್ದೇಶಕ ನಾಗಿ ಚುನಾಯಿತವಾಗಲು ಅಥವಾ ನೇಮಕ ವಾಗಲು ಅಥವಾ ಮುಂದುವರೆಯಲು– | **51 ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ನೇಮಕವಾಗಲು ಅಥವಾ ಮುಂದುವರೆಯಲು ಅನರ್ಹತೆ :** ಬ್ಯಾಂಕಿನ ಯಾವುದೇ ಸದಸ್ಯನು ನಿರ್ದೇಶಕ ನಾಗಿ ಚುನಾಯಿತನಾಗಲು ಅಥವಾ ನೇಮಕ ವಾಗಲು ಅಥವಾ ಮುಂದುವರೆಯಲು – |
| **51.16** | **ಹೊಸದು** | **51.16** ಪ್ರತಿ ಚುನಾಯಿತ ನಿರ್ದೇಶಕನು ನಿಯಮಿಸಬಹುದಾದಂತೆ ತನ್ನ ಪದಾವಧಿಯ ಪ್ರತಿ ಆರ್ಥಿಕ ವರ್ಷದಲ್ಲಿ ತನ್ನ ಮತ್ತು ತನ್ನ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸದಿದ್ದರೆ. (ಈ ಖಂಡದ ಉದ್ದೇಶಕ್ಕಾಗಿ ಕುಟುಂಬ ಅಂದರೆ, ನಿರ್ದೇಶಕ ಮತ್ತು ಅವನ/ಅವಳ ಪತಿ/ ಪತ್ನಿ ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ) |
| **54** | **ಮಂಡಲಿಯ ತೆರವಾದ ಸ್ಥಾನಗಳು :** ಬ್ಯಾಂಕಿನ ಮಂಡಲಿಯ ನಿರ್ದೇಶಕರ ಪದದಲ್ಲಿ ಮರಣ, ರಾಜೀನಾಮೆ, ತೆಗೆದುಹಾಕುವಿಕೆ, ಅನರ್ಹತೆ ಅಥವಾ ಇನ್ನಾವುದೇ ಕಾರಣದಿಂದ ಮಂಡಲಿಯಲ್ಲಿ ಖಾಲಿ ಬೀಳುವ ಸ್ಥಾನಗಳನ್ನು ಕೆಳಗಿನಂತೆ ಭರ್ತಿಮಾಡತಕ್ಕದ್ದು. | **54. ಮಂಡಲಿಯ ತೆರವಾದ ಸ್ಥಾನಗಳು :** ಬ್ಯಾಂಕಿನ ಮಂಡಲಿಯ ನಿರ್ದೇಶಕರ ಪದದಲ್ಲಿ ಮರಣ, ರಾಜೀನಾಮೆ, ತೆಗೆದುಹಾಕುವಿಕೆ, ಅನರ್ಹತೆ ಅಥವಾ ಇನ್ನಾವುದೇ ಕಾರಣದಿಂದ ಮಂಡಲಿಯಲ್ಲಿ ಖಾಲಿ ಬೀಳುವ ಸ್ಥಾನಗಳನ್ನು ಯಾವ ವರ್ಗದ ಸದಸ್ಯರಿಗೆ ಸಂಬಂಧಪಟ್ಟಂತೆ ಸ್ಥಾನವು ಖಾಲಿಯಾಗಿದೆಯೋ ಅದೇ ವರ್ಗದ ಸದಸ್ಯರ ಪೈಕಿ ಸಹಮತದಿಂದ ನಾಮ ನಿರ್ದೇಶನ ಮಾಡುವ ಮೂಲಕ ಮಂಡಲಿಯು ಭರ್ತಿಮಾಡತಕ್ಕದು. |

| | | | |
|---|---|---|---|
| 54.1 | ಮಂಡಲಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಪ್ರಾಧಿಕಾರ ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು. ಪರಂತು ಮಂಡಳಿಯ ಅಂತಹ ಖಾಲಿ ಸ್ಥಾನಕ್ಕಾಗಿ ಚುನಾವಣೆ ನಡೆಯುವವರೆಗೆ, ಉದ್ಭವವಾಗುವ ತಾತ್ಕಾಲಿಕ ಸ್ಥಾನಕ್ಕೆ ಸಂಬಂಧಿಸಿದಂತೆ, ಅದೇ ವರ್ಗದ ಸದಸ್ಯರ ಪೈಕಿ ನಾಮನಿರ್ದೇಶನದ ಮೂಲಕ ಮಂಡಳಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿ ಮಾಡಬಹುದು.<br><br>**54.2** ಮಂಡಲಿಯ ಉಳಿದಿರುವ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಕಡಿಮೆ ಇರುವಲ್ಲಿ ಯಾವ ವರ್ಗದ ಸದಸ್ಯರಿಗೆ ಸಂಬಂಧಪಟ್ಟಂತೆ ಸ್ಥಾನವು ಖಾಲಿಯಾಗಿದೆಯೋ ಅದೇ ವರ್ಗದ ಸದಸ್ಯರ ಪೈಕಿ ಸಹ ಮತದಿಂದ ನಾಮನಿರ್ದೇಶನ ಮಾಡುವ ಮೂಲಕ ಮಂಡಲಿಯಲ್ಲಿನ ಖಾಲಿ ಸ್ಥಾನವನ್ನು ಮಂಡಲಿಯು ಮೂರು ತಿಂಗಳ ಒಳಗಾಗಿ ಭರ್ತಿ ಮಾಡಬಹುದು. | | |
| 58<br><br>58.3<br><br>58.3 ಕೆ) | **ನಿರ್ದೇಶಕ ಮಂಡಳಿಯ ಕರ್ತವ್ಯಗಳು ಮತ್ತು ಅಧಿಕಾರಗಳು:**<br><br>ಪೂರ್ವೋಕ್ತ ಅಧಿಕಾರಗಳ ಸಾಮಾನ್ಯತೆಗೆ ಹಾನಿ ಇಲ್ಲದಂತೆ, ಅಂಥ ಅಧಿಕಾರಗಳು ಮತ್ತು ಕರ್ತವ್ಯಗಳು ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು:–<br><br>ಲೆಕ್ಕ ಪರಿಶೋಧಕನಿಗೆ ಅಗತ್ಯವಾದ ಎಲ್ಲಾ ಮಾಹಿತಿ, ಲೆಕ್ಕಗಳನ್ನು ಮತ್ತು ಪುಸ್ತಕಗಳನ್ನು ಒದಗಿಸಿ ಸಕಾಲದಲ್ಲಿ ಲೆಕ್ಕ ಪರಿಶೋಧನೆಯು ಮುಕ್ತಾಯಗೊಳಿಸಲು ಪೂರ್ಣ ಸಹಕಾರ ಮತ್ತು ನೆರವನ್ನು ನೀಡಿ, ಪ್ರತಿ ವರ್ಷ ಸೆಪ್ಟೆಂಬರ್ 1ನೇ ದಿನದೊಳಗೆ ಹಿಂದಿನ ಸಹಕಾರ ವರ್ಷದ ಲೆಕ್ಕಪತ್ರಗಳ ಪರಿಶೋಧನಾ ವರದಿಯನ್ನು ಪಡೆಯತಕ್ಕದ್ದು; | **58. ನಿರ್ದೇಶಕ ಮಂಡಳಿಯ ಕರ್ತವ್ಯಗಳು ಮತ್ತು ಅಧಿಕಾರಗಳು:**<br><br>**58.3** ಪೂರ್ವೋಕ್ತ ಅಧಿಕಾರಗಳ ಸಾಮಾನ್ಯತೆಗೆ ಹಾನಿ ಇಲ್ಲದಂತೆ, ಅಂಥ ಅಧಿಕಾರಗಳು ಮತ್ತು ಕರ್ತವ್ಯಗಳು ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು:–<br><br>**58.3.ಕೆ)** ಲೆಕ್ಕ ಪರಿಶೋಧಕನಿಗೆ ಅಗತ್ಯವಾದ ಎಲ್ಲಾ ಮಾಹಿತಿ, ಲೆಕ್ಕಗಳನ್ನು ಮತ್ತು ಪುಸ್ತಕಗಳನ್ನು ಒದಗಿಸಿ ಸಕಾಲದಲ್ಲಿ ಲೆಕ್ಕ ಪರಿಶೋಧನೆಯು ಮುಕ್ತಾಯಗೊಳಿಸಲು ಪೂರ್ಣ ಸಹಕಾರ ಮತ್ತು ನೆರವನ್ನು ನೀಡಿ, ಪ್ರತಿ ವರ್ಷ ಜೂನ್ 30ನೇ ದಿನದೊಳಗೆ ಹಿಂದಿನ ಸಹಕಾರ ವರ್ಷದ ಲೆಕ್ಕಪತ್ರಗಳ ಪರಿಶೋಧನಾ ವರದಿಯನ್ನು ಪಡೆಯತಕ್ಕದ್ದು; | |

| | | | |
|---|---|---|---|
| **58.3 ಎಪಿ)** | ಮಂಡಲಿಯ ಉಳಿದ ಅವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಕಡಿಮೆ ಇದ್ದಾಗ, ಮಂಡಲಿಯಲ್ಲಿ ಯಾವುದೇ ಕಾರಣ ದಿಂದ ಉದ್ಭವವಾಗುವ ಆಕಸ್ಮಿಕ ಖಾಲಿ ಸ್ಥಾನಗಳನ್ನು ಅಭಿಮತದಿಂದ ಸೇರಿಸಿ ಕೊಳ್ಳುವ (ಕೋ–ಆಪ್ಷನ್) ಮೂಲಕ ಭರ್ತಿ ಮಾಡುವುದು. | **58.3 ಎಪಿ)** ಮಂಡಲಿಯ ಯಾವುದೇ ಕಾರಣದಿಂದ ಉದ್ಭವವಾಗುವ ಆಕಸ್ಮಿಕ ಖಾಲಿ ಸ್ಥಾನಗಳನ್ನು ಅಭಿಮತದಿಂದ ಸೇರಿಸಿಕೊಳ್ಳುವ (ಕೋ–ಆಪ್ಷನ್) ಮೂಲಕ ಭರ್ತಿ ಮಾಡುವುದು. | |
| **58.3 ಬಿಹೆಚ್‌ಸಿ)** | ಹೊಸದು | **58.3 ಬಿಹೆಚ್‌ಸಿ)** ಪ್ರತಿ ಚುನಾಯಿತ ನಿರ್ದೇಶಕನು ನಿಯಮಿಸಬಹುದಾದಂತೆ ತನ್ನ ಪದಾವಧಿಯ ಪ್ರತಿ ಆರ್ಥಿಕ ವರ್ಷದಲ್ಲಿ ತನ್ನ ಮತ್ತು ತನ್ನ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸ ತಕ್ಕದ್ದು. | |
| **61** | **ನಿರ್ದೇಶಕನ ಕರ್ತವ್ಯಗಳು, ಅಧಿಕಾರಗಳು ಮತ್ತು ಪ್ರಕಾರ್ಯಗಳು :** | **61. ನಿರ್ದೇಶಕನ ಕರ್ತವ್ಯಗಳು, ಅಧಿಕಾರಗಳು ಮತ್ತು ಪ್ರಕಾರ್ಯಗಳು:** | |
| **61.1** | ಬ್ಯಾಂಕಿನ ಪ್ರತಿಯೊಬ್ಬ ನಿರ್ದೇಶಕನು– | **61.1** ಬ್ಯಾಂಕಿನ ಪ್ರತಿಯೊಬ್ಬ ನಿರ್ದೇಶಕನು– | |
| **61.1 xii)** | ಹೊಸದು | **61.1 xii)** ಪ್ರತಿ ಚುನಾಯಿತ ನಿರ್ದೇಶಕನು ನಿಯಮಿಸಬಹುದಾದಂತೆ ತನ್ನ ಪದಾವಧಿಯ ಪ್ರತಿ ಆರ್ಥಿಕ ವರ್ಷದಲ್ಲಿ ತನ್ನ ಮತ್ತು ತನ್ನ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸತಕ್ಕದ್ದು. ಈ ಖಂಡದ ಉದ್ದೇಶಕ್ಕಾಗಿ ಕುಟುಂಬ ಅಂದರೆ, ನಿರ್ದೇಶಕ ಮತ್ತು ಅವನ/ ಅವಳ ಪತಿ/ಪತ್ನಿ ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ. | |
| **62** | **ಮುಖ್ಯ ಕಾರ್ಯನಿರ್ವಾಹಕನ ಕರ್ತವ್ಯಗಳು ಮತ್ತು ಅಧಿಕಾರಗಳು:** ಮಂಡಳಿಯು ಮುಖ್ಯ ಕಾರ್ಯನಿರ್ವಾಹಕನಿಗೆ ಕಾಲಕಾಲಕ್ಕೆ ಒಪ್ಪಿಸಿಕೊಟ್ಟ/ನೀಡಿದ ಅಧಿಕಾರಿಗಳ ಜೊತೆಗೆ ಈ ಕೆಳಗಿನ ಕರ್ತವ್ಯಗಳೂ ಸೇರತಕ್ಕದ್ದು; ಅವನು; | **62. ಮುಖ್ಯ ಕಾರ್ಯನಿರ್ವಾಹಕನ ಕರ್ತವ್ಯಗಳು ಮತ್ತು ಅಧಿಕಾರಗಳು:** ಮಂಡಳಿಯು ಮುಖ್ಯ ಕಾರ್ಯನಿರ್ವಾಹಕನಿಗೆ ಕಾಲಕಾಲಕ್ಕೆ ಒಪ್ಪಿಸಿಕೊಟ್ಟ/ ನೀಡಿದ ಅಧಿಕಾರಿಗಳ ಜೊತೆಗೆ ಈ ಕೆಳಗಿನ ಕರ್ತವ್ಯಗಳೂ ಸೇರತಕ್ಕದ್ದು; ಅವನು; | |
| **62. (12)** | ಸಾಮಾನ್ಯ ಚುನಾವಣೆ ಆಗಿ ಮಂಡಲಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗೆ, ಸಹಕಾರ ಚುನಾವಣಾ ಆಯೋಗವು ನಿಗದಿಪಡಿಸಿದಂತೆ, ಪದಾಧಿಕಾರಿ ಗಳ ಚುನಾವಣೆಗಾಗಿ ಮಂಡಲಿಯ ಸಭೆಯನ್ನು ಕರೆಯತಕ್ಕದ್ದು. | **62. (12)** ಸಾಮಾನ್ಯ ಚುನಾವಣೆ ಆಗಿ ಮಂಡಲಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗೆ ಪದಾಧಿಕಾರಿಗಳ ಚುನಾವಣೆಗಾಗಿ ಮಂಡಲಿಯ ಸಭೆಯನ್ನು ಕರೆಯತಕ್ಕದ್ದು. | |
| **62.(49)** | ಹೊಸದು | **62. (49)** ಮುಖ್ಯ ಕಾರ್ಯನಿರ್ವಾಹಕನು ನಿಯಮಿಸ ಬಹುದಾದಂತೆ ತನ್ನ ಪದಾವಧಿಯ ಪ್ರತಿ ಆರ್ಥಿಕ ವರ್ಷದಲ್ಲಿ | |

| | | | |
|---|---|---|---|
| | | ತನ್ನ ಮತ್ತು ತನ್ನ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸತಕ್ಕದ್ದು. ಈ ಖಂಡದ ಉದ್ದೇಶಕ್ಕಾಗಿ ಕುಟುಂಬ ಅಂದರೆ, ಮುಖ್ಯ ಕಾರ್ಯ ನಿರ್ವಾಹಕ ಮತ್ತು ಅವನ/ಅವಳ ಪತಿ/ಪತ್ನಿ ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ. | |
| **96** | **ಲೆಕ್ಕಪರಿಶೋಧನೆ, ಆಸ್ತಿ ಜವಾಬ್ದಾರಿ ಪಟ್ಟಿ ಮತ್ತು ಇತರೆ ಆರ್ಥಿಕ ಪಟ್ಟಿಗಳು :** | **96. ಲೆಕ್ಕಪರಿಶೋಧನೆ, ಆಸ್ತಿ ಜವಾಬ್ದಾರಿ ಪಟ್ಟಿ ಮತ್ತು ಇತರೆ ಆರ್ಥಿಕ ಪಟ್ಟಿಗಳು:** | |
| **96.3** | ಆಸ್ತಿ ಜವಾಬ್ದಾರಿ ಪಟ್ಟಿ ಮತ್ತು ಲಾಭ ನಷ್ಟದ ಪಟ್ಟಿಯನ್ನು ಲೆಕ್ಕಪರಿಶೋಧಕರ ವರದಿ ಯೊಂದಿಗೆ ಸಾಲಾಖೈರಿನ 6 ತಿಂಗಳೊಳಗಾಗಿ ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿ ಪ್ರಸಾರದಲ್ಲಿರುವ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು. ಹಾಗೆ 6 ತಿಂಗಳೊಳಗಾಗಿ ಪ್ರಕಟಿಸಲು ಸಾಧ್ಯ ವಾಗದಿದ್ದಲ್ಲಿ 3 ತಿಂಗಳ ಕಾಲಾವಕಾಶವನ್ನು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಪಡೆಯತಕ್ಕದ್ದು. | **96.3** ಆಸ್ತಿ ಜವಾಬ್ದಾರಿ ಪಟ್ಟಿ, ಲಾಭ ನಷ್ಟ ಪಟ್ಟಿ ಮತ್ತು ಇತರ ಆರ್ಥಿಕ ಪಟ್ಟಿಗಳನ್ನು ಲೆಕ್ಕಪರಿಶೋಧಕರ ವರದಿಯೊಂದಿಗೆ ಸಾಲಾಖೈರಿನ 3 ತಿಂಗಳೊಳಗಾಗಿ ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿ ಪ್ರಸಾರದಲ್ಲಿರುವ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು. ಹಾಗೆ 3 ತಿಂಗಳೊಳಗಾಗಿ ಪ್ರಕಟಿಸಲು ಸಾಧ್ಯವಾಗದಿದ್ದಲ್ಲಿ 3 ತಿಂಗಳ ಕಾಲಾವಕಾಶವನ್ನು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಪಡೆಯತಕ್ಕದ್ದು. | |
| **96.4 (1)** | ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕನು ಲೆಕ್ಕಪತ್ರಗಳನ್ನು, ಪುಸ್ತಕಗಳನ್ನು ಲೆಕ್ಕಗಳನ್ನು, ದಸ್ತಾವೇಜುಗಳನ್ನು ಮತ್ತು ಇತರೆ ದಾಖಲೆಗಳನ್ನು ದೈನಂದಿನ ಆಧಾರದ ಮೇಲೆ ನಿಯತವಾಗಿ ನಿರ್ವಹಿಸತಕ್ಕದ್ದು ಮತ್ತು ಇಂದೀಕರಿಸತಕ್ಕದ್ದು ಹಾಗೂ ಅಂಥಹ ಲೆಕ್ಕಪತ್ರಗಳನ್ನು ಹಿಂದಿನ ಸಹಕಾರ ವರ್ಷದಲ್ಲಿದ್ದಂತೆ ಆಸ್ತಿ ಹೊಣೆಪಟ್ಟಿ, ಷೆಡ್ಯೂಲುಗಳನ್ನು ಮತ್ತು ಇತರೆ ತಃಖ್ತೆಗಳನ್ನು ಒಳಗೊಂಡ ಆರ್ಥಿಕ ತಃಖ್ತೆಗಳ ಸಹಿತ ಪ್ರತಿ ವರ್ಷ ಏಪ್ರಿಲ್ ತಿಂಗಳ ಅಂತ್ಯದೊಳಗೆ ಲೆಕ್ಕಪರಿಶೋಧಕನ ಮುಂದೆ ಹಾಜರು ಪಡಿಸಲು ವ್ಯವಸ್ಥೆ ಮಾಡತಕ್ಕದ್ದು, ಪ್ರತಿ ವರ್ಷ ಸಹಕಾರ ಲೆಕ್ಕಪರಿಶೋಧಕ ನಿರ್ದೇಶಕನು ಪ್ರಕಟಿಸುವ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧನಾ ಫರ್ಮುಗಳ ತಂಡದ ಪಟ್ಟಿಯಿಂದ ಬ್ಯಾಂಕಿನ ಸಾಮಾನ್ಯ ಸಭೆಯಿಂದ ನೇಮಕವಾದ ಲೆಕ್ಕಪರಿಶೋಧಕನು ಲೆಕ್ಕ ಪತ್ರಗಳನ್ನು ಪರಿಶೋಧಿಸತಕ್ಕದ್ದು. | **96.4(1)** ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಾಹಕನು ಲೆಕ್ಕಪತ್ರಗಳನ್ನು, ಪುಸ್ತಕಗಳನ್ನು, ಲೆಕ್ಕಗಳನ್ನು ದಸ್ತಾವೇಜುಗಳನ್ನು ಮತ್ತು ಇತರೆ ದಾಖಲೆಗಳನ್ನು ದೈನಂದಿನ ಆಧಾರದ ಮೇಲೆ ನಿಯತವಾಗಿ ನಿರ್ವಹಿಸತಕ್ಕದ್ದು ಮತ್ತು ಇಂದೀಕರಿಸತಕ್ಕದ್ದು ಹಾಗೂ ಅಂಥಹ ಲೆಕ್ಕಪತ್ರಗಳನ್ನು ಹಿಂದಿನ ಸಹಕಾರ ವರ್ಷದಲ್ಲಿದ್ದಂತೆ ಆಸ್ತಿ ಹೊಣೆ ಪಟ್ಟಿ, ಷೆಡ್ಯೂಲುಗಳನ್ನು ಮತ್ತು ಇತರೆ ತಃಖ್ತೆಗಳನ್ನು ಒಳಗೊಂಡ ಆರ್ಥಿಕ ತಃಖ್ತೆಗಳ ಸಹಿತ ಪ್ರತಿ ವರ್ಷ ಏಪ್ರಿಲ್ ತಿಂಗಳ ಅಂತ್ಯದೊಳಗೆ ಲೆಕ್ಕಪರಿಶೋಧಕನ ಮುಂದೆ ಹಾಜರು ಪಡಿಸಲು ವ್ಯವಸ್ಥೆ ಮಾಡತಕ್ಕದ್ದು. ಪ್ರತಿ ವರ್ಷ ಭಾರತೀಯ ರಿಸರ್ವ್ ಬ್ಯಾಂಕು ಅನುಮೋದಿಸಿ ಬ್ಯಾಂಕಿನ ಸಾಮಾನ್ಯ ಸಭೆಯಿಂದ ನೇಮಕವಾದ ಲೆಕ್ಕಪರಿಶೋಧಕನು ಲೆಕ್ಕಪತ್ರಗಳನ್ನು ಪರಿಶೋಧಿಸತಕ್ಕದ್ದು. | |

| | | | |
|---|---|---|---|
| **96.4 (2)** | ಬ್ಯಾಂಕಿನ ಸಾಮಾನ್ಯ ಸಭೆಯು ಲೆಕ್ಕ ಪರಿಶೋಧನಾ ಸೇವೆಗಳಿಗೆ ಕೊಡಬಹುದಾದ ಸಂಭಾವನೆಯನ್ನು ಬ್ಯಾಂಕಿನ ದುಡಿಯುವ ಬಂಡವಾಳ ಮತ್ತು ವ್ಯವಹಾರವನ್ನು ಆಧಾರಿಸಿ ಮತ್ತು ಲೆಕ್ಕಪರಿಶೋಧನಾ ನಿರ್ದೇಶಕರು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳ ಪ್ರಕಾರ ನಿರ್ಧರಿಸತಕ್ಕದ್ದು.<br><br>ಹಿಂದಿನ ವರ್ಷದ ಲೆಕ್ಕಪರಿಶೋಧನಾ ವರದಿಯನ್ನು ಪ್ರತಿ ವರ್ಷ ಸೆಪ್ಟೆಂಬರ್ 1ನೇ ತಾರೀಖಿನೊಳಗೆ ಪಡೆಯತಕ್ಕದ್ದು ಮತ್ತು ಅದರಲ್ಲಿ ತಿಳಿಸಿರುವ ಲೋಪ ದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ಸರಿಪಡಿಸಲು ತೆಗೆದುಕೊಂಡ ಕ್ರಮವನ್ನುಳ್ಳ ಮಂಡಲಿಯ ಅನುಪಾಲನಾ ವರದಿ ಸಹಿತ ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳ 25ನೇ ದಿನದೊಳಗೆ ನಡೆಯುವ ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸತಕ್ಕದ್ದು. | **96.4 (2)** ಬ್ಯಾಂಕಿನ ಸಾಮಾನ್ಯ ಸಭೆಯು ಲೆಕ್ಕಪರಿಶೋಧನಾ ನಿರ್ದೇಶಕನಿಂದ ಕಾಲ ಕಾಲಕ್ಕೆ ಹೊರಡಿಸಲಾದ ಮಾರ್ಗ ಸೂಚಿಗಳ ನುಸಾರವಾಗಿ ಲೆಕ್ಕಪರಿಶೋಧಕನ ಸೇವೆಗಳಿಗೆ ನೀಡಬಹುದಾದ ಸಂಭಾವನೆಯುನ್ನು ನಿರ್ಧರಿಸತಕ್ಕದ್ದು.<br><br>**96.4 (3)** ಹಿಂದಿನ ವರ್ಷದ ಲೆಕ್ಕ ಪರಿಶೋಧನಾ ವರದಿಯನ್ನು ಪ್ರತಿ ವರ್ಷ ಜೂನ್ 30ನೇ ತಾರೀಖಿನೊಳಗೆ ಪಡೆಯ ತಕ್ಕದ್ದು ಮತ್ತು ಅದರಲ್ಲಿ ತಿಳಿಸಿರುವ ಲೋಪ ದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ಸರಿಪಡಿಸಲು ತೆಗೆದುಕೊಂಡ ಕ್ರಮವನ್ನುಳ್ಳ ಮಂಡಲಿಯ ಅನುಪಾಲನಾ ವರದಿ ಸಹಿತ ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳ 25ನೇ ದಿನದೊಳಗೆ ನಡೆಯುವ ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸತಕ್ಕದ್ದು. | |
| **96.4 (3)** | | | |
| **46** | **ನಿರ್ದೇಶಕ ಮಂಡಳಿಯ ರಚನೆ :**<br>ಬ್ಯಾಂಕಿನ ವ್ಯವಸ್ಥಾಪನೆಯ ಅಧಿಕಾರವು ಕಾಯ್ದೆ, ನಿಯಮ ಮತ್ತು ಉಪವಿಧಿಗಳಿಗೆ ಅನುಗುಣವಾಗಿ ರಚಿಸಲಾದ 18 ಜನ ನಿರ್ದೇಶಕರನ್ನೊಳಗೊಂಡ ಮಂಡಳಿ ಇರತಕ್ಕದ್ದು. ಇವುಗಳಲ್ಲಿ ಒಂದು ಸ್ಥಾನವನ್ನು ಪರಿಶಿಷ್ಠ ಜಾತಿಗೆ ಸೇರಿದ ಸದಸ್ಯರಿಗೆ, ಒಂದು ಸ್ಥಾನವನ್ನು ಪರಿಶಿಷ್ಠ ವರ್ಗಗಳಿಗೆ ಸೇರಿದ ಸದಸ್ಯರಿಗೆ, ಎರಡು ಸ್ಥಾನಗಳನ್ನು ಮಹಿಳಾ ವರ್ಗದ ಸದಸ್ಯರಿಗೆ ಮತ್ತು ಎರಡು ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಸೇರಿದ ಸದಸ್ಯರಿಗೆ ಮೀಸಲಿರತಕ್ಕದ್ದು | **46. ನಿರ್ದೇಶಕ ಮಂಡಳಿಯ ರಚನೆ :**<br>ಬ್ಯಾಂಕಿನ ವ್ಯವಸ್ಥಾಪನೆಯ ಅಧಿಕಾರವು ಕಾಯ್ದೆ, ನಿಯಮ ಮತ್ತು ಉಪವಿಧಿಗಳಿಗೆ ಅನುಗುಣವಾಗಿ ರಚಿಸಲಾದ 15 ಜನ ನಿರ್ದೇಶಕರನ್ನೊಳಗೊಂಡ ಮಂಡಳಿ ಇರತಕ್ಕದ್ದು. ಇವುಗಳಲ್ಲಿ ಒಂದು ಸ್ಥಾನವನ್ನು ಪರಿಶಿಷ್ಠ ಜಾತಿಗೆ ಸೇರಿದ ಸದಸ್ಯರಿಗೆ, ಒಂದು ಸ್ಥಾನವನ್ನು ಪರಿಶಿಷ್ಠ ವರ್ಗಗಳಿಗೆ ಸೇರಿದ ಸದಸ್ಯರಿಗೆ, ಎರಡು ಸ್ಥಾನಗಳನ್ನು ಮಹಿಳಾ ವರ್ಗದ ಸದಸ್ಯರಿಗೆ ಮತ್ತು ಎರಡು ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಸೇರಿದ ಸದಸ್ಯರಿಗೆ ಮೀಸಲಿರತಕ್ಕದ್ದು | ದಿನಾಂಕ : 14.08.2026ರ ವಿಶೇಷ ಆಡಳಿತ ಮಂಡಳಿ ಸಭೆಯ ತೀರ್ಮಾನ ದಂತೆ |

# ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ.

**ಆಡಳಿತ ಕಛೇರಿ :** ನಂ.30, 15ನೇ ಅಡ್ಡ ರಸ್ತೆ, 3ನೇ ಬ್ಲಾಕ್,
ಜಯನಗರ, ಬೆಂಗಳೂರು–560 011

**********************

## 51ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡಾವಳಿಗಳು

ದಿನಾಂಕ : 14.09.2025 ನೇ ಭಾನುವಾರ ಬೆಳಿಗ್ಗೆ 10 ಘಂಟೆಗೆ ಶ್ರೀ ಕೆ.ಆರ್. ಮರುದೇವಗೌಡ ರಂಗಮಂದಿರ, ಭಾರತ್ ವಿದ್ಯಾಸಂಸ್ಥೆ ಆವರಣ, 16ನೇ ಮುಖ್ಯರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು–560 011. ಇಲ್ಲಿ ಭೌತಿಕ ವಾರ್ಷಿಕ ಮಹಾಸಭೆಯ ಮೂಲಕ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎಸ್.ಸುಧಾಕರ್‌ರವರ ಸಭಾಧ್ಯಕ್ಷತೆಯಲ್ಲಿ ನಡೆದ 51ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡಾವಳಿಗಳು.

ಭೌತಿಕ ವಾರ್ಷಿಕ ಮಹಾಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ : 3536

**ಪ್ರಾರ್ಥನೆ :**

ಶ್ರೀಮತಿ ಬಿ.ಸಿ. ಮೈಥಿಲಿರವರಿಂದ ಪ್ರಥಮ ಪೂಜಿತ ಗಣೇಶನ ಪ್ರಾರ್ಥನೆಯೊಂದಿಗೆ ಸಭೆಯನ್ನು ವಿದ್ಯುಕ್ತವಾಗಿ ಆರಂಭಿಸಲಾಯಿತು. ರಾಷ್ಟ್ರಕವಿ ಕುವೆಂಪು ವಿರಚಿತ ನಾಡಗೀತೆಯನ್ನು ಕುಮಾರಿಯರಾದ ಅಕ್ಷತಾ, ಮೋನಿಷಾ, ಮೋನಿಕಾ ಹಾಗೂ ಪುಷ್ಪಲತಾರವರ ಗಾಯನದ ಮೂಲಕ ನಾಡಿಗೆ ಗೌರವ ಸಲ್ಲಿಸಲಾಯಿತು.

**ವಿಷಯ 1 : ಸರ್ವಸದಸ್ಯರ ಸಭೆಯ ಸೂಚನೆಯನ್ನು ಓದಿ ದಾಖಲು ಮಾಡುವುದು :**

ಬ್ಯಾಂಕಿನ ಪ್ರಭಾರ ಕಾರ್ಯದರ್ಶಿಗಳಾದ ಶ್ರೀ ಜಿ. ವೆಂಕಟೇಶ್ ರವರು 2024–2025ನೇ ಸಾಲಿನ 51ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ಸಭೆಯಲ್ಲಿ ಓದಿದರು. ಇದನ್ನು ದಾಖಲು ಮಾಡಲು ಒಪ್ಪಿಗೆ ಸೂಚಿಸಬೇಕೆಂದು ಸಭಾಧ್ಯಕ್ಷರು ಕೋರಿದರು.

ಸೂಚನಾ ಪತ್ರವನ್ನು ದಾಖಲು ಮಾಡಬಹುದೆಂದು ಸದಸ್ಯರಾದ ಶ್ರೀ ನಿರಂಜನ್‌ರವರು ಸೂಚಿಸಿದರು. ಸದಸ್ಯರಾದ ಶ್ರೀ ಮುನಿಯಪ್ಪರವರು ಅನುಮೋದಿಸಿದರು. ನಂತರ ಸಭೆಯು ಸೂಚನಾ ಪತ್ರವನ್ನು ಓದಿ ದಾಖಲು ಮಾಡಲು ತನ್ನ ಒಪ್ಪಿಗೆ ನೀಡಿತು. ದಾಖಲು ಮಾಡಲಾಯಿತು.

**ಗತಿಸಿದ ಸದಸ್ಯರುಗಳಿಗೆ ಶ್ರದ್ಧಾಂಜಲಿ ಸಮರ್ಪಣೆ :**

2024–25ನೇ ವರದಿ ಸಾಲಿನಲ್ಲಿ ಒಟ್ಟು 175 ಸದಸ್ಯರು ದೈವಾಧೀನರಾಗಿರುತ್ತಾರೆ. ಅವರುಗಳ ಆತ್ಮಕ್ಕೆ ಶಾಂತಿ ಕೋರಿ ಅವರ ಕುಟುಂಬ ವರ್ಗಕ್ಕೆ ಸಂತಾಪ ಸೂಚಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ ಎಂದು ಸಭಾಧ್ಯಕ್ಷರು ಸಭೆಗೆ ತಿಳಿಸಿದರು. ದೈವಾಧೀನರಾದ 175 ಸದಸ್ಯರುಗಳ

ಹೆಸರನ್ನು ಸಭೆಯಲ್ಲಿ ಓದಲಾಯಿತು. ಸಭೆಯು ಎದ್ದು ನಿಂತು ಎರಡು ನಿಮಿಷಗಳ ಕಾಲ ಮೌನವನ್ನು ಆಚರಿಸಿ ಅಗಲಿದ ಸದಸ್ಯರುಗಳಿಗೆ ಶ್ರದ್ಧಾಂಜಲಿ ಸಮರ್ಪಿಸಿತು.

**ಸ್ವಾಗತ ಭಾಷಣ :**

ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕಿನ 2024–2025ನೇ ಸಾಲಿನ 51ನೇ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿರುವ ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೆ ಬ್ಯಾಂಕಿನ ಆಡಳಿತ ಮಂಡಳಿ ಪರವಾಗಿ ಮತ್ತು ವೈಯಕ್ತಿಕವಾಗಿ ಹೃತ್ಪೂರ್ವಕ ಸ್ವಾಗತವನ್ನು ಕೋರಿದರು.

ಮಾನ್ಯ ಸಹಕಾರಿ ಬಂಧುಗಳೆ.

ದಿನಾಂಕ 21–08–1974ರಂದು ಸಹಕಾರ ರತ್ನ ದಿವಂಗತ ಸನ್ಮಾನ್ಯ ಶ್ರೀ ಬಿ. ಎಲ್. ಲಕ್ಕೇಗೌಡರಿಂದ ಸ್ಥಾಪಿತವಾಗಿ ದಿನಾಂಕ 03–01–1975ರಲ್ಲಿ ವ್ಯವಹಾರಗಳನ್ನು ನಡೆಸಲು ಭಾರತೀಯ ರಿಸರ್ವ ಬ್ಯಾಂಕ್‌ನಿಂದ ಅನುಮತಿ ಪಡೆದು ದಿನಾಂಕ 27–03–1975ರಲ್ಲಿ ಬ್ಯಾಂಕಿಂಗ್ ವ್ಯವಹಾರಗಳನ್ನು ಪ್ರಾರಂಭಿಸಿ ಬ್ಯಾಂಕು 50 ವರ್ಷಗಳನ್ನು ಪೂರೈಸಿ 51ನೇ ವರ್ಷಕ್ಕೆ ಕಾಲಿಟ್ಟಿದೆ. ಬ್ಯಾಂಕಿನ ಹುಟ್ಟು ಮತ್ತು ಬೆಳವಣಿಗೆಗೆ ಕಾರಣಕರ್ತರಾದ ಸಂಸ್ಥಾಪಕರಾದ ಸಹಕಾರ ರತ್ನ ಶ್ರೀ ಬಿ. ಎಲ್. ಲಕ್ಕೇಗೌಡರು ಭಾರತ್ ಸಮೂಹ ಸಂಸ್ಥೆಗಳನ್ನು ಸ್ಥಾಪಿಸಿ, ಸಹಕಾರ, ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅವಿಸ್ಮರಣೀಯ ಸೇವೆಯನ್ನು ಸಲ್ಲಿಸಿರುತಾರೆ. ಈ ಸಂದರ್ಭದಲ್ಲಿ ಸಂಸ್ಥಾಪಕರನ್ನು ಸ್ಮರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ.

ದಿನಾಂಕ 31.03.2025ರ ಅಂತ್ಯಕ್ಕೆ ಬ್ಯಾಂಕಿನ ಒಟ್ಟು ವ್ಯವಹಾರಗಳು ರೂ. 49087 ಲಕ್ಷಗಳು. ಠೇವಣಿಗಳು ರೂ. 31549 ಲಕ್ಷಗಳು. ಸಾಲ ಮತ್ತು ಮುಂಗಡಗಳು ರೂ. 17538 ಲಕ್ಷಗಳು. ಹೂಡಿಕೆಗಳು ರೂ. 17721 ಲಕ್ಷಗಳು ಮತ್ತು ದುಡಿಯುವ ಬಂಡವಾಳ ರೂ. 39272 ಲಕ್ಷಗಳಾಗಿರುತ್ತದೆ.

ಬ್ಯಾಂಕು 2024–25ನೇ ಸಾಲಿನಲ್ಲಿ ರೂ. 114 ಲಕ್ಷಗಳ ಲಾಭ ಗಳಿಸಿದ್ದು, ಎಲ್ಲಾ ಅವಕಾಶ ಮಾಡಿದ ನಂತರ ರೂ. 63 ಲಕ್ಷಗಳ ನಿವ್ವಳ ಲಾಭಗಳಿಸಿರುತ್ತದೆ.

ದಿನಾಂಕ 31.03.2025ರ ಅಂತ್ಯಕ್ಕೆ ಒಟ್ಟು ಎನ್.ಪಿ.ಎ. ಪ್ರಮಾಣ ಶೇ. 18.12 ಮತ್ತು ನಿವ್ವಳ ಎನ್.ಪಿ.ಎ. ಪ್ರಮಾಣ ಶೇ.9.54 ರಷ್ಟಿರುತ್ತದೆ. ನಿವ್ವಳ ಎನ್.ಪಿ.ಎ. ಪ್ರಮಾಣವನ್ನು ಆರ್.ಬಿ.ಐ. ನಿಗಧಿಪಡಿಸಿರುವ ಶೇ. 6ರ ಮಿತಿಯೊಳಗೆ ತರಲು ಸುಸ್ತಿ ಸಾಲದ ವಸೂಲಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕಿನವರು 2021–22ನೇ ಸಾಲಿನಲ್ಲಿ ಬ್ಯಾಂಕನ್ನು SAF ಗೆ ವರ್ಗೀಕರಿಸಿ ಹಲವು ನಿರ್ಬಂಧಗಳನ್ನು ವಿಧಿಸಿದ್ದರಿಂದ ಹೆಚ್ಚಿನ ಸಾಲ ಮತ್ತು ಮುಂಗಡಗಳನ್ನು ನೀಡಲು ಸಾಧ್ಯವಾಗಿರುವುದಿಲ್ಲ. ಇದರಿಂದಾಗಿ ಸಾಲ ಮತ್ತು ಮುಂಗಡಗಳು ಇಳಿಕೆಯಾಗಿ ನಿವ್ವಳ ಲಾಭ ಕಡಿಮೆಯಾಗಿರುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕಿನವರು 2024ರಲ್ಲಿ ಬ್ಯಾಂಕಿನ ಪರಿವೀಕ್ಷಣೆ ನಡೆಸಿ, ಬ್ಯಾಂಕಿಗೆ ವಿಧಿಸಿದ್ದ SAF ನಿರ್ಬಂಧಗಳನ್ನು ತೆಗೆದುಹಾಕಿ ದಿನಾಂಕ 01.04.2025ರಿಂದ ಬ್ಯಾಂಕನ್ನು PCA ಗೆ ವರ್ಗೀಕರಿಸಿರುತ್ತಾರೆ. PCA ನಲ್ಲಿ ನಿವ್ವಳ ಅನುತ್ಪಾಧಕ ಆಸ್ತಿಯ ಪ್ರಮಾಣವನ್ನು ಶೇ. 6ರೊಳಗೆ ತರಬೇಕು, ಡಿವಿಡೆಂಡ್ ಮತ್ತು ದೇಣಿಗೆಗಳನ್ನು ನೀಡಬಾರದೆಂದು ತಿಳಿಸಿರುತ್ತಾರೆ. ನಿವ್ವಳ ಅನುತ್ಪಾಧಕ ಆಸ್ತಿಯ ಪ್ರಮಾಣವನ್ನು ಶೇ.6 ರೊಳಗೆ ತಂದು ಬ್ಯಾಂಕನ್ನು PCA ವರ್ಗೀಕರಣದಿಂದ ಹೊರತರಲು ಕ್ರಮಕೈಗೊಳ್ಳಲಾಗಿದೆ.

SAF ನಿರ್ಬಂಧಗಳನ್ನು ತೆಗೆದು ಹಾಕಿರುವುದರಿಂದ ಹೆಚ್ಚಿನ ಪ್ರಮಾಣದ ಸಾಲಗಳನ್ನು ಸದಸ್ಯರಿಗೆ ನೀಡಲು ಸಾಧ್ಯವಾಗುತ್ತದೆ. ಇದರಿಂದಾಗಿ ಸಾಲ ಮತ್ತು ಮುಂಗಡಗಳು ಅಭಿವೃದ್ಧಿಯಾಗಿ ಬ್ಯಾಂಕು ಹೆಚ್ಚಿನ ಲಾಭಗಳಿಸಲು ಮತ್ತು ಸರ್ವತೋಮುಖ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ.

ದಿನಾಂಕ 01.09.2025ರಿಂದ ಸಾಲ ಮತ್ತು ಮುಂಗಡಗಳನ್ನು ಹೆಚ್ಚುವರಿ ಮಾಡಲಾಗಿದ್ದು, ವಿವರಗಳನ್ನು ವಾರ್ಷಿಕ ವರದಿ ಪುಟ ಸಂಖ್ಯೆ 30ರಲ್ಲಿ ನೀಡಲಾಗಿದೆ.

ಬ್ಯಾಂಕಿನಲ್ಲಿ ಈಗಾಗಲೇ RTGS / NEFT, IMPS ಮತ್ತು ATM ರೂಪೇ ಡಿಬಿಟ್ ಕಾರ್ಡ್‌ಗಳನ್ನು ನೀಡುತ್ತಿದ್ದು ಇದರ ಪ್ರಯೋಜನವನ್ನು ಪಡೆಯಲು ವಿನಂತಿ ಮಾಡಿದರು.

2024–25ನೇ ಸಾಲಿನಲ್ಲಿ ಪ್ರತಿಭಾ ಪುರಸ್ಕಾರಕ್ಕೆ ಆಯ್ಕೆಯಾಗಿರುವ ಮಾನ್ಯ ಸದಸ್ಯರುಗಳ ಮಕ್ಕಳಿಗೆ ಹಾಗೂ ಬ್ಯಾಂಕಿನ ಕೆಲಸ ಕಾರ್ಯಗಳಲ್ಲಿ ಸಂಪೂರ್ಣ ಸಹಕಾರ ಮತ್ತು ಬೆಂಬಲವನ್ನು ನೀಡಿದ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಿದರು.

ಮಾನ್ಯ ಸದಸ್ಯರು ವಾರ್ಷಿಕ ವರದಿ, ಆಡಿಟ್ ವರದಿ ಮತ್ತು ಅದರ ಅನುವರ್ತನಾ ವರದಿ ಹಾಗೂ ಕಾರ್ಯ ಸೂಚಿಯಲ್ಲಿರುವ ವಿಷಯಗಳನ್ನು ಪರಿಶೀಲಿಸಿ ಒಪ್ಪಿಗೆ ಕೊಟ್ಟು ಆಡಳಿತ ಮಂಡಳಿ ಇನ್ನು ಹೆಚ್ಚಿನ ಕೆಲಸ ಮಾಡಿ ಬ್ಯಾಂಕನ್ನು ಉತ್ತಮ ಮಟ್ಟಕ್ಕೆ ತರಲು ತಮ್ಮ ಅಮೂಲ್ಯವಾದ ಸಲಹೆ / ಸೂಚನೆಗಳನ್ನು ನೀಡಿ ಸಭೆಯ ಕಾರ್ಯ ಕಲಾಪಗಳನ್ನು ಸುಗಮವಾಗಿ ನಡೆಸಿಕೊಡಬೇಕೆಂದು ಮತ್ತು ತಮ್ಮ ಸಹಕಾರ ಹಾಗೂ ಬೆಂಬಲವನ್ನು ನೀಡಬೇಕೆಂದು ವಿನಂತಿಸಿದರು.

**ವಿಷಯ 2: ದಿನಾಂಕ 22–9–2025ರಂದು ನಡೆದ ಬ್ಯಾಂಕಿನ 50ನೇ ಸರ್ವ ಸದಸ್ಯರ ಸಭೆಯ ನಡಾವಳಿಗಳನ್ನು ಓದಿ ದಾಖಲು ಮಾಡುವುದು.**

ಸಭಾಧ್ಯಕ್ಷರಾದ ಕೆ.ಎಸ್. ಸುಧಾಕರ್‌ರವರು ಮಾತನಾಡುತ್ತಾ ದಿನಾಂಕ 22–09–2024ರಂದು ನಡೆದ ಬ್ಯಾಂಕಿನ 50ನೇ ಸರ್ವ ಸದಸ್ಯರ ಸಭೆಯ ನಡಾವಳಿಗಳನ್ನು ವಾರ್ಷಿಕ ವರದಿಯ ಪುಟ ಸಂಖ್ಯೆ 5 ರಿಂದ 22ವರೆಗೆ ಮುದ್ರಿತವಾಗಿದ್ದು, ಸದಸ್ಯರುಗಳು ಈಗಾಗಲೇ ಓದಿರುತ್ತೀರಿ. ಇದನ್ನು ದಾಖಲು ಮಾಡಲು ಒಪ್ಪಿಗೆ ಸೂಚಿಸಬೇಕೆಂದು ಕೋರಿದರು. ಇದನ್ನು ಓದಿ ದಾಖಲು ಮಾಡಬಹುದೆಂದು ಸದಸ್ಯರಾದ ಶ್ರೀ ಸುಬ್ರಮಣ್ಯರವರು ಸೂಚಿಸಿದರು. ಸದಸ್ಯರಾದ ಶ್ರೀ ದೇವರಾಜ್ ಅನುಮೋದಿಸಿದರು. ನಂತರ ಸಭೆಯು ದಿನಾಂಕ 22–9–2024ರಂದು ನಡೆದ ಬ್ಯಾಂಕಿನ 50ನೇ

ಸರ್ವಸದಸ್ಯರ ಸಭೆಯ ನಡಾವಳಿಗಳನ್ನು ಓದಿ ದಾಖಲು ಮಾಡಲು ನನ್ನ ಒಪ್ಪಿಗೆ ನೀಡಿತು. ದಾಖಲು ಮಾಡಲಾಯಿತು.

ಸಭಾಧ್ಯಕ್ಷರು ಮುಂದುವರೆದು ಮಾತನಾಡುತ್ತಾ 3 ರಿಂದ 10ರವರೆಗಿನ ಕಾರ್ಯಸೂಚಿಗಳನ್ನು ಸಭೆಯ ಒಪ್ಪಿಗೆ ಮೇರೆಗೆ ತೆಗೆದುಕೊಂಡು ಚರ್ಚಿಸಬೇಕೆಂದು ಸಭೆಗೆ ಮನವಿ ಮಾಡಿಕೊಂಡರು.

ಶ್ರೀ ಪಂಡಿರಿನಾಥ್ ಇವರು ಮಾತನಾಡುತ್ತಾ ವೇದಿಕೆ ಮೇಲೆ ಆಸೀನರಾಗಿರುವ ಸನ್ಮಾನ್ಯರೇ, ಸದಸ್ಯ ಬಂಧುಗಳೇ, ಕಳೆದ ವರ್ಷವೂ ನಾನು ಮಾತಾಡಿದ್ದೆ. ಅವುಗಳಲ್ಲಿ ಕೆಲವು ಬದಲಾವಣೆಗಳು ಆಗಿದೆ. ಅದಕ್ಕೆ ಮೊದಲನೆಯದಾಗಿ ನನ್ನ ಧನ್ಯವಾದಗಳು. ಕೆಲವು ಬದಲಾವಣೆಗಳು ಆಗಿಲ್ಲ. ಈ ಬದಲಾವಣೆ ಬಗ್ಗೆ ನಾನು ಅಧ್ಯಕ್ಷರಲ್ಲಿ ಕೇಳುವುದು ಇಷ್ಟೇ. ನಾವೇನಾದರೂ ಹೋದ ವರ್ಷ ಕೇಳಿದಾಗ ಅದರ ಬಗ್ಗೆ ಸ್ವಲ್ಪವಾದರೂ ಗಮನ ಹರಿಸಬೇಕು. ನಾನು, ಶಿವರಾಮೇಗೌಡರು ಕೆಲವು ಪತ್ರವನ್ನು ಕೊಟ್ಟಿದ್ದೆವು. ಅದರ ಬಗ್ಗೆ ನಮ್ಮನ್ನು ಕರೆದು ಮಾತನಾಡುತ್ತೇನೆ ಎಂದರು. ನಾನು ಅದರ ಬಗ್ಗೆ ಕೇಳಿದ ಉದ್ದೇಶ ಇಷ್ಟೇ. ಕಾರ್ವೆ ಬಗ್ಗೆ ಏನೇನು ಆಗಿದೆ, ಕೆಲವು ಸಲಹೆ ಸೂಚನೆಗಳು ತೆಗೆದುಕೊಳ್ಳಬೇಕು. ಒಂದು ಕೋಟಿಗಿಂತ ಠೇವಣಿ ಇಟ್ಟವರನ್ನು ಮಧ್ಯದಲ್ಲಿ ಒಂದು ಬಾರಿಯಾದರೂ ಕರೆದು ಮಾತಾಡಿ. ನಾನು 30 ವರ್ಷದಿಂದ ಸದಸ್ಯನಾಗಿದ್ದೇನೆ. ಆದರೂ ನನಗೆ ಆಡಳಿತ ಮಂಡಳಿಯವರು ಯಾರೆಂದು ಗೊತ್ತಾಗಿಲ್ಲ ಹಾಗೂ ಪರಿಚಯವು ಆಗಿಲ್ಲ. ನೀವು ಯಾವಾಗಲಾದರೂ ಬ್ಯಾಂಕಿಗೆ ಬನ್ನಿ, ಆಗ ಬ್ಯಾಂಕಿನಲ್ಲಿರುವ ಸದಸ್ಯರು ಹಾಗೂ ಸಿಬ್ಬಂದಿಯನ್ನು ಮಾತನಾಡಿಸಿಕೊಂಡು ಹೋಗಿ. ನೀವಂದುಕೊಂಡಿರಬಹುದು, ಇವತ್ತೊಂದಿನ ತಾನೇ ಮಾತಾಡುವುದು? ಮಾತನಾಡಿಕೊಂಡು ಹೋಗಲಿ ಎಂದು ನಿಮ್ಮ ಮನಸ್ಸಿನಲ್ಲಿ ಇರಬಹುದು. ಕೆಲವರು ಬಂದಾಗ ಅವರನ್ನು ಕಚೇರಿಗೆ ಕರೆದು ಬ್ಯಾಂಕಿನ ಬಗ್ಗೆ ನಿಮ್ಮ ಅಭಿಪ್ರಾಯವೇನು, ನೌಕರರ ಬಗ್ಗೆ ನಿಮ್ಮ ಅಭಿಪ್ರಾಯವೇನು ಕೇಳಿ. ನಾವು ಏಕೆ ಹೇಳುತ್ತೇವೆಂದರೆ, ನಾವು ಇನ್ಯಾವುದೋ ಮೀಟಿಂಗ್ ಅಟೆಂಡ್ ಮಾಡಿರುತ್ತೇವೆ, ಇನ್ನೊಂದೇನೋ ಅಟೆಂಡ್ ಮಾಡಿರುತ್ತೇವೆ. ಅದನ್ನು ಕೇಳಿ. ನಾವು ಅಲ್ಲೇನೇನೋ ಹೇಳಿರುತ್ತೇವೆ. ಅದನ್ನು ಹೇಳುತ್ತೇವೆ. ಇಲ್ಲೇನು ನಮ್ಮನ್ನು ಕೇಳುತ್ತಿಲ್ಲ. ದಯವಿಟ್ಟು ಇನ್ನು ಮುಂದೆಯಾದರೂ ಕೇಳಿ ಸ್ವಾಮಿ.

ಮುಖ್ಯವಾಗಿ, 2024–25 ಸಾಲಿನ ವರದಿ, ಪುಟ ಸಂಖ್ಯೆ 136ರಲ್ಲಿ, "ಒಬ್ಬ ಸಿಬ್ಬಂದಿಯು ತಮ್ಮ ಹಾಗೂ ತಮ್ಮ ಕುಟುಂಬದ ಸದಸ್ಯರ ಖಾತೆಗಳಿಂದ ಕೆಲವು ಸಾಲಗಾರರಿಗೆ ಹಣ ವರ್ಗಾವಣೆ ಮಾಡಿರುವುದು ಗಮನಕ್ಕೆ ಬಂದಿರುತ್ತದೆ. ಈ ಹಣವನ್ನು ಬಳಸಿಕೊಂಡು ಸಾಲಗಾರರು ತಮ್ಮ ಪೂರ್ವವಿರುವ ಸಾಲದ ಖಾತೆಗಳನ್ನು ಮುಂಚಿತವಾಗಿ ಮುಚ್ಚಿದ್ದಾರೆ. ನಂತರ ಅದೇ ವ್ಯಕ್ತಿಗಳಿಗೆ ಹೊಸ ಸಾಲಗಳನ್ನು ಮಂಜೂರು ಮಾಡಲಾಗಿದ್ದು ಆ ಹಣದ ಒಂದು ಭಾಗವನ್ನು ಮತ್ತೆ ಆ ಸಿಬ್ಬಂದಿ ಸದಸ್ಯರು ಅಥವಾ ಅವರ ಕುಟುಂಬದ ಸದಸ್ಯರ ಖಾತೆಗೆ ವರ್ಗಾಯಿಸಲಾಗಿದೆ. ಈ ರೀತಿಯ ವಹಿವಾಟುಗಳು ಎವರ್ ಗ್ರೀನಿಂಗ್ ಸಂಬಂಧಿಸಿದ ಶಂಕಾಸ್ಪದ ಕ್ರಮ, ಹಣದ ಅಕ್ರಮ ಮಾರ್ಗಸೂಚಿ ಮತ್ತು ಹಿತಾಸಕ್ತಿ ಸಂಘರ್ಷವನ್ನು ಸೂಚಿಸುತ್ತದೆ" ಎಂದಿದೆ.

ಇದರ ಬಗ್ಗೆ ನಾನು ಕೇಳುವುದು ಇಷ್ಟೇ, ಇಷ್ಟು ಜನ ನೀವೆಲ್ಲಾ ಇದ್ದೀರಿ, ಆಡಳಿತ ಮಂಡಳಿ ಬಗ್ಗೆ ನಾವೆಲ್ಲ ಗೌರವ ಇಟ್ಟುಕೊಂಡಿದ್ದೇವೆ. ಕಳೆದ ವರ್ಷವೂ ಒಂದು ಮಾತು ಹೇಳಿದ್ದೆ. ಕಾಲು ಪರ್ಸೆಂಟ್ ಬಡ್ಡಿ ಬಗ್ಗೆ ಯೋಚನೆ ಮಾಡಬೇಡಿ. ಸಂಸ್ಥೆಯನ್ನು ಉಳಿಸಿ. ಒಕ್ಕಲಿಗರಿಗಾಗಿ ಉಳಿದುಕೊಂಡಿರುವ ಒಂದೇ ಒಂದು ಸಂಸ್ಥೆ ಇದು. ಬ್ಯಾಂಕಿನ ಸಿಬ್ಬಂದಿ ಆಡಳಿತ ಮಂಡಳಿಯ ಹಿಡಿತದಲ್ಲಿ ಇರುವವರು. ಅವರು ನಿಮ್ಮನ್ನು ಮೀರಿ ಕೆಲಸ ಮಾಡುತ್ತಿದ್ದಾರೆ ಎಂದರೆ ನೀವೇನು ಮಾಡುತ್ತಿದ್ದೀರಿ? ಅಲ್ಲಾ ಸ್ವಾಮಿ, ನಾವು ಇದನ್ನು ಕೇಳಬಾರದೇ? ಎಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಎರಡನೆಯದಾಗಿ, ಸಂಸ್ಥೆಯಲ್ಲಿ ಅತಿ ಹಿರಿಯ ನಾಗರೀಕರು ಇರಬಹುದು, ಠೇವಣಿದಾರರು ಇರಬಹುದು. ಅವರನ್ನು ಕರೆದು ಸನ್ಮಾನ ಮಾಡಿ ಪ್ರೋತ್ಸಾಹಿಸಬೇಕು. ಹೀಗೆ ಮಾಡಿದರೆ ನಾವು ಬೇರೊಬ್ಬರನ್ನು ಕರೆದುಕೊಂಡು ಬರೋಣ, ನಮ್ಮ ಸಂಸ್ಥೆಯು ಬೆಳೆಯುತ್ತಿದೆ ಅಂತ ಅವರು ಅಂದುಕೊಳ್ಳಬಹುದು. ಇಲ್ಲಿಯವರೆಗೂ ಇಂತಹ ಕೆಲಸ ಯಾವತ್ತೂ ಮಾಡಿಲ್ಲ. ಚೆನ್ನಾಗಿ ಕೆಲಸ ಮಾಡುವ ನೌಕರರನ್ನು ಇಂತಹ ಸಭೆಗಳಲ್ಲಿ ಕರೆದು ಅಭಿನಂದಿಸಿ. ಅವರಿಗೆ ಇನ್ನೂ ಉತ್ಸಾಹ ಬರುತ್ತದೆ. ಕೆಲಸ ಮಾಡದವರಿಗೆ ನಿಮ್ಮ ಕಚೇರಿಯಲ್ಲಿ ಕರೆದು ಬುದ್ಧಿ ಹೇಳಿ. ನಾನು ಗಮನಿಸುತ್ತಿದ್ದೇನೆ. ಕೆಲವು ಒಳ ಒಪ್ಪಂದಗಳು, ಹತ್ತು ಜನ ನೌಕರರು ಒಬ್ಬ ನಿರ್ದೇಶಕರ ಪರ ಇದ್ದರೆ ಇನ್ನು 20 ಜನ ನೌಕರರು ವಿರೋಧ ಇರುತ್ತಾರೆ. ನಿಮ್ಮಲ್ಲೇ ಒಳ ಜಗಳಗಳು ಇದ್ದರೆ ಸಂಸ್ಥೆ ಹೇಗೆ ನಡೆಯುತ್ತದೆ. ಕಾರ್ವೆಯ ಹಣ ಇದುವರೆಗೂ ಉಳಿಸಿಕೊಳ್ಳಲು ಆಗಲಿಲ್ಲ. ಅದನ್ನು ಮುಂದುವರಿಸಿಕೊಂಡು ಬರುತ್ತಿದ್ದೀರಿ. ಆಮೇಲೆ ಲಾಭ ನಷ್ಟಗಳ ಬಗ್ಗೆ, ಡಿವಿಡೆಂಡ್ ಬಗ್ಗೆ ನಾನು ಹೇಳಿದ್ದೆ ಹೋದ ವರ್ಷ, ಏನಾದರೂ ಡಿವಿಡೆಂಡ್ ಕೂಡಿ ಎಂದು. ಇತ್ತೀಚಿಗೆ ಬಂದ ಬ್ಯಾಂಕುಗಳು ಎಲ್ಲರಿಗೂ ಒಳ್ಳೆ ಕಾಣಿಕೆಗಳು ಕೊಡುತ್ತಿದ್ದಾರೆ. ನಮ್ಮ ಬ್ಯಾಂಕ್ ಹೆಸರು ಹಾಕಿ ಒಂದು ಕಾಣಿಕೆ ಕೊಡಿ. ಅದು ಮಾರ್ಕೆಟಿಂಗ್ ಆಗುತ್ತದೆ. ನಮ್ಮ ಸದಸ್ಯರು ಬಂಧುಗಳು, ಕೆಲವರು ಸಭೆಗೆ ವಾಕಿಂಗ್‌ಗೆ ಬಂದ ಹಾಗೆ ಬಂದು, ಇಲ್ಲಿ ತಿಂಡಿ ತಿಂದು ಹೋಗುತ್ತಾರೆ. ಅದೇ ಒಂದು ಕಾಣಿಕೆ ಕೊಡುತ್ತೇನೆ ಎಂದರೆ ಅವರು ಇಲ್ಲಿ ಸಭೆಯಲ್ಲಿಯೂ ಇರುತ್ತಾರೆ. ದಯವಿಟ್ಟು ನಮ್ಮನ್ನೆಲ್ಲ ಕೇಳಿರಿ. ಸದಸ್ಯರಲ್ಲಿಯೂ ಬುದ್ಧಿವಂತರಿದ್ದಾರೆ. ಅವರಿಂದಲೂ ಸಲಹೆಗಳು ಕೇಳಬಹುದು. ಕೇವಲ ಒಬ್ಬ ಸದಸ್ಯನಿಗಾಗಿ ಚುನಾವಣೆ ಮಾಡಿ ನೀವು ದುಡ್ಡು ಹಾಳು ಮಾಡಿದ್ದೀರಿ. ಅವರನ್ನು ಒಪ್ಪಿಸಿ ಅಥವಾ ನಿಮ್ಮಲ್ಲೇ ಒಬ್ಬರು ರಾಜಿ ಆಗಿದ್ದರೆ ಸಂಸ್ಥೆಗೆ ಎಷ್ಟೊಂದು ಹಣ ಉಳಿಯುತ್ತಿತ್ತು. ಅಂತಿಮವಾಗಿ ಸಂಸ್ಥೆಯನ್ನು ಉಳಿಸುವ ಬಗ್ಗೆ ಯೋಚಿಸಬೇಕಾಗಿ ಕೋರಿಕೊಳ್ಳುತ್ತೇನೆ ಎಂದು ಮಾತು ಮುಗಿಸಿದರು.

ಶ್ರೀ ಕೃಷ್ಣೇಗೌಡ ಹೆಚ್. ಇವರು ಮಾತನಾಡುತ್ತಾ ಸನ್ಮಾನ್ಯ ಸಭಾಧ್ಯಕ್ಷರೆ, ಸಭಿಕರೇ ಮತ್ತು ಸದಸ್ಯ ಬಂಧುಗಳೇ, ಕಳೆದ ವರ್ಷದ ವಾರ್ಷಿಕ ಸಭೆ ಇದೆ ಸೆಪ್ಟಂಬರ್‌ನಲ್ಲಿ ನಡೆದಾಗ ನಮ್ಮ ಅಧ್ಯಕ್ಷರಾದ ಶ್ರೀ ಸುಧಾಕರ್‌ರವರು ನಾನು ಸಂಸ್ಥೆಗೆ ಬಂದು 28 ದಿನವಾಗಿದೆ. ಏನು ಈ ಕಾರ್ವೆ ಹಗರಣದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಅದನ್ನು ಎನ್ಕ್ವೈರಿ ಮಾಡುತ್ತೇನೆ, ಈ 25-30 ಕೋಟಿ ಹಣವನ್ನು ಏಕೆ ಹೈದರಾಬಾದ್‌ಗೆ ಕೊಟ್ಟರು, ಇದರ ವ್ಯಾಪ್ತಿ ಎನು, ಇದನ್ನು ಕೊಟ್ಟವರು ಯಾರು, ಅವರಿಗೆ 64

ಎನ್ಕ್ವೈರಿ ಹಾಕಿ ಅವರ ಬಗ್ಗೆ ನಿರ್ದಾಕ್ಷಣ್ಯ ಕ್ರಮ ತೆಗೆದುಕೊಳ್ಳಿ, ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂಬ ವಿಚಾರದಲ್ಲಿ ಮಾತಾಡಿದ್ದೆ, ಆದರೆ ಅಧ್ಯಕ್ಷರು ಅದರ ಬಗ್ಗೆ ಆಗ ಒಂದು ಒಂದುವರೆ ಗಂಟೆ, ಏನು ಮಾತಾಡಿದರೋ ಅದ್ಯಾವುದರ ಬಗ್ಗೆ ಈ ವಾರ್ಷಿಕ ವರದಿ ಪುಸ್ತಕದಲ್ಲಿ ಯಾವುದು ಇಲ್ಲ. ಇದರ ಅರ್ಥ ಏನು? ಮಾನ್ಯ ಸದಸ್ಯರೇ ಇದು ಸಂಪೂರ್ಣ ಮುಚ್ಚಿ ಹಾಕುವುದಾಗಿದೆ. ಅಧ್ಯಕ್ಷರು, ಕ್ರಮ ತೆಗೆದುಕೊಳ್ಳುತ್ತೇನೆ, ಇದರ ಬಗ್ಗೆ ಜಯನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಲಾಗಿದೆ. ಅದರ ಕಾಪಿಯು ತಂದಿಡುತ್ತೇನೆ, ಹೈದರಾಬಾದ್ ಕೋರ್ಟಿನಲ್ಲಿ ಕೇಸ್ ಹಾಕಲಾಗಿದೆ ಎಂದರು. ಅಧ್ಯಕ್ಷರೇ ಎಲ್ಲಿದೆ ಅದು? ಇದು ಪ್ರಮುಖವಾದ ವಿಚಾರ. ಈ ದಾಖಲಾತಿಯನ್ನು ನೀವು ಹೇಳಿದ ಹಾಗೆ ಮಾಡಿಬಿಟ್ಟರೆ ಇವರೇನು ತಪ್ಪು ತಪ್ಪಾಗಿ ಬರೆದಿದ್ದಾರೆ ಅದನ್ನು ಒಪ್ಪಿಕೊಂಡಂತೆ ಆಗುತ್ತದೆ. ಈ ಹಗರಣಗಳು ಮುಚ್ಚಿಹೋಗುತ್ತದೆ. ಆಮೇಲೆ ನಾನು ಈ ಸ್ಕ್ಯಾಂಡಲ್ ಬಗ್ಗೆ ಒಂದು ಅರ್ಜಿ ಕೊಟ್ಟಿದೆ. ಕೋ–ಅಪರೇಟಿವ್ ಆಕ್ಟ್ 19ಎ ಪ್ರಕಾರ ಸದಸ್ಯರು ದಾಖಲಾತಿಯನ್ನು ಕೇಳಿದಾಗ ಪ್ರತಿಯೊಬ್ಬರಿಗೂ ದಾಖಲಾತಿ ಒದಗಿಸುವುದು ಆಡಳಿತ ಮಂಡಳಿಯ ಕರ್ತವ್ಯ. ಅಧ್ಯಕ್ಷರಿಗೆ ಅರ್ಜಿಯನ್ನು ಕೊಟ್ಟಿದ್ದೆ. ಅಧ್ಯಕ್ಷರು ಕಾರ್ಯದರ್ಶಿಯನ್ನು ಕರೆದು ಅವರಿಗೆ ನೀಡಿದರು. ಮೂರು ದಿನದ ನಂತರ ಕಾರ್ಯದರ್ಶಿಗಳಿಗೆ ಫೋನ್ ಮಾಡಿದರೆ ಮೀಟಿಂಗ್ ಇಟ್ಟಿದ್ದೇವೆ ಎಂದರು. ಅನಂತರದಲ್ಲಿ ಮೀಟಿಂಗ್ ಆಯಿತು. ಕಾರ್ಯದರ್ಶಿಗಳು ಫೋನೇ ಮಾಡಲಿಲ್ಲ. ನಾನೇ ಫೋನ್ ಮಾಡಿ ಕೇಳಿದರೆ ಕೊಡಬಾರದೆಂದು ಮೀಟಿಂಗ್‌ನಲ್ಲಿ ತೀರ್ಮಾನವಾಗಿದೆ ಎಂದರು. ಅದರ ಅರ್ಥವೇನು? ಆ ಸ್ಕ್ಯಾಂಡಲ್‌ನಲ್ಲಿ ನೀವೆಲ್ಲ ಇದ್ದೀರಿ ಎಂಬ ಅರ್ಥವನ್ನು ಸೂಚಿಸುತ್ತದೆ. 40–50 ಕೋಟಿ ಹಗರಣವನ್ನು ಮುಚ್ಚಿ ಹಾಕುತ್ತಿರುವುದಕ್ಕೆ ಸದಸ್ಯರಿಗೆ ಕೋಪ, ಉದ್ವೇಗ ಬರುತ್ತದೆ ಮಾತಾಡುತ್ತಾರೆ. ನೀವು ಇಲ್ಲಿ ಸೇವೆ ಮಾಡಲು ಬಂದಿದ್ದಿರೋ ಕಳ್ಳತನ ಮಾಡುತ್ತಿದ್ದೀರೋ ಎಂದು ಕೇಳಬಾರದೆ? ಸದಸ್ಯರಿಗೆ ಮಾತಾಡಲು ಸಂಪೂರ್ಣ ಅಧಿಕಾರವಿದೆ. ಯಾವ ಕಾರಣದಿಂದ ದಾಖಲಾತಿ ಕೊಡಬಾರದೆಂದು ಹೇಳಿದರು? ಯಾರು ಹೇಳಿದರು? ಆ ಸದಸ್ಯರ ಹೆಸರು ಹೇಳಿ. ನೀವು ಕಳೆದ ಸಲ ಕಮಿಟ್ಮೆಂಟ್ ಆಗಿದ್ದೀರಿ ಅಧ್ಯಕ್ಷರೇ. ಅದಕ್ಕೆ ಸಂಬಂಧಪಟ್ಟವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಿ. ಅವರು ಹೇಗೆ ಹಣ ಕೊಟ್ಟರು, ಅದು ಹೈದರಾಬಾದ್ ಕಂಪನಿಗೆ? ಏನೋ ತೆಗೆದುಕೊಂಡಿದ್ದಾರೆ ಎಂದು ಪ್ರೂ ಆಗುವುದಿಲ್ಲವಾ? ಅಧ್ಯಕ್ಷರೇ ನೀವು ಇದಕ್ಕೆ ಉತ್ತರ ಕೊಡಬೇಕು.

NPA 9.54% ಎಷ್ಟು ಕಡಿಮೆಯಾಗಿದೆ ಅನ್ನುತ್ತಾರೆ. ಮಿತಿಗೆ ಒಳಪಟ್ಟಿದೆ ಅನ್ನುತ್ತಾರೆ. ಯಾವ ಮಿತಿಗೆ ಒಳಪಟ್ಟಿದೆ? ಇಲ್ಲಿ ಮಿತಿಗೆ ಒಳಪಟ್ಟಿದೆ ಎಂದ ಮೇಲೆ 2024–25 ವಾರ್ಷಿಕ ವರದಿ ಪುಟ ಸಂಖ್ಯೆ 55 ರಲ್ಲಿ ಅವರೇ ಹೇಳುತ್ತಾರೆ ಮುಂದುವರೆದ ನಿವ್ವಳ ನಷ್ಟ ರೂ. 11,55,41,663.16 ಎಂದು. ಅಂದ ಮೇಲೆ ಬ್ಯಾಂಕಿಗೆ ಎಲ್ಲಿದೆ ಆದಾಯ? ಇದನ್ನು ಸ್ಪಷ್ಟಪಡಿಸಬೇಕು.

2024–25 ವಾರ್ಷಿಕ ವರದಿ ಪುಟ ಸಂಖ್ಯೆ 157ರಲ್ಲಿ ಅಮಾರ್ಟೈಸೇಷನ್ ಎಂಬ ಪದ ಬಳಸಿದ್ದಾರೆ. ಇದರ ಅರ್ಥ ಎಷ್ಟು ಜನ ಸದಸ್ಯರಿಗೆ ಗೊತ್ತಿದೆ? ಯಾಕೆ ಕನ್ನಡದಲ್ಲಿ ಪದ ಸಿಗಲಿಲ್ಲವಾ? ಇದರ

ಅರ್ಥ ಋಣಮುಕ್ತ ಎಂದು. ಈ ಮುಂಚೆ ಎಷ್ಟು ಜನಕ್ಕೆ ಋಣಮುಕ್ತ ಮಾಡಿದ್ದೀರಿ? ಈಗೇಕೆ ಮಾಡಲು ಹೊರಟಿದ್ದೀರಿ? ಅದನ್ನು ಹೇಳಿ. ಅದೇ ಪುಟದಲ್ಲಿ "ಭಾರತೀಯ ರಿಸರ್ವ್ ಬ್ಯಾಂಕಿ"ನ ಮಾರ್ಗಸೂಚಿಯ ಪ್ರಕಾರ ಹೂಡಿಕೆಗಳ ಮಾರಾಟದಿಂದ ಬಂದ ಲಾಭದಿಂದ ಎ ಎಫ್ ಎಸ್ ಮತ್ತು ಹೆಚ್ ಎಫ್ ಟಿ ಗಳಲ್ಲಿರುವ ಕನಿಷ್ಠ ಶೇ.5 ರಷ್ಟನ್ನು ಹೂಡಿಕೆಗಳ ಏರಿಳಿತ ಮೀಸಲು ನಿಧಿಯಲ್ಲಿ ನಿರ್ವಹಿಸಬೇಕಾಗಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ರೂ. 23,63,705–00ಗಳಷ್ಟು ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ಹೊಂದಿರುತ್ತದೆ." ಈ ಹಣವನ್ನು, ನಾವೆಲ್ಲರೂ ಸೈಲೆಂಟಾಗಿದ್ದರೆ, ಈ ಹಣವನ್ನು ಕಾರ್ವೆಯಲ್ಲಿ ಯಾರು ಇನ್ವಾಲ್‌ಮೆಂಟ್ ಆಗಿದ್ದಾರೆ ಎಂದು ಗೊತ್ತಾಗದಂತೆ ಬದಲಾಯಿಸಿ ಬಿಡುತ್ತಾರೆ. ಋಣಮುಕ್ತ ಮಾಡಿಬಿಡುತ್ತಾರೆ. ಈ ಋಣಮುಕ್ತ ಎಷ್ಟು ಜನಕ್ಕೆ ಮಾಡಿದ್ದೀರಾ? ನಮ್ಮ 5% ಹಣ ತಾನೇ ಹೋಗುವುದು, ಹೇಳಿ ಎಂದು ಒತ್ತಾಯಿಸಿದರು.

ನಮ್ಮ ಸಂಸ್ಥೆಯ ಆಡಿಟರ್, ಸಂಸ್ಥೆಗೆ ಸಂಬಂಧ ಪಟ್ಟಂತೆ ಲೆಕ್ಕಪತ್ರಗಳನ್ನು ನೋಡಿ, ನಮ್ಮ ಸರ್ವಸದಸ್ಯರ ಸಭೆಗೆ ಮಂಡಿಸಬೇಕಾದದ್ದು ಅವರ ಕರ್ತವ್ಯ. 2024–25 ವಾರ್ಷಿಕ ವರದಿ ಪುಟ ಸಂಖ್ಯೆ 68ರ ಲೆಕ್ಕಪರಿಶೋಧನ ವರದಿಯಲ್ಲಿ ಹೇಳುತ್ತಾರೆ. "ಆಸ್ತಿ ಜವಾಬ್ದಾರಿ ತಃಖ್ತೆಯನ್ನು ಬ್ಯಾಂಕಿನ ಲೆಕ್ಕಪುಸ್ತಕ ಮತ್ತು ದಾಖಲೆಗಳನ್ನು ಆಧರಿಸಿ ಹಾಗೂ ಅಗತ್ಯವಿದ್ದಲ್ಲಿ ಬ್ಯಾಂಕಿನ ಸಂಬಂಧಿಸಿದ ಅಧಿಕಾರಿಗಳ ಸಮಜಾಯಿಸಿಯನ್ನು ಪಡೆದು ಬ್ಯಾಂಕಿನ ಆಸ್ತಿ ಜವಾಬ್ದಾರಿ ತಃಖ್ತೆಯ ಈ ಪ್ರಮಾಣ ಪತ್ರಕ್ಕೆ ಅನುಬಂಧಿಸಿದ ನನ್ನ ಪ್ರತ್ಯೇಕ ವರದಿಯ ಗಮನಿಕೆಗಳ ಒಳಪಟ್ಟು" ಎಂದು. ಯಾವುದು ಸ್ವಾಮಿ ಆ ಸೀಕ್ರೆಟ್ ವರದಿ? ಸೀಕೆಟ್ ವರದಿ ಎಂದರೆ ಇಲ್ಲಿ ಏನೇನೋ ಅವ್ಯವಹಾರಗಳು ನಡೆದಿದೆ ಎಂದು ಅರ್ಥ. ಅವರು ಯಾವುದೇ ವರದಿ ಕೊಟ್ಟಿಲ್ಲ. ಅವರಿಗೆ 8 ಲಕ್ಷ ಕೊಟ್ಟಿದ್ದೀರಿ. ಸಹಿ ಯಾವುದಕ್ಕೂ. ಇಲ್ಲ ಕಳೆದ ಸಾರಿಯೂ ಸಹಿ ಮಾಡಿಕೊಡಿ ಎಂದು ಹೇಳಿದ್ದೆವು. ಇದನ್ನು ಕೋ ಅಪರೇಟಿವ್ ಸೊಸೈಟಿಗೆ ಕಳುಹಿಸುವಾಗ ಬೇರೆ ಕಳಿಸಬಹುದೆಂದು ಆಪಾದಿಸಿದರು. ಶೆಡ್ಯೂಲ್‌ಗಳನ್ನು ಕೊಡಬೇಕಾದಾಗ ಯಾವುದೇ ನಿಖರತೆಯಿಂದ ಕೂಡಿಲ್ಲ. ಅವರು ಕೊಟ್ಟರು ನಾವು ಬರೆದೆವು. ಆಡಿಟರ್ ಕೆಲಸವೇನು? ಇವರು ಏನು ಕೊಟ್ಟಿಲ್ಲ, ಇದರ ಬಗ್ಗೆ ಗೊತ್ತಿಲ್ಲ, ಇಷ್ಟು ಕೋಟಿ ಬಗ್ಗೆ ದಾಖಲಾತಿ ಇಲ್ಲ, ಎಷ್ಟು ಅವ್ಯವಹಾರ ಆಗಿದೆ, ಇದರಲ್ಲಿ ಯಾರು ಶಾಮೀಲಾಗಿದ್ದಾರೆ, ಇದಕ್ಕೆ ನಾನು ಸರ್ಟಿಫಿಕೇಟ್ ಕೊಡಕ್ಕೆ ಆಗಲ್ಲ ಎಂದು ಹೇಳಬೇಕಾಗಿತ್ತು. ಇವರುಗಳು ಬ್ಲಾಕ್ ಲಿಸ್ಟ್‌ನಲ್ಲಿರಬೇಕಾದವರು ವರದಿ ನೀಡಲು ಎಷ್ಟು ನುಂಗಿದ್ದಾರೆ, ಸಂಸ್ತೆ 11 ಕೋಟಿ ನಷ್ಟದಲ್ಲಿರುವಾಗ 62 ಲಕ್ಷಗಳ ಲಾಭ ಹೇಗೆ ಬರುತ್ತದೆ? ಸಭೆಗೆ ತಪ್ಪು ಮಾಹಿತಿ ಕೊಡುತ್ತಾರೆ. ಯಾರು ಬ್ಯಾಂಕಿಗೆ "ಎ" ಸರ್ಟಿಫಿಕೇಟ್ ಕೊಡುತ್ತಾರೆ? ಕಳೆದ ಸಲವು ಹೇಳಿದ್ದೆ, ಬ್ಯಾಂಕ್ ಮುಳುಗುವ ಹಂತಕ್ಕೆ ಬಂದಿದೆ ಎಂದು. ಈಗ ವ್ಯವಸ್ಥಿತವಾಗಿ ಮುಚ್ಚಕ್ಕೆ ಹೋಗುತ್ತಿದ್ದಾರೆ ಎಂದು ಆರೋಪಿಸಿದರು.

ನಾನು ಈಗ ಇನ್ನೊಂದು ವಿಚಾರವನ್ನು ನಿಮ್ಮ ಗಮನಕ್ಕೆ ತರುತ್ತೇನೆ. 2024–25ರ ವಾರ್ಷಿಕ ವರದಿ ಪುಟ ಸಂಖ್ಯೆ 4 ಕ್ರಮ ಸಂಖ್ಯೆ 1, (ಆ)ನಲ್ಲಿ, "ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು ರೂ. 2,500/– ಅಥವಾ ಸದಸ್ಯರು ಸಾಲ ಪಡೆಯಲು ಅಗತ್ಯವಿದ್ದಲ್ಲಿ ಬ್ಯಾಂಕು ನಿರ್ಧರಿಸಿದ ಮಿತಿಗೆ

ಒಳಪಟ್ಟು ಸದಸ್ಯನ ಕೋರಿಕೆಯ ಮೊತ್ತ (ಇ) ನಲ್ಲಿ, ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು ಎರಡು ಇರತಕ್ಕದ್ದು" ಈ ವರದಿ ಪುಸ್ತಕವನ್ನು ಪೋಸ್ಟ್ ಮಾಡಿದರೆ 8 ರೂಪಾಯಿ ಆಗಬಹುದು. 30–40 ಕೋಟಿ ಹಗರಣವಾಗಿದೆ. ಎಷ್ಟು ಸದಸ್ಯರಿದ್ದಾರೆ? 5 ಲಕ್ಷ ಆಗುವುದೋ, 25 ಲಕ್ಷ ಆಗುವುದೋ? ಆಗಲಿ. ಸದಸ್ಯರ ದುಡ್ಡು ತಾನೇ? ಸದಸ್ಯರ ವಿಳಾಸಕ್ಕೆ ಏಕೆ ವಾರ್ಷಿಕ ವರದಿ ಕಳುಹಿಸವುದಿಲ್ಲ? ಕಳುಹಿಸಿದರೆ ಎಲ್ಲವನ್ನು ಓದಿಕೊಂಡು ಬಿಡುತ್ತಾರಲ್ಲ? ಇವರು ಮಾಡುತ್ತಿರುವ ಅವ್ಯವಹಾರ ಗೊತ್ತಾಗಿ ಬಿಡುತ್ತದಲ್ಲ? ಅದಕ್ಕೆ ಕಳುಹಿಸುವುದಿಲ್ಲ. 20 ವರ್ಷದಲ್ಲೆ ನಮಗೆ ಜಗತ್ ಮೋಸ ಮಾಡಿದ ಅದಕ್ಕೆ ನಾವು ಇಲ್ಲಿಗೆ ಬರುವುದು ಬೇಡವೆಂದು ತೀರ್ಮಾನಿಸಿದೆವು.

ಸದಸ್ಯರಾದ ನಿರ್ಮಲ್ ಕುಮಾರ್‌ರವರು ಸಭಾಧ್ಯಕ್ಷರೆ ಈಗಾಗಲೇ ಇವರಿಗೆ ಹೆಚ್ಚಿನ ಸಮಯ ನೀಡಿದ್ದೀರಿ. ಆದ್ದರಿಂದ ಬೇರೆಯವರಿಗೆ ಮಾತನಾಡಲು ಅವಕಾಶ ಮಾಡಿಕೊಡಿ ಎಂದು ಕೇಳಿದಾಗ, ರೀ ನಿರ್ಮಲ್ ಕುಮಾರ್ ನನಗೆ ಗೊತ್ತು ನೀನು ಏನು ಎಂಬುದು ನೀನು ಅವರ ಪರವಾಗಿಯೆ ಮಾತನಾಡುವುದು ನಿನೋಬ್ಬ ಭ್ರಷ್ಠ. ಕಳ್ಳರಿಗೆ ಸಪೋರ್ಟ್ ಮಾಡುತ್ತೀಯಾ ಕುಳಿತುಕೊ ಗೊತ್ತು ನಿನ್ನದೆಲ್ಲಾ. ಎಂದು ಏಕವಚನದಲ್ಲಿ ಮಾತನಾಡಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ವಿರೋಧ ವ್ಯಕ್ತಪಡಿಸಿದರು.

ಕಾರ್ವೆ ವಿಚಾರವಾಗಿ ಮಾಹಿತಿ ಕೊಡಿ. ನೀವು ಕರೆಕ್ಟ್ ಆಗಿ ಇರುವುದಾದರೆ ಮಾಹಿತಿ ಕೊಡಿ. ನಾವು ನಿಮ್ಮೊಂದಿಗೆ ಕೈಜೋಡಿಸುತ್ತೇವೆ. ನಾವು ಕೇಸ್ ಹಾಕುತ್ತೇವೆ. ಇದನ್ನು ಹಿಂದಿನ ವರ್ಷವೂ ಕೇಳಿದ್ದೇವೆ. ಈಗ ಅದು ಹಳಿ ತಪ್ಪಿದೆ. ಆಡಳಿತ ಮಂಡಳಿಯ ಕಾರ್ಯವೈಖರಿ ಉತ್ತಮವಾಗಿಲ್ಲ ಎಂದರು.

ಶ್ರೀ ನಂಜುಂಡೇಗೌಡರವರು ಮಾತನಾಡುತ್ತಾ ಅಧ್ಯಕ್ಷರಾದ ಸುಧಾಕರ್‌ರವರೇ, ಸ್ನೇಹಿತರೆ ಬ್ಯಾಂಕ್ ಆರಂಭವಾಗಿ 50 ವರ್ಷ ದಾಟಿ 51ನೇ ವರ್ಷಕ್ಕೆ ಕಾಲಿಟ್ಟಿದೆ. ದಯಮಾಡಿ ತಾವು ಅರ್ಥಮಾಡಿಕೊಳ್ಳಬೇಕು, ಯಾವ ಸಂದರ್ಭದಲ್ಲಿ ಬ್ಯಾಂಕ್ ಆರಂಭವಾಗಿದೆ ಎಂದು. 1969ರಲ್ಲಿ ಬ್ಯಾಂಕುಗಳು ರಾಷ್ಟ್ರೀಕರಣವಾಗಿತ್ತು. ಮಧ್ಯಮ ವರ್ಗದವರಿಗೆ, ಬಡವರಿಗೆ ಬ್ಯಾಂಕಿಂಗ್ ವ್ಯವಸ್ಥೆ ಇಲ್ಲದಿರುವ ಸಮಯದಲ್ಲಿ ಸಂಸ್ಥಾಪಕರಾದ ಮಾನ್ಯ ಲಕ್ಕೇಗೌಡರು, ನಂಜಪ್ಪನವರು, ಬಸವೇಗೌಡರು ಇನ್ನೂ ಅನೇಕರು ಸೇರಿ ಈ ಸಂಸ್ಥೆ ಆರಂಭ ಮಾಡಿದದು. ಸಾವಿರಾರು ಜನಕ್ಕೆ ಇದರಿಂದ ಅನುಕೂಲವಾಗಿದೆ. 50 ವರ್ಷದ ಸಾರ್ಥಕ ಸೇವೆ ಮಾಡಿ 51ನೇ ವರ್ಷಕ್ಕೆ ಕಾಲಿಟ್ಟಿದೆ. ನಿಮಗೆ ಗೊತ್ತಿದೆ 50 ವರ್ಷದ ಹಿಂದೆ ಎಲ್ಲೂ ಸಾಲ ಸಿಗುತ್ತಿರಲಿಲ್ಲ. ಇವತ್ತು ಬಹಳಷ್ಟು ಬ್ಯಾಂಕ್‌ಗಳಿವೆ, ಸಂಸ್ಥೆಗಳಿವೆ, ಸಾಲ ಕೊಡುವಂತಹ ವ್ಯವಸ್ಥೆ ತುಂಬಾ ಕಡೆ ಇದೆ. ಯಾವುದೇ ಸ್ವಾರ್ಥವಿಲ್ಲದೆ, ಅವರೆಲ್ಲ ಅಧಿಕಾರಿಗಳಾಗಿದ್ದರು ಸಮಾಜಕ್ಕೆ ಅನುಕೂಲವಾಗಲಿ ಎಂದು ಅವರು ಸೇವೆ ಮಾಡಿದ್ದಾರೆ. ಅದರ ಫಲವಾಗಿ ಎಲ್ಲರೂ ಅನುಕೂಲ ಪಡೆದಿದ್ದಾರೆ. ಇಂತಹ ಸೇವೆ ಮಾಡಿದಂತವರಿಗೆ ಸಂಸ್ಥೆ ಕಟ್ಟಿದಂತವರಿಗೆ, ಅದನ್ನು ನಡೆಸುತ್ತಿರುವವರಿಗೆ ಆಭಾರಿಯಾಗಿರಬೇಕೆಂಬುದು ನಮ್ಮ ಆದ್ಯ ಕರ್ತವ್ಯವಾಗಿದೆ.

ಕೆಲವು ವಿಚಾರಗಳನ್ನು ಮಾತ್ರ ಮಾತಾಡಿ ನನ್ನ ಮಾತನ್ನು ಮುಗಿಸುವ ಪ್ರಯತ್ನಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರು ಕೆಲವು ವಿಚಾರ ಪ್ರಸ್ತಾಪ ಮಾಡಿದರು. ಸರ್ವಸದಸ್ಯರ ಸಭೆಯಲ್ಲಿ, ಈ 2024-25ನೇ ಸಾಲಿನಲ್ಲಿ ಏನೇನು ಮಾಡಬೇಕೆಂದು ಇದ್ದೇವೆ, ಸಾಲದ ಬಾಬ್ತು ಜಾಸ್ತಿ ಮಾಡಬೇಕು. ಲಾಭಾಂಶವನ್ನು ಹೆಚ್ಚು ಮಾಡಬೇಕು ಮತ್ತು NPA ಪ್ರಮಾಣವನ್ನು ಕಡಿಮೆ ಮಾಡಬೇಕೆಂದು ಅವರು ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದರು. 2024-25 ವಾರ್ಷಿಕ ವರದಿ, ಪುಟ ಸಂಖ್ಯೆ 21ರಲ್ಲಿ ನೋಡಬಹುದು, ಆದರೆ ಅವೆಲ್ಲಾ ಆಗಿದ್ದೀಯಾ ಎಂದರೆ ಖಂಡಿತ ಆಗಿಲ್ಲ. ಆ ವಿಚಾರಗಳನ್ನು ನಾನು ಹೇಳಲು ಇಚ್ಚೆಪಡುತ್ತೇನೆ. ಏನು NPA ಪ್ರಮಾಣ ಕಡಿಮೆ ಮಾಡಬೇಕು ಅಂದುಕೊಂಡಿದ್ದರು ಅಷ್ಟು ಪ್ರಮಾಣದಲ್ಲಿ ಕಡಿಮೆಯಾಗಿಲ್ಲ. ಲಾಭ ಹೋದ ವರ್ಷಕ್ಕಿಂತ ಕಡಿಮೆ ಆಗಿದೆ. ಕಳೆದ ಸಲ ಎ ಗ್ರೇಡಿನಲ್ಲಿದ್ದ ಆಡಳಿತ ಮಂಡಳಿ 'ಬಿ' ಗ್ರೇಡ್‌ಗೆ ಬಂದಿದೆ. ಅದರ ಜೊತೆಗೆ ಲೋಪದೋಷಗಳು ಪ್ರಾಮಾಣಿಕವಾಗಿ ಕ್ರಮವಹಿಸದೆ ಸಾಲ ಕೊಟ್ಟಿರುವುದು ಸಂಸ್ಥೆಗೆ ನಷ್ಟವಾಗಿದೆ. ಸಾಲ ಹಿಂತಿರುಗಿ ಪಡೆಯಲು ಪ್ರಾಮಾಣಿಕವಾಗಿ ಅವರು ಏನು ಕ್ರಮ ಕೈಗೊಂಡಿದ್ದಾರೆ ಎಂದು ತಿಳಿಯಲು ನಾವು ಬಯಸುತ್ತೇವೆ. ಇದಲ್ಲದೆ ಇನ್ನೂ ಅನೇಕ ವಿಚಾರವಿದೆ ಒಂದು ಬ್ಯಾಂಕ್ ನಡೆಯಬೇಕೆಂದರೆ ಎರಡು ಮುಖ್ಯ ಕಾರಣವಿರುತ್ತದೆ. ಒಂದು ಠೇವಣಿಯನ್ನು ವೃದ್ಧಿಸಿಕೊಳ್ಳುವಂತದ್ದು ಮತ್ತು ಕೊಟ್ಟ ಸಾಲವನ್ನು ವಾಪಸ್ ಪಡೆಯುವಂತದ್ದು. ಈ ಎರಡು ವ್ಯವಹಾರ ಎಲ್ಲಿ ಚೆನ್ನಾಗಿ ನಡೆಯುವುದೋ ಅಲ್ಲಿ ಬ್ಯಾಂಕ್ ಚೆನ್ನಾಗಿ ನಡೆಯುತ್ತದೆ. ಆದರೆ ಇವತ್ತಿನ ವಾತಾವರಣ ಹೇಗಿದೆ? ಸಹಕಾರಿ ಬ್ಯಾಂಕುಗಳು ಬದುಕಿ ಉಳಿಯುವುದೇ ಕಷ್ಟವಾಗಿದೆ. ನಮ್ಮ ರಾಜ್ಯದಲ್ಲಷ್ಟೇ ಅಲ್ಲ ರಾಷ್ಟ್ರೀಯ ಮಟ್ಟದಲ್ಲಿ ಸಹಕಾರಿ ಬ್ಯಾಂಕುಗಳು ಬಹಳ ಕಷ್ಟದ ದಿನಗಳನ್ನು ಎದುರಿಸುತ್ತಿವೆ. ಏಕೆಂದರೆ ಖಾಸಗಿ ಬ್ಯಾಂಕುಗಳು ಮತ್ತು ದೊಡ್ಡ ದೊಡ್ಡ ಬ್ಯಾಂಕುಗಳ ಜೊತೆಗೆ ಪೈಪೋಟಿ ಮಾಡಬೇಕಾಗಿದೆ. ಆ ಪೈಪೋಟಿಯಲ್ಲಿ ಇವರು ಹಿಂದೆ ಬೀಳುತ್ತಿದ್ದಾರೆ. ಸಾರ್ವಜನಿಕರಲ್ಲಿ ಸಹಕಾರಿ ಬ್ಯಾಂಕಿನಲ್ಲಿ ನಂಬಿಕೆ ಕಡಿಮೆ ಆಗುತ್ತಿದೆ. ಅದಕ್ಕೆ ನಾನು ಆಡಳಿತ ಮಂಡಳಿಯನ್ನು ಹೊಣೆ ಮಾಡುವುದಿಲ್ಲ. ಇತರ ಸಹಕಾರಿ ಬ್ಯಾಂಕಿಗಳಲ್ಲಿ ಆದ ಕಹಿ ಅನುಭವದ ಮೇಲೆ ಸಾರ್ವಜನಿಕರು ಸಹಕಾರಿ ಬ್ಯಾಂಕ್ ಎಂದರೆ ಭಯ ಬೀಳುತ್ತಾರೆ. ಠೇವಣಿ ಇಡಲ್ಲ, ಸಾಲ ಪಡೆಯಲು ಜನರು ಹೆದರುತ್ತಾರೆ. ಆದರೆ ಇವತ್ತು ಮುಚ್ಚಿ ಹೋಗುತ್ತಿರುವ ಬ್ಯಾಂಕ್‌ಗಳನ್ನು ನೋಡಿದರೆ ನಮ್ಮ ಬ್ಯಾಂಕ್ ಸೇಫ್ ಆಗಿದೆ. ಕಷ್ಟ ಬಿದ್ದು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಆ ನಿಟ್ಟಿನಲ್ಲಿ ಮುಂದುವರೆಯಲಿ ಎಂದು ನಾನು ಬಯಸುತ್ತಿದ್ದೇನೆ. ನಿರ್ದೇಶಕರ ಪಟ್ಟಿ ನಾನು ನೋಡಿದೆ. ಅನೇಕ ನಿರ್ದೇಶಕರು ಸಭೆಗೆ ಬಂದಿಲ್ಲ. ಒಂದು ಎರಡು ಸಭೆಗೆ ಬಂದಿದ್ದಾರೆ. ಅವರಲ್ಲಿ ಆಸಕ್ತಿ ಇಲ್ಲ ಎಂದಾಗ ಅವರು ನಿರ್ದೇಶಕರಾಗಿ ಇರುವುದಕ್ಕೆ ಯಾವ ಅರ್ಥವು ಇಲ್ಲ. ನನಗೆ ಅನ್ನಿಸಿದ್ದು, ಒಂದಿಬ್ಬರು ವೃತ್ತಿಪರ ನಿರ್ದೇಶಕರನ್ನು ನೇಮಕ ಮಾಡಿಕೊಳ್ಳಿ. ವೃತ್ತಿಪರರೇ ಏಕೆಂದರೆ ಅವರು ಬ್ಯಾಂಕಿಂಗ್ ಮತ್ತು ಅಕೌಂಟಿಂಗ್ ಕ್ಷೇತ್ರದಲ್ಲಿ ವಿಶೇಷ ಪರಿಜ್ಞಾನ ಇರುವವರು. ಅವರನ್ನು ನಿರ್ದೇಶಕರ ಮಂಡಳಿಯಲ್ಲಿ ಅಭಿವೃದ್ಧಿ ದೃಷ್ಟಿಯಿಂದ ನೇಮಿಸಿಕೊಳ್ಳುತ್ತಾರೆ. ಅಂತವರ ಅಭಿಪ್ರಾಯ ಅಥವಾ ಸಲಹೆಗಳನ್ನು ಇವರು ಕೇಳಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಅಂತಹ ವೃತ್ತಿಪರರು ಒಂದೆರಡು ಸಭೆಗಳಲ್ಲಿ ಬಂದಿದ್ದಾರೆ. ಎಲ್ಲಾ ನಿರ್ದೇಶಕರ ಸಭೆಗಳಿಗೆ ಬಂದು, ಏನು

ಕಾಂಟ್ರಿಬ್ಯೂಷನ್ ಮಾಡದಿದ್ದರೆ ಏನು ಪ್ರಯೋಜನವಿಲ್ಲ. ನಿರ್ದೇಶಕರು ಬೇರೆ ಕಾರ್ಯಗಳಲ್ಲಿ ಬಿಜಿಯಾಗಿದ್ದರೆ ಬೇರೆ ವೃತ್ತಿಪರರ ಅಭಿಪ್ರಾಯ ಸಲಹೆ ಸೂಚನೆಗಳನ್ನು ಪಡೆದುಕೊಂಡು ಬ್ಯಾಂಕು ಮುಂದುವರಿಯಬೇಕೆಂದು ನಾನು ಆಸೆ ಪಡುತ್ತೇನೆ. ಇದಲ್ಲದೆ ನಮ್ಮಲ್ಲಿ ಐದಾರು ಶಾಖೆಗಳಿವೆ. ಮೂರು ನಾಲ್ಕು ಶಾಖೆಗಳು ನಷ್ಟದಲ್ಲಿ ನಡೆಯುತ್ತಿದೆ. ಅದರಲ್ಲಿ ಮುಖ್ಯವಾಗಿ ನಮ್ಮ ಜಯನಗರ ಹೆಡ್ ಆಫೀಸ್ ನಷ್ಟದಲ್ಲಿದೆ. ಇದಕ್ಕೆ ಏನು ಮಾಡಬೇಕೆಂದರೆ ಆಡಳಿತ ವೆಚ್ಚವನ್ನು, ಅನಗತ್ಯ ವೆಚ್ಚಗಳನ್ನು ಕಡಿಮೆ ಮಾಡಬೇಕು. ಬ್ಯಾಂಕ್ ಅಂತಹ ಸುಸ್ಥಿತಿಯಲ್ಲಿ ಇಲ್ಲ. ಡಿವಿಡೆಂಟ್ ಕೊಡದಿದ್ದರೂ ಸದೃಢವಾಗಿ ನಡೆಸಿಕೊಂಡು ಹೋದರೆ ಸಾಕಾಗಿದೆ. ಇನ್ನೊಂದು ಪ್ರಮುಖವಾಗಿ, ಎಲ್ಲಾ ಸಭೆಗಳಿಗೆ ನಿರ್ದೇಶಕರಿಗೆ ಭತ್ಯ ನೀಡುತ್ತಿದ್ದಾರೆ. ಅದನ್ನೆಲ್ಲಾ ಕಡಿಮೆ ಮಾಡಬೇಕೆಂದು ನನ್ನ ಅನಿಸಿಕೆ. ಈ ಸಂಸ್ಥೆಗೆ ಬಂದು ಏನಾದರೂ ಕಾಣಿಕೆ ಸಲ್ಲಿಸುವುದಿದ್ದರೆ ಏನಾದರೂ ತೆಗೆದುಕೊಂಡು ಹೋದರೆ ಸರಿ. ಸಿಟ್ಟಿಂಗ್ ಫೀಸ್ ತೆಗೆದುಕೊಂಡು ಹೋದರೆ ಏನು ಪ್ರಯೋಜನವಿಲ್ಲವೆಂದು ಆಕ್ಷೇಪಿಸಿದರು. ಅಗತ್ಯವಿಲ್ಲದ ಸಿಬ್ಬಂದಿಯನ್ನು ಕಡಿಮೆ ಮಾಡಿ ದಕ್ಷತೆ ಹೆಚ್ಚಿಸಲು ಸಲಹೆ ನೀಡಿದರು.

ಶ್ರೀ ನಂಜುಂಡಪ್ಪನವರು ಮಾತನಾಡುತ್ತಾ ಸಹಕಾರಿ ಬಂಧುಗಳೇ, ಮೊದಲನೆಯದಾಗಿ 22 ಜನ ನಿರ್ದೇಶಕರು ಇದ್ದಾರೆ ಬ್ಯಾಂಕಿನಲ್ಲಿ. ಇದರಲ್ಲಿ ಶ್ರೀ ಸುಧಾಕರ್‌ರವರು ಅಧ್ಯಕ್ಷರಾದರೆ ಶ್ರೀ ಜಯಪ್ರಕಾಶ್ ಅವರು ಉಪಾಧ್ಯಕ್ಷರಾಗಿದ್ದಾರೆ. ಹೀಗಾಗಿ ಈ 20 ಜನ ನಿರ್ದೇಶಕರಲ್ಲಿ ಇವರು ಎಷ್ಟು ಜನಕ್ಕೆ ಸಾಲ ಕೊಡಿಸಿದ್ದಾರೆ? ನೀವು ಕೊಡಿಸಬಹುದು. ಇನ್ಯಾರೋ ಬಂದು ಹೇಳಿದರು ಎಂದು ಕೊಡಿಸಿರಬಹುದು. ಇಷ್ಟು ವರ್ಷ, ಇಷ್ಟು ಜನ ಡೈರೆಕ್ಟರ್‌ಗಳು ಎಷ್ಟು ಜನಕ್ಕೆ ಲೋನು ಕೊಡಿಸಿದ್ದಾರೆ? ನಾನೊಬ್ಬ ಸಾಮಾನ್ಯ ಸದಸ್ಯನಾದರೂ ಪ್ರತಿ ವರ್ಷ ಇಬ್ಬರಿಗೆ ಕೋಟಿಗಟ್ಟಲೆ ಸಾಲ ಕೊಡಿಸುತ್ತೇನೆ. ಅವರು ಸರಿಯಾಗಿ ಸಾಲವನ್ನು ಕಟ್ಟಿಕೊಂಡು ಹೋಗುತ್ತಾರೆ. ಆದುದರಿಂದ ಸುಧಾಕರ್‌ರವರು ಒಂದು ಕೋಟಿ ಸಾಲ ಬೇಕಾದರು ಅವರಿಗೆ ಇನ್ನೂ 20 ಲಕ್ಷ ಹೆಚ್ಚು ಸಾಲ ಕೊಡಿ, ಅವರು ಕಟ್ಟುತ್ತಾರೆ. ಅವರು ವೆಲ್ ಟೂ ಡೋ ಇದ್ದಾರೆ ಎಂದು ಹೇಳಿದ್ದಾರೆ. ಇವರು ಇಷ್ಟು ಜನ ನಿರ್ದೇಶಕರು ಎಷ್ಟು ಜನಕ್ಕೆ ಸಾಲ ಕೊಡ್ಸಿದ್ದಾರೆ? ಏಕೆ ಕೊಡಿಸಿದ್ದಾರೆ? ಇವರು ನಾವು ಭಾರತ್ ಕೋ–ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರು ಎಂದು ಕರ್ನಾಟಕದಲ್ಲಿ ಹೇಳಬೇಕಾ? ನಿಮ್ಮ ಕೆಲಸವೇನು? ಈ ಬ್ಯಾಂಕಿನಲ್ಲಿ ನಾನು 20–23 ವರ್ಷದಿಂದ ಹೇಳುತ್ತಿದ್ದೇನೆ, ಸುಧಾಕರ್‌ರವರು ಮೆಲ್ಲಗೆ ನಮ್ಮ ತಲೆ ಸವರಿಬಿಡುತ್ತಾರೆ. ಇರೋದು ಹೇಳುತ್ತೀನಿ. ಅವರು ಒಳ್ಳೆಯ ಮನುಷ್ಯ. ಒಳ್ಳೆಯ ಸಂಸ್ಕೃತಿ ಇದೆ. ಆದರೆ ಈ ತಲೆ ಸವರುವ ಕೆಲಸ ಬೇಡ. ಇದು ಸಾರ್ವಜನಿಕರ ಸಂಸ್ಥೆ. ನಿಮ್ಮ ನಮ್ಮ ದುಡ್ಡು ಅಲ್ಲಿರುವುದು. ಯಾವ ನಿರ್ದೇಶಕರ ದುಡ್ಡು ಅಲ್ಲಿಲ್ಲ. ಚೆನ್ನಾಗಿ ತಿಳಿದುಕೊಳ್ಳಿ ಬಂಧುಗಳೇ, ನೀವು ಪ್ರತಿಯೊಂದು ಜನರಲ್ ಬಾಡಿ ಮೀಟಿಂಗ್‌ಗಳಿಗೆ ನಿಮಗೆ ಏನೇ ಕೆಲಸವಿದ್ದರೂ ದಯವಿಟ್ಟು ಬಂದು ಒಂದು ಸಹಿ ಹಾಕಿ ಹೋಗಿ. ನೂರುಸಲಿ ವಹಿವಾಟು ನಡೆಸಬೇಕೆಂದೇನೂ ಇಲ್ಲ. ಆದರೆ ಒಂದು ಅಥವಾ ಎರಡು ಮೀಟಿಂಗ್‌ಗೆ ಸಹಿ ಹಾಕಬೇಕೆಂದು ಇದೆ. ಆವಾಗ ನಿಮಗೆ ಮತದಾನದ ಹಕ್ಕು ಬರುತ್ತದೆ. ಸರ್ವಾಧಿಕಾರವನ್ನು ಕಿತ್ತಿ ಒಗೆಯಬಹುದು. ಇದೊಂದೇ ದಾರಿ. ಎರಡು ಸಾವಿರ, ಮೂರು ಸಾವಿರ ಮತವಿದ್ದರೆ ಸಾಲದು. ಯಾರನ್ನು ಕಿತ್ತು ಹಾಕಲು ಸಾಧ್ಯವಿಲ್ಲ. ನೀವು ಸದಸ್ಯರೇ, ಆದರೆ "ಮತ"

ಇಲ್ಲವೆಂದರೆ ಮೆಂಬರ್ಶಿಪ್ ಏಕೆ ಬೇಕು? ಆದುದರಿಂದ ನಿಮಗೆ ಎಷ್ಟೇ ಕೆಲಸವಿದ್ದರೂ ಸಭೆಗೆ ಲೆಡ್ಜರ್‌ನಲ್ಲಿ ಸಹಿ ಹಾಕಿ. ಐದು ವರ್ಷದಲ್ಲಿ ಎರಡು ಅಥವಾ ಮುರು ಮೀಟಿಂಗ್‌ನಲ್ಲಿ ನೀವು ಸಹಿ ಹಾಕಬೇಕು.

2024–25 ವಾರ್ಷಿಕ ವರದಿ, ಪುಟ ಸಂಖ್ಯೆ 13ರಲ್ಲಿ "119ರಲ್ಲಿ ದಾವೆ ಪ್ರಕರಣಗಳು 27. ದಾವೆ ಮೊತ್ತ ರೂ. 1056 ಲಕ್ಷ ಇದೆ. ಅಂದರೆ ಸುಮಾರು 27 ಜನ ಸಾಲ ತೆಗೆದುಕೊಂಡು ಇದುವರೆಗೆ ವಾಪಸ್ಸು ಕೊಟ್ಟಿಲ್ಲ". ಇದು ಯಾರ ಮನೆಯ ದುಡ್ಡು? ಎಷ್ಟು ಕಮಿಷನ್ ತೆಗೆದುಕೊಂಡು ಇದ್ದೀರಾ? ಇದು ನಮ್ಮ ನಿಮ್ಮ ಮನೆಯ ದುಡ್ಡಲ್ಲ. ಇದು ಸಾರ್ವಜನಿಕರ ಹಣ. ಇದು ನಮ್ಮ ಠೇವಣಿ ದುಡ್ಡು. ಕಾರ್ವೆಗೆ ಎಷ್ಟು ಜನ ನಿರ್ದೇಶಕರು ದುಡ್ಡು ಕೊಟ್ಟರು? ಎಷ್ಟು ನಿಮ್ಮ ಸಿಬ್ಬಂದಿ ದುಡ್ಡು ತೆಗೆದುಕೊಂಡರು ಎಂದು ಹೇಳಿದರೆ ಕೇಸ್ ಹಾಕುತ್ತೀರಾ ಎಂದು ಉದ್ವೇಗಗೊಂಡು ಪ್ರಶ್ನಿಸಿದರು.

ಮಾನ್ಯ ಸ್ನೇಹಿತರೆ, 10 ವರ್ಷದ ಹಿಂದೆ ಇದೆ ಜನರಲ್ ಬಾಡಿಯಲ್ಲಿ ಮಾತಾಡಿದ್ದೆ. ಯಾರೋ ಒಬ್ಬರು, ಅವರ ಹೆಸರು ಮರೆತಿದ್ದೇನೆ. ಹೆಚ್ಚು ಕಡಿಮೆಯಾದರೆ ಕ್ಷಮಿಸಬೇಕು. ಯಾರೋ ಒಬ್ಬರು 5 ಲಕ್ಷ ಸಾಲವನ್ನು ಒಬ್ಬ ನಿರ್ದೇಶಕರು ತೆಗೆದುಕೊಂಡಿದ್ದಾರೆ. ಅವರ ಸಾಲವನ್ನು ನೀವು ವೇ ಆಫ್ ಮಾಡಿದ್ದೀರ. ನಾನು ಇದೇ ವೇದಿಕೆಯಲ್ಲಿ ಹೇಳಿದ್ದೇನೆ ಇದು ಸಾಲ ಮನ್ನಾನ? ಇದೇನು ಸಲ ಮನ್ನಾ ಸರ್ಕಾರವೆ ಎಂದು. 27 ಜನ ಉಸಿರೆತ್ತಿದ್ದರೆ ಕೇಸು ಹಾಕುತ್ತಾರೆ. 10 ವರ್ಷ ಕೇಸ್ ನಡೆಯುತ್ತದೆ. ಸಾಲ ತೆಗೆದುಕೊಂಡವನು ತಾನು ನಿರ್ಗತಿಕ, ನನ್ನ ಹತ್ತಿರ ಏನು ಇಲ್ಲ ಎಂದರೆ ಕೇಸ್ ಮುಚ್ಚಿಹೋಯಿತು. ವೇ ಆಫ್ ಮಾಡುತ್ತಾರೆ. ಅಧ್ಯಕ್ಷರು ಇದರ ಬಗ್ಗೆ ವಿವರಿಸಬೇಕು. ಕಳೆದು ಮೂರು ವರ್ಷದಿಂದ ಕಾರ್ವೆ ಸಾಲದ ಬಗ್ಗೆ ಹಾರಿಕೆಯ ಉತ್ತರ ನೀಡುತ್ತಿದ್ದೀರ ಎಂದು ಆರೋಪಿಸಿದರು. ಕೊನೆಯದಾಗಿ ನಿರ್ದೇಶಕರಿಗೆ ಜನಗಳನ್ನು ಕರೆದುಕೊಂದು ಬಂದು ಬ್ಯಾಂಕಿನ ಸದಸ್ಯರನ್ನಾಗಿ ಮಾಡಿಸಿ, ಅವರಿಂದ ಠೇವಣಿ ಇಡಿಸಿ ಹಾಗೂ ಸಾಲವನ್ನು ಕೊಡಿಸಿ, ವಸೂಲು ಮಾಡುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು.

ಶ್ರೀ ನಾರಾಯಣಪ್ಪನವರು ಮಾತನಾಡುತ್ತಾ ಸನ್ಮಾನ್ಯ ಅಧ್ಯಕ್ಷರೇ, ಆಡಳಿತ ಮಂಡಳಿಯ ಎಲ್ಲಾ ಸದಸ್ಯರೇ ಹಾಗೂ ಬಂಧುಗಳೇ, 2024–25ನೇ ಸಾಲಿನ ವಾರ್ಷಿಕ ವರದಿ ಓದಿದಾಗ ಆಘಾತವಾಯಿತು. ಬ್ಯಾಂಕಿನ ಕಳಪೆ ಫಲಿತಾಂಶ ಕಂಡು ಕಳವಳವಾಯಿತು. ಕಳೆದ ವರ್ಷ ಸುಧಾಕರ್‌ರವರು ಹೇಳಿದ್ದರು ಬ್ಯಾಂಕಿನ ಸ್ಥಿತಿಗತಿಯನ್ನು ಉತ್ತಮ ಸ್ಥಿತಿಗೆ ತರುತ್ತೇವೆ ಎಂದು. ಆದರೆ 2023–24ನೇ ಸಾಲಿಗಿಂತ 2024–25ನೇ ಸಾಲಿನಲ್ಲಿ ಕಳಪೆ ಸಾಧನೆ ಮಾಡಿದ್ದಾರೆ. ಎನ್ ಪಿ ಎ ಜಾಸ್ತಿ ಆಗಿದೆ. ಡಿವಿಡೆಂಟ್ ಇಲ್ಲ. ಎ ಗ್ರೇಡ್‌ನಲ್ಲಿದ್ದ ಬ್ಯಾಂಕ್ ಬಿ ಗ್ರೇಡ್‌ಗೆ ಬಂದಿದೆ. ಅಂದರೆ ಆಡಳಿತ ಸರಿಯಾಗಿ ನಡೆಯುತ್ತಿಲ್ಲ. ಇದೆ ಸಂದರ್ಭದಲ್ಲಿ ಯಾವುದೋ ಕ್ಯಾಥೋಲಿಕ್ ಸಿರಿಯನ್ ಬ್ಯಾಂಕ್‌ನಲ್ಲಿ ಎರಡು ಕೋಟಿ ಠೇವಣಿ ಇಡಲಾಗಿದೆ. ಅದು ಈ ಖಾಸಗಿ ಬ್ಯಾಂಕಿನಲ್ಲಿ. ಎರಡು ಕೋಟಿ ಠೇವಣಿ ಇಡಲು ಕಾರಣವೇನು? ಅದರ ಅವಶ್ಯಕತೆಯಾದರು ಏನಿತ್ತು? ಕಳೆದ ವರ್ಷವೇ ಇದನ್ನು ಹಿಂತಿರುಗಿ ಪಡೆಯಲು ಹೇಳಲಾಗಿತ್ತು. ಕಾರ್ವೆಯ 28 ಕೋಟಿ ಹಿಂತಿರುಗಿ ಬರುವುದರ ಬಗ್ಗೆ ನನಗೆ ನಂಬಿಕೆ

ಇಲ್ಲ. ಸದಸ್ಯರ ಮಾತುಗಳಿಗೆ ಸ್ವಲ್ಪ ಬೆಲೆ ಕೊಟ್ಟು ತಪ್ಪುಗಳನ್ನು ಸರಿ ಮಾಡಿಕೊಳ್ಳಲು ಪ್ರಯತ್ನ ಪಡಬೇಕು. ಏಕೆ ತಪ್ಪುಗಳನ್ನೇ ಮಾಡುತ್ತಾ ಮುಂದುವರೆಯುತ್ತಿದ್ದೀರಿ ಎಂದು ಪ್ರಶ್ನಿಸಿದರು.

ಠೇವಣಿ ಹಣ ಜಾಸ್ತಿ ಆಗುತ್ತಿದೆ. ಅಡ್ವಾನ್ಸ್ ಕಡಿಮೆ ಹೋಗುತ್ತಿದೆ. ಠೇವಣಿಗೆ ಬಡ್ಡಿಯನ್ನು ಕೊಡಬೇಕಾಗಿದೆ. ಆದರೆ ಠೇವಣಿಯ ಹಣಕ್ಕೆ ತಕ್ಕಂತೆ ಸಾಲ ವಿತರಣೆ ಆಗುತ್ತಿಲ್ಲ. ಹೀಗಾಗಿ ಕೇಂದ್ರ ಕಚೇರಿ, ಜಯನಗರವು ಸೇರಿ ನಾಲ್ಕು ಶಾಖೆಗಳಲ್ಲಿ ಸಿಕ್ಕಾಪಟ್ಟೆ ನಷ್ಟವಾಗಿದೆ. ಇವುಗಳನ್ನೆಲ್ಲ ತಪ್ಪಿಸಲು ಬೇಕಾದ ಕ್ರಮ ತೆಗೆದುಕೊಂಡಿದ್ದೀರಾ? ನಾವೊಂದು ಆರು ಜನ ಮಾತಾಡೋದು ನೀವು ಕೇಳಿಸಿಕೊಳ್ಳುವುದು. ಅಷ್ಟಕ್ಕೇ ಬಿಟ್ಟರೆ ಬ್ಯಾಂಕ್ ಉಳಿಯುವುದಿಲ್ಲ. ಸಮಾಜಸೇವ ಧುರೀಣ ಸನ್ಮಾನ್ಯ ಶ್ರೀ ಲಕ್ಕೇಗೌಡರು ಸ್ಥಾಪಿಸಿದ ಬ್ಯಾಂಕ್ ಇದು. ನಮಗೂ ಹೆಮ್ಮೆ ಇದೆ. ಆದರೆ ಸಂಸ್ಥೆ ನಡೆಯುತ್ತಿರುವ ರೀತಿ ನೋಡಿದರೆ ಸಂಸ್ಥೆ ಉಳಿಯುವುದೇ ಎಂದು ಅನುಮಾನ ಬಂದಿದೆ. ಆದುದರಿಂದ ನಾನು ಆಡಳಿತ ಮಂಡಳಿಯವರನ್ನು ಕೇಳಿಕೊಳ್ಳುವುದು ಏನೆಂದರೆ ತಾವೆಲ್ಲರೂ ತಮ್ಮ ಸಾಮರ್ಥ್ಯ ಮತ್ತು ದಕ್ಷತೆಯಿಂದ ಸಂಸ್ಥೆಯನ್ನು ನಡೆಸಿ. ನಾವು ನಿಮ್ಮಲ್ಲಿ ಇನ್ನೂ ವಿಶ್ವಾಸ ಇಟ್ಟುಕೊಂಡಿದ್ದೇವೆ. ಒಂದು ಒಳ್ಳೆಯ ಸಂಸ್ಥೆಯನ್ನಾಗಿ ಮಾಡಿ. ಮುಂದಿನ ವರ್ಷಕ್ಕೆ ನೀವೇನು ಹಿಂದೆ ಹೇಳಿದ್ದಿರೋ ಆ ಸಮಸ್ಯೆಯನ್ನೆಲ್ಲ ಹೋಗಲಾಡಿಸಿ ಸಂಸ್ಥೆಯನ್ನು ಉತ್ತಮ ಸ್ಥಿತಿಗೆ ತರುತ್ತೀರಿ ಎಂಬ ನಂಬಿಕೆಯನ್ನು ಆಶಾಭಾವನೆ ಇದೆ ಎಂದು ತಮ್ಮ ವಿಶ್ವಾಸ ವ್ಯಕ್ತಪಡಿಸಿದರು.

ಡಾ. ಶ್ರೀಧರ್‌ರವರು ಮಾತನಾಡುತ್ತಾ ನಾನು 26 ವರ್ಷದಿಂದ ಸದಸ್ಯನಾಗಿದ್ದು. ಡಿವಿಡೆಂಡ್ ಕೊಡುವುದರ ಬಗ್ಗೆ ವಿನಂತಿಸಿದರು.

ಡಾ|| ಭಾನುಪ್ರಕಾಶ್‌ರವರು ಮಾತನಾಡುತ್ತಾ ನಾವೆಲ್ಲಾ ಸಂಬಂಧಿಕರೇ ಸಂಬಂಧಿಕರಲ್ಲಿ ಮನಸ್ತಾಪ ಬರಬಾರದು. ನಾನು ನ್ಯೂರೋ ಸರ್ಜನ್ ಕಳೆದ ವರ್ಷದ ಚುನಾವಣೆಯಲ್ಲಿ ನಾನು ಸ್ಪರ್ಧಿಸಿದ್ದೆ. ಆದರೆ ಈ ವರ್ಷ ಚುನಾವಣೆ ನಡೆದಿರುವ ಬಗ್ಗೆ ನನಗೆ ಗೊತ್ತಾಗಲಿಲ್ಲ. ನಮ್ಮ ಮನೆಗೆ ನೋಟಿಸ್ ಕಳುಹಿಸಿಲ್ಲ. ಇದಲ್ಲ ಏಕೆ ನಡೆಯುತ್ತಿದೆ ಎಂದು ನೀವೇ ಅತ್ಮಾವಲೋಕನ ಮಾಡಿಕೊಳ್ಳಬೇಕು. ಇಲ್ಲಿ ನಿಮ್ಮನ್ನು ಉಪಯೋಗಿಸಿ ಆರ್‌ಬಿಐ ಕಂಟ್ರೋಲ್ ಮಾಡುತ್ತಿರುವ, ಯುರೋಪಿನ ಗೈಡ್‌ಲೈನ್ಸ್ ಅನುಸರಿಸುವ ಕ್ಯಾತೋಲಿಕ್ ಸೀರಿಯನ್ ಬ್ಯಾಂಕಿನಲ್ಲಿ ಠೇವಣಿ ಇಟ್ಟದ್ದೀರಲ್ಲ ಅದಕ್ಕೆ ಒತ್ತಡ ಹಾಕಿದವರು ಯಾರು? ಅದಕ್ಕೆ ಕಾರಣ ಯಾರು? ಯುರೋಪಿಯನ್ ಬ್ಯಾಂಕುಗಳಿಗೆ ನಮ್ಮ ದುಡ್ಡು ಹೋಗಬೇಕೆಂದರೆ ನಾವಿನ್ನು ಜೀತಾ ಮಾಡುತ್ತಿದ್ದೀವ? ನಮಗಿನ್ನೂ ಸ್ವಾತಂತ್ರ್ಯ ಬಂದಿಲ್ಲ ಎಂದುಕೊಳ್ಳಬೇಕಾ? ಅಲ್ಲಿ ಠೇವಣಿ ಇಡಲು ಒತ್ತಡ ಯಾರು ಹಾಕಿದರು, ಯಾರು ಹೇಳಿದರು ಎಂಬ ಸತ್ಯವನ್ನು ಅಧ್ಯಕ್ಷರು ಭಾಷಣದಲ್ಲಿ ಹೇಳದಿದ್ದರೆ ಅವರಿಗೆ ಕರ್ಮ ಕಟ್ಟಿಟ್ಟಿದ್ದೆ ಎಂಬುದು ನನ್ನ ಅನಿಸಿಕೆ. ಆಮೇಲೆ ಕಾರ್ವೆಗೆ ಹಣ ಯಾರ್ಯಾರು ಕೊಡಲು ಹೇಳಿದರು ಎಂದು ನಿಮಗೆ ಗೊತ್ತಿದೆ. ಅದನ್ನು ನಿಮ್ಮ ಭಾಷಣದಲ್ಲಿ ಹೇಳದಿದ್ದರೆ ನನ್ನ ಶಾಪ ನಿಮಗೆ ತಟ್ಟುತ್ತದೆ. ಹಾಗೇನೆ ಇಲ್ಲಿಯ ತನಕ ಯಾರ್ಯಾರು ಸಾಲಗಳನ್ನು ತೆಗೆದುಕೊಂಡಿದ್ದಾರೆ ಯಾರಾರಿಗೆ ಲಂಚ ಸಿಕ್ಕಿದೆ ಆ ಸತ್ಯವನ್ನು ಇವತ್ತು ನೀವು ಹೇಳದಿದ್ದರೆ ನನ್ನ ಶಾಪ ನಿಮಗೆ. ಒಂದು ಕುಟುಂಬಕ್ಕೆ ಎಷ್ಟು ಶಾಪ ಆಗಿದೆ, ಎಷ್ಟು ಬೆಂಬಲ ಇದೆ ಎಂದು ಬಿಡಿಸಿ ಹೇಳಬಾರದು ಆತ್ಮಹತ್ಯೆ ಕ್ಯಾನ್ಸರ್‌ಗಳು ರಾರಾಜಿಸುತ್ತಿವೆ, ಇನ್ನು ಮುಂದೆ ಈ

ಸಂಬಂಧಿಕರಿಗೆ ಯಾರಿಗೂ ಈ ಕರ್ಮ ಬೇಡ ಅವರು ಆರೋಗ್ಯವಾಗಿರಲಿ ಯಾರಿಗೂ ಬ್ಲೆಡ್ ಕ್ಯಾನ್ಸರ್ ಬರಬಾರದೆಂದು ಆಷಿಸುತ್ತೇನೆ. ಆದರೆ ನನಗೆ ನೋವುಂಟು ಮಾಡಿದವರಿಗೆ ಅವರ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಶಾಪ ತಟ್ಟಲಿ ಎಂದು ಶಾಪ ಹಾಕುತ್ತೇನೆ ಎಂದು ಹೇಳಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ವಿರೋಧ ವ್ಯಕ್ತಪಡಿಸಿ ಶಾಪ ಹಾಕಿರುವ ಮಾತುಗಳನ್ನು ಕೂಡಲೆ ವಾಪಸ್ ಪಡೆಯಬೇಕೆಂದರು.

ಶ್ರೀ ಬಿ. ಎಸ್. ನಾರಾಯಣಸ್ವಾಮಿರವರು ಮಾತನಾಡುತ್ತ ಸದಸ್ಯತ್ವ ಸಂಖ್ಯೆ (11186) ನಾನು ಮುಖ್ಯವಾಗಿ ಮಾತಾಡಲು ಬಂದಿರುವುದು ಒಂದು ಏನೆಂದರೆ, ಲಕ್ಕೇಗೌಡರ ಆರೋಗ್ಯ ಕೆಟ್ಟಾಗ ಶುರುವಾದ ಸಂಸ್ಥೆಯ ಸಮಸ್ಯೆ ಇನ್ನು ಜಾಸ್ತಿ ಆಗುತ್ತಿದೆ. ಅವರಿದ್ದಾಗ ಪ್ರತಿದಿನ ಬಂದು ನೋಡಿಕೊಳ್ಳುತ್ತಿದ್ದರು. ತಪ್ಪು ಮಾಡಲು ಬಿಡುತ್ತಿರಲಿಲ್ಲ. ಆಗ ಸಮಸ್ಯೆಯಾದಾಗ ಬ್ಯಾಂಕನ್ನು ಅವರು ಮತ್ತೆ ಸರಿ ದಾರಿಗೆ ತಂದಿದ್ದರು. ಈಗ ಆತರದವರು ಯಾರು ಇಲ್ಲವಾ? ಲಕ್ಕೇಗೌಡರು ಇಷ್ಟೊಂದು ಸಂಸ್ಥೆ ಕಟ್ಟಿದ್ದಾರೆ, ಆದರೆ ಅವರನ್ನು ಮತ್ತು ಅವರ ಹೆಸರನ್ನು ನೆನೆಸಿಕೊಳ್ಳುವ ಕೆಲಸವನ್ನು ಒಬ್ಬರು ಮಾಡುತ್ತಿಲ್ಲ. ಎಷ್ಟು ಜನಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ಎಷ್ಟು ಜನರಿಗೆ ನೌಕರಿ ಕೊಟ್ಟಿದ್ದಾರೆ. ಸಣ್ಣ ಸಣ್ಣ ಸಂಸ್ಥೆ ಕಟ್ಟಿದವರ ಹೆಸರಿನಲ್ಲಿ ಕಾರ್ಯಕ್ರಮ ಮಾಡಿ ಅವರನ್ನು ನೆನಪಿಸಿಕೊಂಡು, ಅವರು ಮಾಡಿದ ಒಳ್ಳೆಯ ಕೆಲಸವನ್ನು ಹೇಳುತ್ತಾರೆ. ನಾನು ಇವರಲ್ಲಿ ಒಂದು ಮನವಿ ಮಾಡುತ್ತಿದ್ದೇನೆ. ಲಕ್ಕೇಗೌಡರ ಬಗ್ಗೆ ತಿಳಿದುಕೊಳ್ಳಲು ಹಿಂದೆ ಯಾವುದೇ ಅವಕಾಶವಿರಲಿಲ್ಲ. ಈಗ ಶ್ರೀ ನಿರ್ಮಲಾನಂದ ಸ್ವಾಮೀಜಿ ಹತ್ತಿರ ಮಾತಾಡಿದಾಗ ಲಕ್ಕೇಗೌಡರ ಬಗ್ಗೆ ಪುಸ್ತಕವನ್ನು ಬರೆಸಿದ್ದಾರೆ. ಪುಸ್ತಕ ಸಿದ್ಧವಾಗಿದೆ. ಒಂದು ಲಕ್ಷ ಠೇವಣಿ ಇಟ್ಟವರಿಗೆ 5 ಲಕ್ಷ ಟರ್ಮ್ ಲೋನ್ ತೆಗೆದುಕೊಂಡುವರಿಗೆ ಆ ಪುಸ್ತಕವನ್ನು ತರಿಸಿಕೊಟ್ಟರೆ, ಅವರು ಓದಿದರೆ ಅವರಿಗೂ ಅನುಕೂಲವಾಗುತ್ತದೆ. ಸಂಸ್ಥೆಯು ಬೆಳೆಯುತ್ತದೆ ಎನ್ನುವುದು ನನ್ನ ಅನ್ನಿಸಿಕೆ.

ಶ್ರೀ ರಾಮೇಗೌಡರವರು ಮಾತನಾಡುತ್ತಾ ಯಾರೋ ನಮ್ಮ ಡೈರೆಕ್ಟರಲ್ಲಿ ರಿಟೈರ್ಡ್ ಆಗುತ್ತಾರೆ. ಅದನ್ನು ಜನರಲ್ ಬಾಡಿ ಮೀಟಿಂಗ್ ತೆಗೆದುಕೊಂಡು ಬನ್ನಿ. ಅಲ್ಲಿ ಇಟ್ಟು, ಯಾರನ್ನೋ ಆಯ್ಕೆ ಮಾಡಿಕೊಳ್ಳಿ. ಅವರಿಲ್ಲ ಎಂದರೆ ಅವರ ಮಗ, ಮೊಮ್ಮಗ ಎಂದು ಅವರನ್ನೇ ನೀವು ಏಕೆ ಎಲೆಕ್ಟ್ ಮಾಡಿಕೊಳ್ಳುತ್ತೀದ್ದೀರಿ? ಹಲವರು 20–23 ವರ್ಷಗಳಿಂದ ಸದಸ್ಯರಾಗಿದ್ದಾರೆ. ಅವರಿಗೂ ಅವಕಾಶ ಕೊಡಿ, ಹೋದ ಸಾರಿಯೂ ನಾನು ಅಧ್ಯಕ್ಷರಿಗೆ ಹೇಳಿದ್ದೆ. ಯಾಕೋ ನೀವು ಮಾಡುತ್ತಿಲ್ಲ. ಹೋದ ಸಲ ಪಿಳ್ಳಭೈರಪ್ಪನವರು ರಿಟೈರ್ಡ್ ಆದರು. ಅವರ ಮಗನನ್ನು ತೆಗೆದುಕೊಂಡಿದ್ದೀರ. ನಾವು ಬೇರೆ ಸಂಘ ಸಂಸ್ಥೆಯಲ್ಲಿ ಕೆಲಸ ಮಾಡಿದ್ದೇವೆ. ನಮಗೂ ದುಡಿಯಲು ಅವಕಾಶ ಕೊಡಿ. ನಮಗ್ಯಾಕೆ ಕೊಡಲ್ಲ ಎಂದು ಕೇಳಿದರೆ, ಇಲ್ಲ ಗೌಡರೇ, ಅವರಿಗೆ ಪ್ರಾಮಿಸ್ ಮಾಡಿಬಿಟ್ಟಿದ್ದೇವೆ. ಆದುದರಿಂದ ಅವರಿಗೆ ಕೊಡುತ್ತಿದ್ದೇವೆ ಎಂದರು. ಅವರ ಮಗ, ಮೊಮ್ಮಗನಿಗೆ ಕೊಡಬೇಕೆಂದಿಲ್ಲ, ಇದು ಸೊಸೈಟಿ ಎಂದರು.

ಬ್ಯಾಂಕ್ ಸ್ಥಾಪನೆಯಾಗಿ 50 ವರ್ಷ ಕಳೆದಿದೆ. ಎಲ್ಲರಿಗೂ ವಯಸ್ಸಾಗಿದೆ. ಅವರಲ್ಲಿ ಹಲವರಿಗೆ ಗಂಭೀರ ಕಾಯಿಲೆಗಳಿರಬಹುದು. ಅಂತವರಿಗೆ ಬ್ಯಾಂಕಿನಿಂದ ಸ್ವಲ್ಪ ಸಹಾಯ ಮಾಡಿ. ಕನಿಷ್ಠ 50

ಸಾವಿರವಾದರೂ ಕೊಡಿ. ಅವರಿಗೆ ಅನುಕೂಲವಾಗುತ್ತದೆ. ಸಂಸ್ಥೆಯಲ್ಲಿ ಇಷ್ಟು ವರ್ಷ ಸದಸ್ಯರಾಗಿದ್ದಕ್ಕೆ ಹಣಕಾಸು ಕೊಟ್ಟಿದ್ದಾರೆ ಎಂದು ಅವರಿಗೂ ಸಂತೋಷ ಉಂಟಾಗುತ್ತದೆ. ಅರ್ಧ ಕಾಯಿಲೆಯು ಕಮ್ಮಿ ಆಗುತ್ತದೆ. ಡಿವಿಡೆಂಟ್ ಕೊಡಬೇಡಿ. ಈ ರೀತಿ ಸಹಾಯ ಮಾಡಿ. ಅದು ಸಮಾಜಕ್ಕೆ ಒಳ್ಳೆಯದು ಆಗುತ್ತದೆ. ಲಕ್ಕೇಗೌಡರು ಇಂತಹ ಕೆಲಸಗಳಿಗೆ ಮುಂದೆ ಬರುತ್ತಿದ್ದರು. ಅಧ್ಯಕ್ಷರೇ, ನೀವು ಇಂತಹ ಕೆಲಸ ಮಾಡಿ ಎಂದು ಮನವಿ ಮಾಡುತ್ತಿದ್ದೇನೆ. ನಮಸ್ಕಾರ.

ಶ್ರೀ ದೇವರಾಜ್‌ರವರು ಮಾತನಾಡುತ್ತಾ (53694) : ಅಧ್ಯಕ್ಷರೇ, ಉಪಾಧ್ಯಕ್ಷರೇ ಹಾಗೂ ಸದಸ್ಯರೇ 2024–25ರ ವಾರ್ಷಿಕ ವರದಿ, ಪುಟ ಸಂಖ್ಯೆ. 2, ಕ್ರಮ ಸಂಖ್ಯೆ 6ರಲ್ಲಿ ತಿಳಿಸಿರುವ ವೆಬ್ ಸೈಟಿನಲ್ಲಿ ಆಡಿಟ್ ವರದಿ ಹಾಕುತ್ತೇವೆ ಎಂದಿದ್ದೀರಿ, ಆದರೆ ಹಾಕಿಲ್ಲ. ನಾವು ಹೇಗೆ ಆಡಿಟ್ ವರದಿಯನ್ನು ನೋಡಿಕೊಳ್ಳುವುದು ? ಕಳೆದ ವರ್ಷವೂ ನಾನು ಫೋನ್ ಮಾಡಿ ಹೇಳಿದ ಮೇಲೆ ನೋಟಿಸ್ ಹಾಕಿದ್ದರು. ಈ ಸಲಿ ನೋಟಿಸ್ ಮಾತ್ರ ಹಾಕಿದ್ದಾರೆ ಎಂದು ಆಕ್ಷೇಪಿಸಿದರು.

2024–25ರ ವಾರ್ಷಿಕ ವರದಿ ಪುಟ ಸಮಕ್ಯೆ 46ನಲ್ಲಿನ ವಿವರದ ಕ್ರಮ ಸಂಖ್ಯೆ 7ರಲ್ಲಿ ಆರ್‌ಬಿಐಗೆ ಮೂರು ಲಕ್ಷ ದಂಡ ಪಾವತಿಸಿದ್ದಾರೆ. ಇದಕ್ಕೆ ವಿವರಣೆ ಕೊಟ್ಟಿಲ್ಲ. ಪುಟ ಸಂಖ್ಯೆ 127ರಲ್ಲಿ ನಿರ್ದೇಶಕರ ಸಭಾ ಹಾಜರಾತಿ, ದಿನಾಂಕ 1–4–2024 ರಿಂದ 31–3–2025ರ ವರೆಗೆ ಪ್ರತಿಯೊಬ್ಬರಿಗೆ ಸೇರಿ ಒಟ್ಟು 3 ಲಕ್ಷ 69 ಸಾವಿರ ಹಣ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಆದರೆ ಪುಟ ಸಂಖ್ಯೆ 37, ಕ್ರಮ ಸಂಖ್ಯೆ 17ರಲ್ಲಿ ನಿರ್ದೇಶಕರ ಉಪಸ್ಥಿತಿ ಮತ್ತು ಪ್ರಯಾಣ ಭತ್ಯೆಗಾಗಿ 14,65,602/– ಎಂದು ಮುದ್ರಿಸಿದ್ದಾರೆ. ಇದಕ್ಕೆ ಪೂರ್ಣ ವಿವರಣೆ ಕೊಟ್ಟಿಲ್ಲ. ಪುಟ ಸಂಖ್ಯೆ 132ರಲ್ಲಿ, ಬ್ಯಾಂಕಿನ ಕೇಂದ್ರ ಕಚೇರಿಯಲ್ಲಿ 54.68 ಕೋಟಿ ಸಾಲ ಕೊಟ್ಟಿದ್ದಾರೆ. ಅಲ್ಲಿ ನಿವ್ವಳ ಹಾನಿ – 295.60 ಇದೆ. ಮತ್ತೀಕೆರೆ ಶಾಖೆಯಲ್ಲಿ 38.56 ಕೋಟಿ ಸಾಲ ಕೊಟ್ಟಿದ್ದಾರೆ. ಅಲ್ಲಿ ನಿವ್ವಳ ಲಾಭ 172.61 ಬಂದಿದೆ. ವಿಜಯನಗರ ಶಾಖೆಯಲ್ಲಿ 12.98 ಕೋಟಿ ಸಾಲ ಕೊಟ್ಟಾಗ ನಿವ್ವಳ ಹಾನಿ 73.78 ಆಗಿದೆ. ಅಂದರೆ ಏಕೆ ಈ ಸಾಲಗಳು ವಸೂಲಾತಿಯಾಗಿಲ್ಲ? ಈ ಮೈನಸ್‌ಗಳು ನೋಡಿದರೆ ನಮಗೆ ಹಲವು ಸಂಶಯಕ್ಕೆ ಕಾರಣವಾಗುತ್ತದೆ. ಇದನ್ನು ನೀವು ಈಗಲೇ ಗಮನ ಹರಿಸಬೇಕು. ಈಗ ಇಲಾಖೆಯಲ್ಲಿ ಅನೇಕ ತಿದ್ದುಪಡಿಗಳು ಆಗುತ್ತಿದ್ದಾವೇ. ಎರಡು ಮೂರು ಬಾರಿ ಅಷ್ಟೇ, ನೆಕ್ಸ್ಟ್ ಟೈಮ್‌ಗೆ ಚುನಾವಣೆ ನಿಲ್ಲಲು ಆಗಲ್ಲ. ಸ್ಪರ್ಧೆಗೆ ನಿಲ್ಲುವಂತಿಲ್ಲ ಎಂದು ಇಲಾಖೆಯಲ್ಲಿ ಬದಲಾವಣೆ ತರುತ್ತಿದ್ದಾರೆ. 2017ರಲ್ಲಿ ಸಾಲವನ್ನು ಕೊಟ್ಟಿದ್ದೀರ. ಆರ್‌ಬಿಐ ನಿಯಮ ಹೇಳುತ್ತದೆ. ಆರು ತಿಂಗಳಲ್ಲಿ ಸುಸ್ತಿ ಸಾಲವಾದರೆ ಕೋರ್ಟಿಗೆ ಹೋಗಬೇಕೆಂದು. ಆದರೆ ನೀವು ಕೇಸ್ ಹಾಕಿಲ್ಲ. ಇಲ್ಲಿಯವರೆಗೂ ಏಕೆ ಸಾಲ ವಸೂಲಾಗಿ ಆಗಿಲ್ಲ? ಏಕೆ ವಸೂಲಾತಿ ಮಾಡಿಲ್ಲ? ವಸೂಲಾಗದ ಇಂತಹ ಸಾಲದಿಂದ ನಷ್ಟ ತೋರಿಸಲಾಗುತ್ತಿದೆ. ಮಾನ್ಯ ಅಧ್ಯಕ್ಷರೇ ಈ ಸಭೆಗೆ ಅದನ್ನೆಲ್ಲಾ ವಿವರಿಸಿ ಹೇಳಬೇಕಾಗಿ ಕೋರುತ್ತೇನೆ ಎಂದರು.

ಶ್ರೀಮತಿ ಮಾಲತಿ ಬಿ ರವರು ಮಾತನಾಡುತ್ತಾ ಎಲ್ಲಾ ಆಹ್ವಾನಿತರಿಗೂ ಹಾಗೂ ಇಲ್ಲಿ ಸೇರಿರುವ ಎಲ್ಲಾ ಸದಸ್ಯರಿಗೂ ನನ್ನ ಅನಂತ ನಮನಗಳು. ನನ್ನ ಪ್ರಶ್ನೆ, ಬ್ಯಾಂಕಿನ ಸಿಬ್ಬಂದಿ ಮತ್ತು ಕುಟುಂಬದವರು ಯಾರು ಚುನಾವಣೆಗೆ ನಿಲ್ಲಬಾರದೆಂದು ನಿಯಮವಿದೆ. ಆದರೆ ಕುಟುಂಬದವರೆಲ್ಲರಿಗೂ ಅಕೌಂಟ್ ಓಪನ್ ಮಾಡಿಸಿಕೊಳ್ಳುತ್ತೀರ. ಮೆಂಬರ್ ಶಿಪ್ ಮಾಡಿಸಿಕೊಳ್ಳುತ್ತೀರ. ಆದರೆ ಚುನಾವಣೆಗೆ ಏಕೆ ನಿಲ್ಲಬಾರದೆಂದು ನನಗೆ ಗೊತ್ತಾಗುತ್ತಿಲ್ಲ,. ಅವರಿಗೂ ಅವಕಾಶ ನೀಡಲು ಬೈಲಾದಲ್ಲಿ ತಿದ್ದುಪಡಿ ಮಾಡಲು ನಾನು ಕೇಳಿಕೊಳ್ಳುತ್ತೇನೆ. ಈ ವಿಚಾರವಾಗಿ ನಾನು ಹತ್ತಾರು ಲೆಟರ್‌ಗಳು ಬ್ಯಾಂಕಿಗೆ ಕೊಟ್ಟಿದ್ದೇನೆ. ಆದರೆ ಯಾವುದಕ್ಕೂ ಉತ್ತರ ಬಂದಿಲ್ಲ. ಹಾಗೆ ಬ್ಯಾಂಕಿನ ಸಿಬ್ಬಂದಿಯೊಬ್ಬರು ಬ್ಯಾಂಕಿನಲ್ಲಿ ನಡೆಯುತ್ತಿರುವ ಅವ್ಯವಹಾರ, ಭ್ರಷ್ಟಾಚಾರವನ್ನು ಗಮನಕ್ಕೆ ತಂದರೆ ಅವರನ್ನು ಏಕಾಏಕಿ ಸಸ್ಪೆಂಡ್ ಮಾಡುತ್ತಾರೆ. ಆದರೆ ಎನ್ಕ್ವೈರಿ ಆಫೀಸರ್ ಬ್ಯಾಂಕಿನವರಿಗೆ ಛೀಮಾರಿ ಮಾಡಿರುತ್ತಾರೆ. ಅವರು ಕೇಳಿದ ಪ್ರಶ್ನೆಯಲ್ಲಿ ಯಾವುದೇ ತಪ್ಪಿಲ್ಲ, ಅದಕ್ಕೆ ಉತ್ತರ ಕೊಡಿ, ಅದುಕ್ಕೊಂದು ಮೀಟಿಂಗ್ ಏರ್ಪಾಡು ಮಾಡಿ ನೀವು ಆ ಸಿಬ್ಬಂದಿಯೊಂದಿಗೆ ಮಾತಾಡಿ ಅನ್ನುತ್ತಾರೆ. ಆದರೆ ಅದ್ಯಾವುದನ್ನೂ ಕೇಳಿಸಿಕೊಂಡಿಲ್ಲ. ಅದರಲ್ಲೂ ಅಧ್ಯಕ್ಷರಿಗೆ ಅವರನ್ನು ಸಸ್ಪೆಂಡ್ ಮಾಡಲು ಅವಕಾಶವೇ ಇಲ್ಲ. ಆದರೂ ಕೂಡ ಸಸ್ಪೆಂಡ್ ಮಾಡುತ್ತಾರೆ. ಪವರ್ ಇರುವುದು ಸೆಕ್ರೆಟರಿಗೆ. ಇದಾದಮೇಲೆ ಆ ಸಿಬ್ಬಂದಿ ನ್ಯಾಯಾಲಯದಿಂದ ಸ್ಟೇ ತರುತ್ತಾರೆ. ಮತ್ತೆ ಅವರು ಕರ್ತವ್ಯಕ್ಕೆ ಹಾಜರು ಆಗುತ್ತಾರೆ. ಮತ್ತೆ ಒಂದು ವರ್ಷವಾದ ಮೇಲೆ ಅವರು ಪ್ರಶ್ನೆ ಮಾಡುತ್ತಾರೆ. ಮತ್ತೆ ಏಕಾಏಕಿ ಅವರನ್ನು ಸಸ್ಪೆಂಡ್ ಮಾಡುತ್ತಾರೆ. ಪುನಹ ಅವರು ನ್ಯಾಯಾಲಯಕ್ಕೆ ಹೋಗುತ್ತಾರೆ. ಸಸ್ಪೆಂಡ್ ಆಗಿರುವ ಅಷ್ಟು ಸಮಯದ ಸಂಬಳವೂ ಅವರಿಗೆ ಕೊಡುತ್ತಾರೆ ಎಂದರೆ ಅವರದೇನು ತಪ್ಪಿಲ್ಲ ಎಂದು ಅಲ್ಲವಾ? ಸಿಬ್ಬಂದಿಗಳನ್ನು ಇವರು ಮನಸ್ಸಿಗೆ ಬಂದಂತೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಅದೇ ಇವರು ಭ್ರಷ್ಟಾಚಾರಕ್ಕೆ ಯಾರು ಅನುಕೂಲ ಮಾಡಿಕೊಡುತ್ತಾರೋ ಅವರನ್ನು ಹಾಗೆ ಇಟ್ಟುಕೊಳ್ಳುತ್ತಾರೆ. ಒಬ್ಬ ವ್ಯಕ್ತಿ ರಿಟೈರ್ಡ್ ಆಗಿದ್ದಾರೆ. ಆ ವ್ಯಕ್ತಿಯನ್ನು ಇನ್ನು ಇಟ್ಟುಕೊಂಡಿದ್ದಾರೆ. ಇದನ್ನು ಪ್ರಶ್ನಿಸಿ ಲೆಟರ್ ಕೊಟ್ಟರೆ ಅದಕ್ಕೆ ಉತ್ತರವಿಲ್ಲ. ಇವರ ಅನುಕೂಲಕ್ಕೋಸ್ಕರ ಅಧಿಕಾರ ನಡೆಸುವ ಹಾಗಿದ್ದರೆ ನಾವೆಲ್ಲ ಇದನ್ನು ನೋಡಿಕೊಂಡು ಸುಮ್ಮನೆ ಇರಬೇಕಾ? ಸಿಬ್ಬಂದಿ ತಪ್ಪು ಮಾಡಿದರೆ ಸಸ್ಪೆಂಡ್ ಮಾಡಿ ಸ್ವಾಮಿ. ಆದರೆ ಒಂದು ಮೀಟಿಂಗ್ ಮಾಡಿ ಏಕೆ ಹೀಗೆ ಪ್ರಶ್ನೆ ಮಾಡುತ್ತಿದ್ದೀರಿ. ಏನು ನಿಮ್ಮ ಸಮಸ್ಯೆ ಎಂದು ಕೇಳಲು ಆಗುವುದಿಲ್ಲಾ? ಏಕಾಏಕಿ ಹೀಗೆ ನೀವು ಸಸ್ಪೆಂಡ್ ಮಾಡುತ್ತೀರಾ? ಸಿಬ್ಬಂದಿ ತಪ್ಪು ಮಾಡಿದ್ದರೆ ಸಸ್ಪೆಂಡ್ ಮಾಡಿ, ಸಿಬ್ಬಂದಿಯನ್ನು ಈ ರೀತಿ ನಡೆಸಿಕೊಳ್ಳುತ್ತಿರುವ ಬಗ್ಗೆ ನಮಗೆ ಉತ್ತರ ಬೇಕು. ಸರ್ವಸದಸ್ಯರ ಗಮನಕ್ಕೆ ತರಬೇಕೆಂದು ಇದನ್ನು ಹೇಳಿದ್ದೇನೆ.

ಶ್ರೀ ಮಹೇಶ್‌ರವರು ಮಾತನಾಡುತ್ತಾ ಸಹಜವಾಗಿ ನಾವು ಸಹಕಾರಿ ಸಂಘಗಳ ಈ ಜನರಲ್ ಬಾಡಿ ವರದಿಯಲ್ಲಿ ನೋಡುವಂತಹದು ಎಷ್ಟು ಸದಸ್ಯರಿದ್ದಾರೆ. ಎಷ್ಟು ಠೇವಣಿ ಇದೆ, ಎಷ್ಟು ಸಾಲ ಹೋಗಿದೆ, ಎಷ್ಟು ಲಾಭ ಬಂದಿದೆ, ಯಾವುದಾದರೂ ಸಾಲ ಸುಸ್ತಿ ಆಗಿದ್ದೀಯೇ, ಇದನ್ನೇ ನಾವು ಸಾಮಾನ್ಯವಾಗಿ ಸಹಕಾರ ಸಂಘದ ಪರಿಧಿಯಲ್ಲಿ ಅಬ್ಸರ್ವ್ ಮಾಡುವುದು. ಈ ಸಂಸ್ಥೆ ಏನಾಗಿದೆ ಎಂದರೆ ಆರ್ಥಿಕವಾಗಿ ಅಭಿವೃದ್ಧಿ ಆಗಿಯೇ ಇಲ್ಲ. ನಮ್ಮ ಇತರೆ ಸದಸ್ಯರು ಏಕೆ ಆಗುತ್ತಿಲ್ಲ ಎಂದು ಇದರ ಬಗೆ

ಹೇಳಿದ್ದಾರೆ. ಈ ಬ್ಯಾಂಕ್ ಜಾಸ್ತಿ ಕುಂಠಿತವಾಗಿದೆ. ಬೇರೆ ಬ್ಯಾಂಕುಗಳು ಅಲ್ಪ ಸ್ವಲ್ಪ ಕುಂಠಿತವಾಗಿದೆ. ನಿವೇಶನಕ್ಕೆ ಕ್ರೆಡಿಟ್ ಸೊಸೈಟಿ 10.5% ರಷ್ಟು ಬಡ್ಡಿಗೆ ಸಾಲ ಕೊಡುತ್ತಾರೆ. ನೀವು 11.5% ರಷ್ಟು ಕೊಟ್ಟರೆ ಯಾರು ತೆಗೆದುಕೊಳ್ಳುತ್ತಾರೆ? SBIನವರೇ 8.75% ರಷ್ಟು ಬಡ್ಡಿಗೆ ಕೊಡುತ್ತಾರೆ. ನೀವೇನು ಸಾಲವನ್ನು ಕೊಡಬೇಕು ಎಂದು ಮಾಡಿಕೊಂಡಿದ್ದೀರೊ ಅಥವಾ ಕೊಡಬಾರದು ಎಂದು ಮಾಡಿಕೊಂಡಿದ್ದೀರೊ ಗೊತ್ತಿಲ್ಲ. ಠೇವಣಿ ಏಕೆ ಬೇಕು, ವಾಪಸು ಕೊಟ್ಟು ಬಿಡಿ. ನಿಮ್ಮ ಸವಕಳಿ ಇಷ್ಟಿದೆಯಲ್ಲ ಅದರ ಬಗ್ಗೆ ಇಲಾಖೆಗೆ ಬರೆಯಿರಿ. ಅದನ್ನು ಉಪಯೋಗಿಸಿಕೊಳ್ಳಿ. ನಿಮ್ಮ ನಿಧಿಗಳಿವೆ. ನಿಮ್ಮ ನಿಧಿಗಳ ದುಡ್ಡನ್ನು ವಹಿವಾಟಿಗೆ ಉಪಯೋಗಿಸಿಕೊಳ್ಳಿ. ಪರ್ಮಿಷನ್ ತೆಗೆದುಕೊಳ್ಳಿ. ಅಪೆಕ್ಸ್ ಬ್ಯಾಂಕಿನಲ್ಲಿ ಇಟ್ಟರೆ 7.5% ಬಡ್ಡಿ ಕೊಡುತ್ತಾರೆ. ನೀವಿಲ್ಲಿ ಹೆಚ್ಚಾಗಿ ಕೊಡಬೇಕು ಬಟ್ ನೀವು ಇಲ್ಲಿ ಜಾಸ್ತಿ ಬಡ್ಡಿ ಕೊಡುತ್ತಿಲ್ಲ. ಬ್ಯಾಂಕಿನಲ್ಲಿರುವ ವಾಹಿವಾಟು ನೋಡಿದರೆ ಆಡಿಟರ್‌ಗೆ 8 ಲಕ್ಷ ಕೊಡಲು ಅವಕಾಶವಿಲ್ಲ ಎಂದು ಸಂಶಯ ವ್ಯಕ್ತಪಡಿಸಿದರು.

ಕಾರ್ವೆಯ ಬಗ್ಗೆ ಐದು ವರ್ಷದಿಂದ ಚರ್ಚೆ ಮಾಡುತ್ತಲೇ ಇದ್ದೇವೆ ಅದು ಆಗಿರುವುದು ನಿಜ ಹಣ ಬರದೇ ಇರುವುದು ನಿಜ. ಪ್ರತಿ ವರ್ಷ ಲಾಭದಲ್ಲಿ (Provision) ತೆಗೆಯುತ್ತಿದ್ದೇವೆ. ಕೇವಲ ಇನ್ನೂ ನಾಲ್ಕು ಕೋಟಿ ಇದೆ. ನಾಲ್ಕು ಕೋಟಿ ಈ ವರ್ಷವೂ ತೆಗೆದುಬಿಟ್ಟರೆ ಮುಂದಿನ ವರ್ಷವಾದರೂ ಡಿವಿಡೆಂಟ್ ಕೊಡುತ್ತಾರೆ ಎಂದುಕೊಂಡಿದ್ದರೆ ಇಲ್ಲಿ ಒಂದು ವರದಿ ನೋಡಿದರೆ ಲಾಭ ಬರಿ 62 ಲಕ್ಷವಿದೆ. ನಾವು ಏನಾದರೂ ಪರ್ಮಿಷನ್ ಕೊಟ್ಟರೆ ಅದು ಇನ್ನೂ ಕಡಿಮೆ ಆಗಬಹುದು. ಈ ಪರಿಸ್ಥಿತಿ ಇರಬೇಕಾದರೆ ಸಿಬ್ಬಂದಿಗಳಿಗೆ ಠೇವಣಿ ಮತ್ತು ಸಾಲವನ್ನು ತರಲಿಲ್ಲ ಎಂದರೆ ಇಂಕ್ರಿಮೆಂಟ್ ಕೊಡಲ್ಲ ಅಂತ ಹೇಳಿದ್ದಾರಂತೆ. ಆದರೆ ಯಾವುದೇ ಕಾರಣಕ್ಕೂ ಸಿಬ್ಬಂದಿ ಮೇಲೆ ಕ್ರಮ ತೆಗೆದುಕೊಳ್ಳಲು ಆಗಲ್ಲ. ಅವರೇನಾದರೂ ಕೋರ್ಟಿಗೆ ಹೋದರೆ ಅವರು ಸ್ಟೇ ಕೊಡುತ್ತಾರೆ. ಬೇರೆ ಅವ್ಯವಹಾರ ನಡೆದಿದ್ದರೆ ಸಿಬ್ಬಂದಿ ಮೇಲೆ ಕ್ರಮ ಕೈಗೊಳ್ಳಬಹುದು.

ಒ.ಡಿ. ಕೊಡಬೇಕಾದರೆ ಯಾವುದೇ ಠೇವಣಿ ಇದ್ದರೆ ಒ.ಡಿ ಕೊಡಿ. ಯಾವುದೇ ಆಸ್ತಿಯ ಮೇಲೆ ಸಾಲವಿದ್ದರೆ, ಉದಾಹರಣೆಗೆ 50 ಲಕ್ಷ ಒಂದು ಸೈಟಿಗೆ ಸಾಲ ನೀಡಿರುತ್ತೀರಿ, ಅವರು ಸರಿಯಾಗಿ ಕಟ್ಟುತ್ತಿರುತ್ತಾರೆ. ಮತ್ತೆ ಅವರು ಹೆಚ್ಚಿನ 20 ಲಕ್ಷ ಸಾಲ ಕೇಳಿದರೆ ಪುನಃ ಮರು ಮೌಲ್ಯಮಾಪನ ಮಾಡಿಸಿ. ಆ ಸೈಟ್ ಮತ್ತೆ ಒಂದು ಕೋಟಿ ಎಷ್ಟು ಮೌಲ್ಯ ಹೊಂದಿದ್ದರೆ ಮಾತ್ರ ಒ.ಡಿ ಕೊಡಿ. ಇಲ್ಲದಿದ್ದರೆ ದಯವಿಟ್ಟು ಒ.ಡಿ ಕೊಡಬೇಡಿ ಎಂದು ಸಲಹೆ ನೀಡಿದರು. ಸಂಸ್ಥೆ ಆರ್ಥಿಕವಾಗಿ ಸ್ವಲ್ಪ ಲಾಭದಾಯಕವಾಗಿಲ್ಲ. ಆದರೆ ಸಂಸ್ಥೆಯನ್ನು ದೃಢವಾಗಿ ನಿಲ್ಲಿಸುವ ಜವಾಬ್ದಾರಿ ಆಡಳಿತ ಮಂಡಳಿಯ ಮೇಲೆ ಇದೆ. ದಯವಿಟ್ಟು ಅದನ್ನು ಮಾಡಿ ಎಂದು ಕೋರಿಕೊಂಡು ತಮ್ಮ ಮಾತು ಮುಗಿಸಿದರು.

ಪ್ರೋ. ಕೆ.ಎಂ. ನಾಗರಾಜ್‌ರವರು ಮಾತನಾಡುತ್ತಾ ಬಿಇಎಸ್ ಪದವಿ ಕಾಲೇಜಿನಲ್ಲಿ ಪ್ರೊಫೆಸರ್ ಆಗಿ ಕೆಲಸ ಮಾಡಿ ನಿವೃತ್ತಿ ಆಗಿದ್ದೇನೆ. ಬ್ಯಾಂಕಿನ ಸದಸ್ಯನು ಆಗಿದ್ದೇನೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಸಹಕಾರಿ ಸಂಘದ ಬ್ಯಾಂಕಿನ ಸ್ಥಿತಿಗತಿಗಳನ್ನು ತಿಳಿದುಕೊಂಡು ಮಾತಾಡಿದರೆ ಅರ್ಥವಿರುತ್ತದೆ ಎಂದು ಮಾತು ಆರಂಭಿಸಿದರು. ಒಂದು ಕಾಲದಲ್ಲಿ ಒಬ್ಬ ನೌಕರ ಐದು ಸಾವಿರ ರೂಪಾಯಿ ಸಾಲ

ಪಡೆಯಬೇಕೆಂದರೆ ಹತ್ತು ತರಹದ ದಾಖಲಾತಿ ಕೊಡಬೇಕಾಗುತ್ತಿತ್ತು. ಆದರೆ ಈಗ 5 ಲಕ್ಷದ ತನಕ ಯಾವುದೇ ದಾಖಲಾತಿ ಇಲ್ಲದೆ ಸಾಲ ಕೊಡಲು ಹೆಚ್ ಡಿ ಎಫ್ ಸಿ, ಐಸಿಐಸಿಐ ಅಂತಹ ದೊಡ್ಡ ಖಾಸಗಿ ಬ್ಯಾಂಕುಗಳು ಮುಂದೆ ಬಂದಿದೆ. ಸಿಟಿ ಬ್ಯಾಂಕ್ ಬಂದ ಮೇಲೆ ನಮ್ಮ ರಾಷ್ಟ್ರೀಕೃತ ಬ್ಯಾಂಕ್‌ಗಳು ಮೈಚಳಿ ಬಿಟ್ಟು ಎದ್ದು ನಿಂತಿವೆ. ಈಗ ನಿಮ್ಮ ಮೊಬೈಲ್‌ನಲ್ಲಿ ನೋಡಬಹುದು. ನಿಮಗೆ ಐವತ್ತು ಮೆಸೇಜ್ ಬರುತ್ತದೆ. ಸಾಲ ನಿಮಗೆ ಮಂಜೂರು ಆಗಿದೆ. ಬನ್ನಿ ತೆಗೆದುಕೊಳ್ಳಿ ಎಂದು. ಬಡ್ಡಿ ಎಷ್ಟೆಂದರೆ ಯಾವುದೇ ಸಹಕಾರಿ ಬ್ಯಾಂಕುಗಳಿಗಿಂತ ಶೇಕಡ 1–1.5% ರಷ್ಟು ಕಡಿಮೆ ಇವೆ. ಇಂತಹ ಸ್ಥಿತಿಯಲ್ಲಿ ಅಲ್ಲಿ ಬಿಟ್ಟು ಜನ ಇಲ್ಲಿಗೇಕೆ ಬರುತ್ತಾರೆ? ಈ ಸ್ಥಿತಿಯಲ್ಲಿ ಬ್ಯಾಂಕುಗಳು ಇದೆ. ದಯವಿಟ್ಟು ಈ ಸಹಕಾರಿ ಬ್ಯಾಂಕುಗಳಿಗೆ ಇನ್ನೂ ಇವರೊಂದಿಗೆ ಸ್ಪರ್ಧಿಸುವುದು ಕಷ್ಟವಿದೆ. ಉಳಿಗಾಲವಿಲ್ಲ. ಏಕೆಂದರೆ ರಾಷ್ಟ್ರೀಕೃತ ಬ್ಯಾಂಕುಗಳೇ ಉಳಿಯುತ್ತಿಲ್ಲ. ಅವುಗಳೇ ಮರ್ಜ್ ಆಗುತ್ತಾ ಕುಳಿತುಕೊಂಡಿವೆ. ಹಿಂದೆ ಎಲ್ಲವೂ ರಾಷ್ಟ್ರೀಕೃತ ಬ್ಯಾಂಕುಗಳೆ ಇದ್ದವು. ಸಾಲ ಪಡೆಯಲು ಹಾಹಾಕಾರವಿತ್ತು. ಆಗ ಲಕ್ಕೇಗೌಡರು ಮುಂದೆ ಬಂದು ಭಾರತ್ ಕೋ–ಆಪರೇಟಿವ್ ಬ್ಯಾಂಕ್‌ನ್ನು ತೆಗೆದರು. ತೆಗೆದಾಗ ಸಾವಿರಾರು ಜನ ಸಾಲಿನಲ್ಲಿ ನಿಂತು ಸಾಲ ತೆಗೆದುಕೊಳ್ಳುತ್ತಿದ್ದರು. ಸಾಲ ತೆಗೆದುಕೊಳ್ಳಲು ತಿಂಗಳಲ್ಲಿ ಐವತ್ತೋ ನೂರೋ ಜನರಿದ್ದರೆ ಎಷ್ಟು ಜನಕ್ಕೆ ಸಾಲ ಕೊಡಲು ಸಾಧ್ಯ. ಠೇವಣಿ ಎಷ್ಟಿದೆ ಅಂತ ನೋಡಿಕೊಂಡು ಸಾಲ ಕೊಡುತ್ತಿದ್ದರು. ಈಗ ಸಾಲ ಪಡೆಯುವವರೇ ಇಲ್ಲ. ಎಲ್ಲಾ ಠೇವಣಿದಾರರೇ ಇರುವುದು. ಒಂದು ಕಡೆ ಠೇವಣಿ ಸಂಗ್ರಹವಾದರೆ ಇನ್ನೊಂದು ಕಡೆ ಸಾಲ ನೀಡಬೇಕು. ಈಗ ಸಾಲ ಪಡೆಯುವುದಕ್ಕೆ ಜನರೇ ಬರದಿದ್ದರೆ ಎಲ್ಲಿಂದ ಕೊಡುತ್ತಾರೆ. ಹಾಗಾಗಿ ಏನು ಮಾಡಬೇಕು ಎಂದರೆ ಠೇವಣಿ ಸಂಗ್ರಹ ಕಡಿಮೆ ಮಾಡಿ. ಸಾಲದ ಬೇಡಿಕೆಯ ಪ್ರಮಾಣ ನೋಡಿಕೊಂಡು ಠೇವಣಿ ತೆಗೆದುಕೊಳ್ಳಿ. ಸಾವಿರಾರು ಕೋಟಿ ತೆಗೆದುಕೊಂಡು 100 ಕೋಟಿ ಸಾಲ ಕೊಟ್ಟರೆ ಇನ್ನೂ 900 ಕೋಟಿಗೆ ಬಡ್ಡಿ ಬ್ಯಾಂಕಿನಿಂದ ಕೊಡಬೇಕು. ಇದರಿಂದ ಖಂಡಿತ ಸಾಲ ಜಾಸ್ತಿ ಆಗುತ್ತದೆ. ಬಡ್ಡಿ ಕೊಡಬೇಕಲ್ಲ? ಉತ್ಪತ್ತಿಯೇ ಇಲ್ಲದೆ ಬಡ್ಡಿ ಕೊಡಬೇಕು. ನಿಮ್ಮ ಅಸಲಿನಲ್ಲಿ ದುಡ್ಡು ಕೊಡಬೇಕಾಗುತ್ತದೆ. ಜೊತೆಗೆ ಸಿಬ್ಬಂದಿಗೆ ಸಂಬಳ ಕೊಡಬೇಕು. ಇತರ ಖರ್ಚು ವೆಚ್ಚಗಳು ಇರುತ್ತದೆ, ಇವೆಲ್ಲ ಮಾಡಲು ಸಾಧ್ಯಾನ ನೋಡಿಕೊಂಡು ಠೇವಣಿ ತೆಗೆದುಕೊಳ್ಳಿ.

ಎರಡನೆಯದಾಗಿ, ನೀವು ಕೊಡುವ ಸಾಲಕ್ಕೆ ಸೆಕ್ಯೂರಿಟಿ ಇರಲೇಬೇಕು. ಎಲ್ಲಾ ದಾಖಲೆ ಪತ್ರವನ್ನು ಪರಿಶೀಲಿಸಿ. ಪಕ್ಕ ಮಾಡಿಕೊಂಡು, ಪ್ರಾಪರ್ಟಿಯ ಪ್ರಸೆಂಟ್ ವ್ಯಾಲ್ಯೂ ಏನಿದೆ, ಮುಂದೆ ಅದರ ವ್ಯಾಲ್ಯೂ ಜಾಸ್ತಿ ಆಗುವುದೋ ಅಥವಾ ಕಡಿಮೆ ಆಗುವುದೋ ನೋಡಿಕೊಂಡು ಸಾಲ ಕೊಡಬೇಕು. ಇಲ್ಲವೇ ಸಾಲವೇ ಕೊಡಬೇಡಿ. ಏಕೆಂದರೆ ಸಾಲ ಕೊಟ್ಟು ಬ್ಯಾಂಕ್ ನಷ್ಟ ಹೊಂದುವುದು ಬೇಡ. ಸುರಕ್ಷಿತವಾದ ಸಾಲ ನೀಡುವುದೇ ಉತ್ತಮ. ತಣ್ಣೀರನ್ನೇ ಆರಿಸಿಕೊಂಡು ಕುಡಿಯುವಂತಹ ಸಮಯವಿದು. ಕಟ್ ತ್ರೋಟ್ ಸ್ಪರ್ಧೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇದೆ. ಹೆಚ್ ಡಿ ಎಫ್ ಸಿ, ಐಸಿಐಸಿಐ ಬ್ಯಾಂಕಿನೊಂದಿಗೆ ರಾಷ್ಟ್ರೀಕೃತ ಬ್ಯಾಂಕುಗಳು ಕಾಂಪಿಟ್ ಮಾಡಲು ಆಗದಿರುವಾಗ ಸಹಕಾರಿ ಬ್ಯಾಂಕ್ ಕಾಂಪೀಟ್ ಮಾಡಲು ಆಗುವುದಿಲ್ಲ. ಕಷ್ಟವಿದೆ. ಬ್ಯಾಂಕ್ ಉಳಿಸಿಕೊಂಡು, ನಡೆಸಿಕೊಂಡು ಹೋದರೆ ಸಾಕು, ಡಿವಿಡೆಂಟ್ 5 ವರ್ಷ ಕೊಡದಿದ್ದರೂ ಪರವಾಗಿಲ್ಲ. ಬ್ಯಾಂಕನ್ನು ಲಾಭಕ್ಕೆ ತನ್ನಿ ಎಂದು ಕೋರಿಕೊಂಡರು.

ಮೂರನೇಯದಾಗಿ, ನಿರ್ದೇಶಕರ ಮಂಡಳಿಯಲ್ಲಿ ಯಾರಾದರೂ ನಿವೃತ್ತಿ ಅಥವಾ ಮರಣ ಹೊಂದಿದ್ದರೆ ಅವರ ಸ್ಥಾನಕ್ಕೆ ಅವರ ಮಕ್ಕಳು ಮೊಮ್ಮಕ್ಕಳನ್ನೇ ಏಕೆ ಆಯ್ಕೆ ಮಾಡಿಕೊಳ್ಳುತ್ತೀರಿ? ನಮ್ಮ ಸಂಸ್ಥೆಯ ಬಗ್ಗೆ ಅರಿವುಳ್ಳವರು ಹಾಗೂ ಸಮರ್ಪಣ ಭಾವ ಹೊಂದಿದ ಸಮರ್ಥರಿಗೆ ಅವಕಾಶ ನೀಡಿ, ಚುನಾವಣೆ ಬಂದಾಗ ಸದಸ್ಯರು ಯಾರನ್ನು ಆಯ್ಕೆ ಮಾಡಿಕೊಳ್ಳುತ್ತಾರೋ ಮಾಡಿಕೊಳ್ಳಲಿ ಎಂದು ಸಲಹೆ ನೀಡಿದರು.

ಶ್ರೀ ಮಂಜುನಾಥ್ ಬಿ. ಎಂ. ರವರು ಮಾತನಾಡುತ್ತಾ ಠೇವಣಿ ಹೆಚ್ಚಾಗಿ ಸಾಲ ನೀಡುವುದು ಕಡಿಮೆ ಆಗಿದೆ ಎಂದರೆ ಇನ್ಸೂರೆನ್ಸ್ ಕಂಪನಿಗಳೊಂದಿಗೆ ಟೈ ಅಪ್ ಮಾಡಿಕೊಂಡು ಹೆಚ್ಚಿನ ಸಾಲ ನೀಡುವುದರ ಬಗ್ಗೆ ಯೋಚಿಸಬಹುದೆಂದು ಸಲಹೆ ನೀಡಿದರು.

ಮೇಲ್ಕಂಡ ಸದಸ್ಯರುಗಳು ವ್ಯಕ್ತಪಡಿಸಿಸ ಸಲಹೆ ಸೂಚನೆ ಪ್ರಶ್ನೆಗಳಿಗೆ ಮಾನ್ಯ ಅಧ್ಯಕ್ಷರು ಉತ್ತರಿಸುತ್ತಾ, ನಮಸ್ಕಾರ ಬಹಳ ಹೊತ್ತಿನಿಂದ ತಮ್ಮ ಸಲಹೆ ಸೂಚನೆಗಳನ್ನು ಕೊಟ್ಟಿದ್ದೀರಿ, ಸಹಕಾರಿ ಕ್ಷೇತ್ರದಲ್ಲಿ ನನ್ನ ಕಾರ್ಯ ಆರಂಭವಾಗಿದ್ದು 1976ರಲ್ಲಿ ಮುಂದಿನ ವರ್ಷಕ್ಕೆ 50 ವರ್ಷ ಆಗುತ್ತದೆ. ಒಂದು ಪ್ರೈಮರಿ ಸೊಸೈಟಿ ಇರಬಹುದು, ಹಾಲು ಒಕ್ಕೂಟ, ಸಹಕಾರಿ ಸಂಘ ಇರಬಹುದು, ವ್ಯವಸಾಯ ಸೇವಾ ಸಂಘ ಇರಬಹುದು ಪಿಎಲ್‌ಡಿ ಬ್ಯಾಂಕ್ ಇರಬಹುದು, ಬಿಡಿಸಿಸಿ ಬ್ಯಾಂಕ್ ಇರಬಹುದು, ಅಪೆಕ್ಸ್ ಬ್ಯಾಂಕ್ ಇರಬಹುದು, ಮೈಸೂರು ಹಾಲು ಒಕ್ಕೂಟ ಇರಬಹುದು, ಕೆಎಮ್‌ಎಫ್ ಇರಬಹುದು, ಕರ್ನಾಟಕ ಪಟ್ಟಣ ಸಹಕಾರಿ ಮಹಾಮಂಡಳಿ ಇರಬಹುದು, ನ್ಯಾಷನಲ್ ಅರ್ಬನ್ ಕೋ ಅಪರೇಟಿವ್ ಬ್ಯಾಂಕ್ ಇರಬಹುದು ಇಷ್ಟು ಸಹಕಾರಿ ಸಂಘಗಳಲ್ಲಿ ಒಬ್ಬ ನಿರ್ದೇಶಕನಾಗಿರಬಹುದು ಅಥವಾ ಅಧ್ಯಕ್ಷನಾಗಿರಬಹುದು ಅಥವಾ ಸದಸ್ಯನಾಗಿಯೂ ಇದ್ದು ಭಾಗವಹಿಸಿದ್ದೇನೆ. ಪ್ರಾಮಾಣಿಕವಾಗಿ ನಾನು ಹೇಳಬೇಕೆಂದರೆ ಇವತ್ತು ಸಹಕಾರಿ ಕ್ಷೇತ್ರದಲ್ಲಿ ಬಹಳ ಅರ್ಥಗರ್ಭಿತವಾಗಿ, ಒಂದು ಒಳ್ಳೆಯ ರೀತಿಯ ಆರೋಗ್ಯವಿತವಾದ ಚರ್ಚೆಗಳು ಆಗಬೇಕು. ಆ ಚರ್ಚೆಗಳು ಆದಂತಹ ಸಂದರ್ಭದಲ್ಲಿ ಏನು ಆಡಳಿತ ಮಾಡುವವರು ಸರಿಪಡಿಸಿಕೊಂಡು ಹೋಗಬೇಕು ಅನ್ನುವಂತದ್ದು ಆಗಬೇಕು. ಸುಮಾರು ರಾಜ್ಯಮಟ್ಟದಲ್ಲಿ ಸಭೆಗಳು ನೋಡಿದ್ದೇನೆ 11–11.30 ಸಮಯಕ್ಕೆ ಸಭೆ ಶುರುವಾಗುತ್ತದೆ. 12–30 ಗಂಟೆಗೆ ಮುಗಿಸುತ್ತಾರೆ. ಒಂದು ಗಂಟೆಗೆ ಊಟದಲ್ಲಿ ಇರುತ್ತಾರೆ. ಕಾರಣವೇನೆಂದರೆ ಬಹಳಷ್ಟು ಅವ್ಯವಹಾರಗಳು ಮಾಡಿಕೊಂಡಿರುವಾಗ ಬೇರೆಯವರಿಗೆ ಮಾತಾಡಲು ಅವಕಾಶ ಕೊಡುವುದಿಲ್ಲ. ಹೇಗೋ ಮಾಡಿ ಮುಗಿಸುತ್ತಾರೆ. ಮಧ್ಯದಲ್ಲಿ ಯಾರಾದರೂ ಬೈದರೆ ಮಧ್ಯಾಹ್ನ ಅಥವಾ ಸಾಯಂಕಾಲದ ಮೇಲೆ ಹೋಗಿ ಆರಾಮಾಗಿ ತಮಗೆಲ್ಲಾ ಗೊತ್ತೇ ಇರುತ್ತದೆ. ಅವರಿಗೆ ಏನು ಅನ್ನಿಸುವುದಿಲ್ಲ. ಪ್ರಾಮಾಣಿಕವಾಗಿ ಕೆಲಸ ಮಾಡಿ, ಅದರಲ್ಲಿ ಆರೋಗ್ಯಕರವಾಗಿ ಚರ್ಚೆಯಾಗಬೇಕು ಅಂದುಕೊಂಡವರಲ್ಲಿ ನಾನು ಒಬ್ಬ. ಎಷ್ಟು ಜನರಲ್ ಬಾಡಿಗಳು ಒಂದು ಕಾರ್ಯಸೂಚಿ ಪ್ರಕಾರ ನಡೆಯುವುದೇ ಇಲ್ಲ. ಆದಷ್ಟು ಬೇಗ ಮುಗಿಸಿ ವಂದನಾರ್ಪಣೆ ಮಾಡಿಕೊಂಡು ಹೋಗುವಂತದ್ದು. ಇಂಥವು ಆಗಬಾರದು, ಆರೋಗ್ಯಕರವಾದ ಚರ್ಚೆ ಆಗಬೇಕು. ಇಂತಹ ಸಂದರ್ಭದಲ್ಲಿ ಒಂದಿಬ್ಬರು ಸದಸ್ಯರು ಮಾತಾಡೋವಾಗ ಕರ್ಮ, ಶಾಪ ಎಂದಲ್ಲ ಹೇಳಿದಾಗ ನಿಜವಾಗಲೂ ಕೂಡ ಬಹಳ ಮನಸ್ಸಿಗೆ ನೋವಾಯಿತು. ಇದೆ ರೀತಿಯಾದರೆ

ಮುಂದೆ ಸಹಕಾರಿ ಚಳುವಳಿ ಅಸಹಕಾರ ಚಳುವಳಿ ಆಗುತ್ತದೆ. ಕಾರಣ ಏನೆಂದರೆ ಈ ರೀತಿಯ ಮಾತುಗಳಿಗೆ ಒಳ್ಳೆಯವರೆಲ್ಲ ಹಿಂದೆ ಹೋಗುತ್ತಾರೆ. ಕೆಟ್ಟವರು ಮುಂದೆ ಬಂದು, ಅವರೇನೋ ಮಾತಾಡಿದ್ದಾರೆ ಬಿಡಯ್ಯ ಎಂದು ಅವರು ಇವರ ಹೆಗಲ ಮೇಲೆ, ಇವರು ಅವರ ಹೆಗಲ ಮೇಲೆ ಕೈ ಹಾಕಿಕೊಂಡು ಹೋಗುವುದೆಲ್ಲ ಆಗುತ್ತಿದೆ. ನಾನಾದರೂ ಕೂಡ ಇಲ್ಲಿ ಬ್ಯಾಂಕಿನಲ್ಲಿ ನಿರ್ದೇಶಕನಾಗಬೇಕು, ಅಧ್ಯಕ್ಷನಾಗಬೇಕು ಎಂದು ಬಂದವನಲ್ಲ. ನಾನು ರೈತರ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದೇನೆ. ಬೆಂಗಳೂರು ಹಾಲು ಒಕ್ಕೂಟ ಇರಬಹುದು, ಕೆಎಮ್‌ಎಫ್ ಇರಬಹುದು. ಅಲ್ಲಿ ಒಂದು ತರಹ ಖುಷಿ ಇತ್ತು. ರೈತರು ಸಮಂಜಸವಾದ ಪ್ರಶ್ನೆ ಕೇಳುತ್ತಿದ್ದರು. ಏನಾದರೂ ಒಂದಿಷ್ಟು ಒಳ್ಳೆ ಕೆಲಸ ಮಾಡಿದರೆ ಬೆನ್ನು ತಟ್ಟುವಂಥದ್ದು ಮಾಡುತ್ತಿದ್ದರು. ಇವತ್ತು ಏಕೆ ಈ ಮಾತು ಹೇಳುತ್ತಿದ್ದೇನೆ ಎಂದರೆ ಕೆಲವರು ಕಠಿಣವಾಗಿ ಮಾತಾಡಿದರು. ಕಠಿಣವಾಗಿ ಮಾತಾಡಿದರೆ ಅದಕ್ಕೆ ಖಂಡಿತ ಅರ್ಥ ಇರುತ್ತದೆ. ಆದರೆ ಬಹಳ ನೋವಾಗುವ ರೀತಿಯಲ್ಲಿ ಮಾತಾಡಬಾರದು. ನೋವಾಗುವ ರೀತಿಯಲ್ಲಿ ಮಾತಾಡಿದರೆ ಖಂಡಿತ ಇಲ್ಲಿ ಯಾರು ಒಳ್ಳೆ ಜನ ಬರುವುದಿಲ್ಲ. ಆದುದರಿಂದ ನಿಮಗೆ ಮನವಿ ಮಾಡಿಕೊಳ್ಳುತ್ತೇನೆ ನಾನಿಲ್ಲಿ ನಿದೇಶಕ, ಅಧ್ಯಕ್ಷನಾಗಲು ಬಂದಿಲ್ಲ,. ಅಧಿಕಾರವನ್ನು ಕೆಲವರು ಹುಡುಕಿಕೊಂಡು ಹೋಗುತ್ತಾರೆಂದು ನನಗೆ ಗೊತ್ತು. ನಮ್ಮ ಲಕ್ಕೇಗೌಡರು ಸ್ಥಾಪಿಸಿದ ಸಂಸ್ಥೆಯಲ್ಲಿ 20–25 ವರ್ಷ ಪ್ರಯತ್ನ ಪಟ್ಟರು ಬಹಳಷ್ಟು ಜನಕ್ಕೆ ಒಳಗೆ ಬರಲು ಆಗಲಿಲ್ಲ, ಕಾರಣವೇನು? ಜನಾಭಿಪ್ರಾಯಗಳು. ಇವತ್ತು ಒಳ್ಳೆಯವರು ಯಾರು ಮಾತಾಡುವುದಿಲ್ಲ. ಮೌನವಾಗಿ ಚುನಾವಣೆ ಸಂದರ್ಭದಲ್ಲಿ ಯಾರಿಗೆ ಪ್ರೋತ್ಸಾಹಿಸಬೇಕೋ ಅವರಿಗೆ ಪ್ರೋತ್ಸಾಹಿಸುತ್ತಾರೆ. ಅದಕ್ಕೆ ಉದಾಹರಣೆಯಾಗಿ ಜನವರಿಯಲ್ಲಾದ ಚುನಾವಣೆ ಸಾಕ್ಷಿ ಎಂದು ನಾನು ನಿಮ್ಮ ಮುಂದೆ ಹೇಳಲು ಇಷ್ಟಪಡುತ್ತೇನೆ. ಈಗ ಬಹಳಷ್ಟು ಚರ್ಚೆ ಆಗಿದೆ. ಚರ್ಚೆ ಆದ ಸಂದರ್ಭದಲ್ಲಿ ಅನೇಕ ಸದಸ್ಯರು ಮಾತಾಡಿದ್ದಾರೆ. ಕೆಲವರು ತುಂಬಾ ಒಳ್ಳೆಯ ಸಲಹೆ ಸೂಚನೆಗಳು ನೀಡಿದ್ದಾರೆ. ಇವತ್ತು ಬಹಳವಾಗಿ, ಪ್ರಮುಖವಾಗಿ ಚರ್ಚೆಯಾಗಿದ್ದು ಕಾರ್ವೆ ಮತ್ತು ಎನ್‌ಪಿಎ ವಿಚಾರ. ಇವೆರಡರ ಬಗ್ಗೆ ನಾನು ನಿಮಗೆ ಉತ್ತಮ ರೀತಿಯಲ್ಲಿ ಉತ್ತರ ಕೊಡಬೇಕೆಂದು ಪ್ರಯತ್ನ ಮಾಡುತ್ತೇನೆ.

ಕಾರ್ವೆಯಲ್ಲಿ ಹಣ ತೊಡಗಿಸುವಂತಹ ಸಂದರ್ಭದಲ್ಲಿ ಬಹುಶಹ 2018 ಮತ್ತು 2019ರಲ್ಲಿ, ಒಂದು ಸಲ 5 ಕೋಟಿ, ಮತ್ತೊಂದು ಸಲ ಐದು ಕೋಟಿ ತೊಡಗಿಸಿದರು. ಇದಕ್ಕೆ ಕಾರಣ ಇಷ್ಟೇನೇ 9.5% ರಷ್ಟು ಬಡ್ಡಿ ಬರುತ್ತಿತ್ತು. 9.5%ರಷ್ಟು ಬಡ್ಡಿ ಬಂದಾಗ ಇವರು ಸ್ವಲ್ಪ ಯೋಚನೆ ಮಾಡಲಿಲ್ಲ. ಭಾರತ್ ಕೋ ಆಪರೇಟಿವ್ ಬ್ಯಾಂಕ್ ನಾವು 10 ಕೋಟಿ ತೊಡಗಿಸಿದ್ದೆವು. ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್, ಸೌಹಾರ್ದ ಸಹಕಾರ ಸಂಘ, ಹೀಗೆ ಇನ್ನೂ ಅನೇಕರಲ್ಲದೆ ರಾಷ್ಟ್ರೀಕೃತ ಬ್ಯಾಂಕ್ ಕೂಡ ಹೂಡಿಕೆ ಮಾಡಿದ್ದಾರೆ. ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಏನಾದರೂ ವ್ಯತ್ಯಾಸವಾದರೆ ಸರ್ಕಾರ ಅವರ ರಕ್ಷಣೆಗೆ ಇದೆ. ಸಹಕಾರಿ ಬ್ಯಾಂಕುಗಳಿಗೆ ಯಾವುದೇ ರಕ್ಷಣೆ ಇಲ್ಲ. ಇದು ಒಂದು ವರ್ಷದ ಅವಧಿಗೆ ಹೂಡಿಕೆ ಮಾಡಿದ್ದಲ್ಲ. ಎರಡು ವರ್ಷಕ್ಕೆ ಮಾಡಿದ್ದು. ಎರಡು ವರ್ಷ ಮಾಡಿದಾಗ ಕನಿಷ್ಠ ಸ್ಟ್ಯಾಚುಟರಿ ಆಡಿಟ್‌ನವರು ಅಥವಾ ಆರ್‌ಬಿಐ ನವರು ಎಚ್ಚರಿಕೆ ನೀಡಬೇಕಿತ್ತು ಅಂತ ಅಂದುಕೊಳ್ಳುತ್ತೇನೆ.

ಅವರು ಎಚ್ಚರಿಕೆ ಕೊಡಲಿಲ್ಲ. ಕಾರಣ ಬಡ್ಡಿ ಎಲ್ಲಾ ಸರಿಯಾಗಿ ಬರುತ್ತಿದೆ ಎಂದು ಸುಮ್ಮನಾಗಿರಬೇಕು. ಎರಡನೇ ಸಲ 27 ಕೋಟಿ ತೊಡಗಿಸಿದಾಗ, ಕಾರ್ವೆ ನಮ್ಮ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಒಂದೇ ಅಲ್ಲ ಇತರ ಎಲ್ಲರ ಸಾವಿರಾರು ಕೋಟಿ ಹಣವನ್ನು ಹೈದರಾಬಾದಿನ ಪಾರ್ಥಸಾರಥಿ ಎನ್ನುವ ಮುಖ್ಯಸ್ಥ, ಅಂದು ಆಂಧ್ರಪ್ರದೇಶ ಇಬ್ಭಾಗವಾಗಿ ತೆಲಂಗಾಣ ಮತ್ತು ಆಂಧ್ರವೆಂದು, ಆಂಧ್ರದ ಅಮರಾವತಿ ಜಿಲ್ಲೆ ಎಂಬಲ್ಲಿ ಸಾವಿರಾರು ಕೋಟಿ ಹಣವನ್ನು ಕಾರ್ವೆ ಹೂಡಿಕೆ ಮಾಡಿತ್ತು. ನನಗೆ ದೊರಕಿರುವ ಕೆಲವು ಮಾಹಿತಿ ಪ್ರಕಾರ ನಾವು ಏನೋ ಒಂದು ಹೂಡಿಕೆ ಮಾಡಿ ನಿಮಗೆ ಏನೋ ಒಂದು ಉತ್ತರಿಸಿ ಕುಳಿತುಕೊಂಡಿಲ್ಲ. ನಾವು ಪ್ರಾಮಾಣಿಕವಾಗಿ ಹಣ ವಾಪಸ್ಸು ಪಡೆಯಲು ಕಾನೂನಿನ ಪ್ರಕಾರ ಏನೆಲ್ಲಾ ಮಾಡಬೇಕು ಆ ಎಲ್ಲಾ ಪ್ರಯತ್ನ ಮಾಡುತ್ತಿದ್ದೇವೆ. ಕಾನೂನು ಉಲ್ಲಂಘಿಸಿ ನಾವು ಹೋಗಲು ಸಾಧ್ಯವಿಲ್ಲ. ಈಗ ಏನ್‌ಫೋರ್ಸ್ಮೆಂಟ್ ಡೈರೆಕ್ಟರ್ ಇ.ಡಿ ಅವರು ಆ ಹೂಡಿಕೆ ಎಲ್ಲಾ ಜಪ್ತಿ ಮಾಡಿದ್ದಾರೆ. ಇದೆಲ್ಲಾ ಕಾನೂನಿನಲ್ಲಿ ಸಿಲುಕಿಕೊಂಡಿರುವುದರಿಂದ, ಎಲ್ಲವೂ ಕಾನೂನಿನ ಸಂಕಷ್ಟದಿಂದ ಹೊರಬರಲು ಬಹಳ ಕಷ್ಟವೂ ಹಾಗೂ ತುಂಬಾ ದಿನವೂ ತೆಗೆದುಕೊಳ್ಳುತ್ತದೆ. ಇದರ ಮಧ್ಯೆ 2020ರಲ್ಲಿ ಕೋವಿಡ್ ಮಹಾಮಾರಿ ಬಂದಿದ್ದು ನಿಮಗೆಲ್ಲಾ ಗೊತ್ತಿದೆ. ಆ ಸಂದರ್ಭದಲ್ಲಿ ಫೆಡರೇಷನ್ ಒಂದು ಸಭೆ ಕರೆದಿದ್ದರು. ಆಗ ನಾನು ಬ್ಯಾಂಕಿನ ಅಧ್ಯಕ್ಷ ಆಗಿರಲಿಲ್ಲ. ಅಧ್ಯಕ್ಷ ಆಗಿಲ್ಲ ಎಂದು ನನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದು ಖಂಡಿತ ಇಲ್ಲ. ನಾನು ಒಬ್ಬ ನಿರ್ದೇಶಕನಾಗಿದ್ದೆ. ಆಗ ಅನೇಕ ಹಿರಿಯರು ಇದ್ದರು. ಅವರೇನೂ ದುರ್ದೇಶದಿಂದ ಮಾಡಿದ್ದಲ್ಲ. ಒಳ್ಳೆ ಲಾಭ ಬರಬಹುದು, ಶೇಕಡ 9.5 ರಷ್ಟು ಬಡ್ಡಿ ಎಂದು ಕಾರ್ವೆಗೆ ಕೊಟ್ಟರು. ಆಮೇಲೆ ನಾವೆಲ್ಲ ಸೇರಿ ಒಂದು ಕೇಸ್ ಫೈಲ್ ಮಾಡೋಣ ಅಂದುಕೊಂಡೆವು. ಒಬ್ಬೊಬ್ಬರು ಒಂದೊಂದು ದಿಕ್ಕು. 2023 ಮಾರ್ಚ್‌ನಲ್ಲಿ ನಾನು ಬ್ಯಾಂಕಿನ ಅಧ್ಯಕ್ಷನಾದ ಮೇಲೆ, ಆಡಳಿತ ಮಂಡಳಿಯ ಎಲ್ಲರೂ ನನಗೆ ಪ್ರಾಮಾಣಿಕವಾಗಿ ಸಹಾಯ ಮಾಡಿದರು, ನಂತರ ಶ್ರೀ ನಾಗಾನಂದ ಎಂಬ ಪ್ರಸಿದ್ಧ ಅಡ್ವೊಕೇಟ್ ಹತ್ತಿರ ನಿರ್ದೇಶಕರೆಲ್ಲ ಹೋಗಿ ಮಾತಾಡಿದೆವು. ಮಾತಾಡಿದಂತಹ ಸಂದರ್ಭದಲ್ಲಿ ಇಲ್ಲಿ ಬೆಂಗಳೂರಿನಲ್ಲಿ ಕೇಸ್ ಫೈಲ್ ಮಾಡಲು ಯೋಚಿಸಿದರೂ ಕಾರ್ವೆಯ ಆಡಳಿತ ಕಚೇರಿ ಹೈದರಾಬಾದ್ ಆಗಿತ್ತು. ಇದನ್ನು ಎಲ್ಲಾ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಆದುದರಿಂದ ಕೇಸನ್ನು ಹೈದರಾಬಾದಿನಲ್ಲೇ ಫೈಲು ಮಾಡಬೇಕು ಎಂದು ಸಲಹೆ ನೀಡಿದರು. ಹೀಗಾಗಿ 23–11–2023ರಲ್ಲಿ ಕೇಸನ್ನು ರಂಗಾರೆಡ್ಡಿ ಜಿಲ್ಲೆ, ಹೈದಾರಾಬಾದಿನಲ್ಲಿ ಕೇಸ್ ಫೈಲ್ ಮಾಡಿದವು. ದಿನಾಂಕ 25–11–2023ರಿಂದ 25–08–2025ರವರೆಗೆ ಒಟ್ಟು 23 ಬಾರಿ ವಿಚಾರಣೆ ನಡೆದಿರುತ್ತದೆ. ಮುಂದಿನ ದಿನಾಂಕ 15–9–2025 ಇಂದು ನಿಗದಿಯಾಗಿದೆ. ನಿರ್ದೇಶಕರ ಮಂಡಳಿಯಲ್ಲಿ ಐದು ಜನ ವಕೀಲರು ಇದ್ದಾರೆ. ಐದು ಜನರು ಪ್ರತಿ ವಿಚಾರಣೆಯ ಮೇಲೆ ಗಮನವಿರಿಸಿದ್ದಾರೆ. ನಮಗೆ ಖಂಡಿತ ಹಣ ನ್ಯಾಯಾಲಯದ ಮೂಲಕ ಹಿಂದಿರುಗಿ ಬರುವ ಭರವಸೆ ಇದೆ. ಇಷ್ಟನ್ನು ಮಾತ್ರ ನಾನು ಹೇಳಬಹುದು. ಅರ್ಥ ಮಾಡಿಕೊಳ್ಳಿ ಕಾರ್ವೆಯ ಬಗ್ಗೆ ನಾವು ಇಷ್ಟೆಲ್ಲಾ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ.

ಎರಡನೇ ವಿಚಾರ NPA. ನಾನು ಅಧ್ಯಕ್ಷನಾಗಿ ಮೂರನೇ ಜನರಲ್ ಬಾಡಿಯಲ್ಲಿ ಭಾಗವಹಿಸುತ್ತಿದ್ದೇನೆ. ಮೊದಲನೇ ವಾರ್ಷಿಕ ಸಭೆಯಲ್ಲಿ ಭಾಗವಹಿಸಿದ್ದಾಗ 34% ಇದ್ದ NPA ನ್ನು 13%ಗೆ ತಂದಿದ್ದೇನೆ.

ಕಳೆದ ವಾರ್ಷಿಕ ಸಭೆಯಲ್ಲಿ ನಿಮಗೆಲ್ಲಾ ಒಂದು ಆಶ್ವಾಸನೆ ಕೊಟ್ಟಿದ್ದೆ. ಖಂಡಿತ ಆರು ಪರ್ಸೆಂಟ್ ಒಳಗೆ NPA ತರುತ್ತೇವೆ ಎಂದು, ನೆಟ್ 10% ಒಳಗೆ ತರುತ್ತೇವೆ ಎಂದು ಮಾತು ಕೊಟ್ಟಿದ್ದೆ. ಸುಮಾರು 23 ಕೋಟಿ ಸಾಲ 22 ಜನಕ್ಕೆ ಕೊಟ್ಟಿರುವುದು ವಸೂಲು ಆಗಿರಲಿಲ್ಲ. ಮಹಾಕಾಯಿಲೇ ಕೋವಿಡ್ ಬಂದಿದ್ದು, ಕೆಲವರಿಗೆ ನಿಜವಾಗಲೂ ತೊಂದರೆ ಆಗಿದೆ. ಕೆಲವರು ಅದನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಇದು ಎಲ್ಲರಿಗೂ ಗೊತ್ತಿರುವಂತಹದು. ಎರಡು ಕೇಸ್ ವಿಚಾರದಲ್ಲಿ ಹೇಳುತ್ತೇನೆ. ಇಂದಿರಾನಗರ ಶಾಖೆಯಲ್ಲಿ ಕೊಟ್ಟಂತದು, ಕೆಲವರು ಏನು ಆಶಾಭಾವನೆಯಿಂದ ಸಾಲ ತೆಗೆದುಕೊಂಡು ಕಟ್ಟಲಾಗದೆ ಡೀಫಾಲ್ಟ್ ಆದರು. ಇನ್ನು ಕೆಲವರು ಸಾಲ ಕಟ್ಟಲು ಶಕ್ತಿ ಇದ್ದರೂ ಕಟ್ಟದೆ, ಕರ್ನಾಟಕದಲ್ಲಿ ಎಷ್ಟು ಕೋರ್ಟುಗಳು ಇರುವುದೋ–ಲೋಯರ್ ಕೋರ್ಟ್, ಹೈಯರ್ ಕೋರ್ಟು, ಡಿ ಆರ್ ಟಿ ಕೋರ್ಟ್ ಎಂದು ಹೋದರು, ಎಲ್ಲಾ ತಿಳಿದುಕೊಳ್ಳಬೇಕೆಂದರೆ ಇನ್ನೂ ಹತ್ತು ವರ್ಷ ಆಗುತ್ತದೆ. ಆದರೂ ಒಟ್ಟು 27 ಕೇಸುಗಳನ್ನು ಆಡಳಿತ ಮಂಡಳಿ ಸಹಕಾರದಿಂದ ಮತ್ತು ಸಿಬ್ಬಂದಿ ವರ್ಗದ ಸಹಕಾರದಿಂದ ಒಟ್ಟು 12 ಕೇಸಿಗೆ ತಂದಿದ್ದೇನೆ. ಸ್ವಾಮಿ, ಸದಸ್ಯರೇ ಅರ್ಥಮಾಡಿಕೊಳ್ಳಿ, ಒಬ್ಬರಿಗೆ 3 ಕೋಟಿ ಕೊಟ್ಟಿದ್ದಾರೆ. ಅವರ ಮನೆಗೆ ಹೋದರೆ ಗೌರವದಿಂದ ಸ್ವಾಗತಿಸಿ ನಮಗೆ ಕೂಡಿಸಿ ಕಾಫಿ ಎಲ್ಲಾ ಕೊಟ್ಟಿದ್ದಾರೆ. ಅವರ ಮನೆಯನ್ನು ಅವಲೋಕಿಸಿದಾಗ ಅಂದಾಜು ಅದು ನೂರು ಕೋಟಿಗೆ ಮೌಲ್ಯದ ಆಸ್ತಿ ಆಗಿರಬಹುದು. 100 ಕೋಟಿ ಆಸ್ತಿ ಇಟ್ಟುಕೊಂಡವರು ಮೂರು ಕೋಟಿ ಸಾಲ ಕಟ್ಟಲು ಆಗುವುದಿಲ್ಲ. ಇನ್ನೊಬ್ಬ ಆಂಧ್ರ ಪ್ರದೇಶದಿಂದ ಬಂದವನು ಹೆಬ್ಬಾಳದ ಕಡೆ ಇದ್ದ. ಅವನಿಗೆ ಸಾಲ ಕೊಟ್ಟಿದ್ದೇವು. ಅವನ ದಾಖಲೆ ಪತ್ರಗಳು ಸರಿಯಾಗಿ ಇದ್ದವು. ಅವನ ಸಾಲ ಹಿಂಗಿರುಗುವಿಕೆಯು ಚೆನ್ನಾಗಿಯೇ ಇತ್ತು. ಆದರೆ ಅವನ ಮನೆಗೆ ಹೋದರೆ ಬಾಗಿಲು ತೆರೆಯಲಿಲ್ಲ. ಇದು ಬ್ಯಾಂಕಿನ ಅಧ್ಯಕ್ಷ ಅಥವಾ ನಿರ್ದೇಶಕರು ಮಾಡುವ ಕೆಲಸವಲ್ಲ. ಆತನ ವಿರುದ್ಧ ಎಲ್ಲಾ ಕೋರ್ಟ್ ಕಚೇರಿ ಆದಮೇಲೆ ಮೂರು ತಿಂಗಳ ಹಿಂದೆ ಆಸ್ತಿ ಹರಾಜಿಗೆ ತಂದು ಹಣ ವಸೂಲಿ ಮಾಡಿದ್ದೇವೆ. 2001ರಲ್ಲಿ ಯಾರೋ ಒಬ್ಬ ಮುಸ್ಲಿಂ ಅವನಿಗೆ ಒಂದು ಲಕ್ಷ ಸಾಲ ನೀಡಿದ್ದೆವು. ಅದನ್ನು ಬಿಟ್ಟಿಲ್ಲ. 24 ವರ್ಷಗಳಾಗಿದೆ, ಆದರೂ ಪ್ರಾಮಾಣಿಕವಾಗಿ ಪ್ರಯತ್ನಪಟ್ಟು ಅದನ್ನು ವಸೂಲು ಮಾಡಲಾಗಿದೆ. ಮೂರುವರೆ ಲಕ್ಷ ಹಣ ಆತ ಕಟ್ಟಿದ್ದಾನೆ. ಆಡಳಿತ ಮಂಡಳಿ ಮುಂದಿದೆ. ಅದನ್ನು ಕ್ಲಿಯರ್ ಮಾಡಬೇಕಷ್ಟೆ.

11 ಕೇಸಿನಲ್ಲಿ ಇನ್ನು 6 ಕೇಸಿನಲ್ಲಿ ಜೀವ ಇದೆ. ಬಹಳ ಹಿಂದಿನ ಕೇಸಾದ ಇವುಗಳನ್ನು ವಸೂಲು ಮಾಡೇ ಮಾಡುತ್ತೇವೆ. ಇನ್ನು ಮೂರು ಕೇಸುಗಳಲ್ಲಿ ವಸೂಲಾತಿ ಬಹಳ ಕಷ್ಟವಿದೆ. ವಿಜಯಪುರದಲ್ಲಿ ಮೂರು ಕೋಟಿ ಕೊಟ್ಟಿರುವುದು, ಸಚಿನ್ ಕುಮಾರ್ ಎಂಬುವವರಿಗೆ 25 ಲಕ್ಷ ಕೊಟ್ಟಿರುವುದು ಮತ್ತು ಬಿ.ಬಿ. ಹರೀಶ್ ಎಂಬುವರಿಗೆ 25 ಲಕ್ಷ ಕೊಟ್ಟಿರುವುದು. ಈ ಸಾಲದ ವಸೂಲಾತಿ ಬಹಳ ಕಷ್ಟವಿದ್ದರೂ ಪ್ರಯತ್ನ ಪಡುತ್ತಿದ್ದೇವೆ. ಇತ್ತೀಚೆಗೆ 34 ಗುಂಟೆ ಜಮೀನಿನ ಬಗ್ಗೆ ಮಾಹಿತಿ ದೊರಕಿದೆ. ದಾಖಲಾತಿ ಸಿಗುತ್ತದೆ. ದಾಖಲಾತಿ ಸಿಕ್ಕರೆ 3 ಕೋಟಿಯು ಹಿಂತಿರುಗಿ ಬರುತ್ತದೆ. ಹಾಗೆಂದು ನಾವು ಶಾಸ್ತ್ರ ಕೇಳುತ್ತಾ ಕುಳಿತುಕೊಳ್ಳದೆ ಕಠಿಣ ಕ್ರಮ ಕೈಗೊಳ್ಳಲು ಆತನ ಮೇಲೆ ಸಾಲ ವಸೂಲಾತಿಯೊಂದಿಗೆ, ಪ್ರಾಪರ್ಟಿ ಅಟ್ಯಾಚ್ಮೆಂಟ್ ಹಾಗೂ ಕ್ರಿಮಿನಲ್ ಕೇಸು ಹಾಕಲು ಸಿದ್ಧ ಮಾಡಿಕೊಂಡಿದ್ದೇವೆ.

ನನಗೆ ಒಂದು ಆಸೆ ಇತ್ತು. ಈ ವಾರ್ಷಿಕದಲ್ಲಿ NPA ನ್ನು ಆರು ಪರ್ಸೆಂಟ್ ಹಾಗೂ ನೆಟ್ 10%ಗೆ ತಂದು, ಈ ವಾರ್ಷಿಕ ಸಭೆಯಲ್ಲಿ ನಿಮಗೆಲ್ಲರಿಗೂ ಉತ್ತರ ಕೊಟ್ಟು ನಿರ್ಗಮಿಸಬೇಕೆಂದು ಬಹಳ ಆಸೆ ಇತ್ತು. ಕಾರಣವೇನೆಂದು ಅರ್ಥಮಾಡಿಕೊಳ್ಳಬೇಕು. ಲಕ್ಕೇಗೌಡರು ಕಟ್ಟಿದ ಸಂಸ್ಥೆ. ಅವರು ಸ್ಕೂಟರ್‌ನಲ್ಲಿ ಓಡಾಡಿಕೊಂಡು ಇಂದು ನಾಲ್ಕು ಶೇರ್, ನಾಳೆ ಐದು ಶೇರ್ ಮಾರಾಟ ಆಯಿತೆಂದು ಅವರು ತಂದು ಸಂಸ್ಥೆ ಕಟ್ಟಿದೆಲ್ಲ ನೋಡಿದರಿಂದ ಈ ಸಂಸ್ಥೆಗೆ ಬಂದೆ. ಇಲ್ಲ ಅಂದರೆ ಖಂಡಿತ ಬರುತ್ತಿರಲಿಲ್ಲ. ರೈತರ ಸಂಘದಲ್ಲಿ ಕೆಲಸ ಮಾಡಿದ್ದರಿಂದ ತೃಪ್ತಿ ಇರುತ್ತದೆ.  ಖುಷಿ ಇರುತ್ತದೆ. 10 ನಿಮಿಷ  ತಡವಾದರೂ ನಿಮ್ಮನ್ನೆಲ್ಲ ಕ್ಷಮೆ ಕೇಳಿ ಈ ಒಂದು ವಿಚಾರ ಹೇಳುತ್ತಿದ್ದೇನೆ. ಇಂದು ಮನಸ್ಸಿಗೆ ತುಂಬಾ ನೋವಾಗಿದೆ. ನಾವ್ಯಾರು ಅಧಿಕಾರಕ್ಕೆ ಅಂಟಿಕೊಂಡವರಲ್ಲ. ಎಲ್ಲಾದರೂ ಅವಕಾಶ ಸಿಕ್ಕರೆ ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂದು ಬಂದವರು. ಲಕ್ಕೇಗೌಡರ ಹೆಸರು ಉಳಿಸಬೇಕು. ಲಕ್ಕೇಗೌಡರೊಂದಿಗೆ ಕೆಲಸ ಮಾಡಿದವರ ಗೌರವ ಉಳಿಸಬೇಕು ಎಂದುಕೊಂಡವರು. ಒಂದು ಸಂದರ್ಭದಲ್ಲಿ ನಾವು ಅಂದುಕೊಳ್ಳುತ್ತಿದ್ದೆವು ಲಕ್ಕೇಗೌಡರು ಹೋದ ಮೇಲೆ ಅವರೊಂದಿಗೆ ಎಲ್ಲವೂ ಹೊರಟು ಹೋಗುವುದೇನೋ ನಮ್ಮನ್ನು ಯಾರು ಗಮನಿಸುವುದಿಲ್ಲವೇನೋ ಅಂದುಕೊಳ್ಳುತ್ತಿದ್ದೆ. ಕಳೆದ ಚುನಾವಣೆ ಲಕ್ಕೇಗೌಡರ ಹೆಸರು ಉಳಿಸುವ ಜನರು ಇದ್ದಾರೆ ಎಂಬುದಕ್ಕೆ ಸಾಕ್ಷಿ ಎಂದು ನಿಮಗೆ ಹೇಳುತ್ತಿದ್ದೇನೆ.

NPA 6%ಗೆ, ನೆಟ್ 10% ತರುತ್ತೇನೆ ಎಂದು ಹೇಳಿದ್ದೆ. ಒಟ್ಟು 18 ಸಾಲಗಳಲ್ಲಿ ನಾನ್ EMI ನ್ನು ಎರಡು EMI ಗೆ ಕನ್ವರ್ಟ್ ಮಾಡಿದ್ದೇವೆ. ರೆಗ್ಯೂಲರ್ ಅಕೌಂಟನ್ನು ರೀ ಸ್ಟ್ರಕ್ಚರ್ ಮಾಡಿದ್ದು ಐದು. ಹೆಚ್ಚುವರಿ ಸಾಲವನ್ನು ಕೊಟ್ಟಿದ್ದು 5ಕ್ಕೆ, O.D ಯಿಂದ Term ಲೋನ್ ಆಗಿ ಕೊಟ್ಟಿದ್ದು ಎರಡು. ಒಂದು ಸಿಸ್ಟಮ್ ಎರರ್ ಎಂದು ಆಗಿರುವುದು. ಇನ್ನೊಂದು ಅಕೌಂಟ್ ಕ್ಲೋಸ್ ಆಗಿದೆ. ಇನ್ನೆರಡರಲ್ಲಿ ಒಬ್ಬ ವ್ಯಕ್ತಿ 70 ಲಕ್ಷ ಸಾಲ ತೆಗೆದುಕೊಂಡಿದ್ದಾನೆ. 50 ಲಕ್ಷ ಸಾಲ ಹಿಂತಿರುಗಿಸಿದ್ದಾನೆ. ಆತ ಬಿಸಿನೆಸ್ ಮಾಡುತ್ತಿದ್ದಾನೆ. ಉಳಿದ 20 ಲಕ್ಷ ಆತ ಸಾಲ ತೀರಿಸಿದ್ದಾನೆ. ಮತ್ತೆ ಎಪ್ಪತ್ತು ಲಕ್ಷ ಆತನಿಗೆ ಮಂಜೂರು ಮಾಡಿದ್ದೇವೆ. ಅದನ್ನು NPA ಎಂದು ತೋರಿಸಲಾಗಿದೆ. ಈ ನಿಯಮಗಳು ತಿಳಿದುಕೊಳ್ಳಲು ನಮಗೆ ಕಷ್ಟವಾಯಿತು. ಮಾರ್ಚ್ 31ರ ನಂತರ ನಮ್ಮ ಬ್ಯಾಂಕಿನ ಸಿಬ್ಬಂದಿಯೊಂದಿಗೆ ಕುಳಿತುಕೊಂಡಾಗ ಬಹಳ ಖುಷಿಯಲ್ಲಿ ಇದ್ದೆವು. ಗ್ರಾಸ್ NPA 13%ಗೆ ಬಂದಿತ್ತು,. ಆದರೆ ಅದರಲ್ಲಿ ಅಡ್ವಾನ್ಸ್ ಆಗಿರುವುದು ಬಂದಿರಲಿಲ್ಲ. ಸ್ಟ್ಯಾಚುಟರಿ ಆಡಿಟ್ ಮತ್ತು ಆರ್ ಬಿ ಐನವರ ಪರಿಶೀಲನೆಯಾದ ನಂತರ 9.50% ಬರಬೇಕಾದ NPA ಜಾಸ್ತಿ ಆಯಿತು.

2024–25 ವಾರ್ಷಿಕದಲ್ಲಿ 8 ಅಕೌಂಟ್‌ನಲ್ಲಿ ಕ್ರಾನಿಕ್ ಡೀಫಾಲ್ಟರ್ಸ್, ವ್ಯಕ್ತಿ ತೀರಿಕೊಂಡವರ ಮಕ್ಕಳಿಂದ ವಸೂಲು ಮಾಡಲು ಆಗದಿದ್ದಾಗ ಅವರ ಆಸ್ತಿಯೋ ಜಮೀನೋ ಮಾರಿ 11 ಕೋಟಿ 50 ಲಕ್ಷ ಸಾಲ ತೀರಿಸಿದ್ದಾರೆ. ಹೀಗಾಗಿ 3.5% ಬರಬೇಕಾದ NPA 9.5% ಗೆ ಬಂದಿತ್ತು. ಆರ್‌ಬಿಐ ನವರು ಬಂದಿದ್ದರು. ಅವರು ಪರಿಶೀಲನೆಯನ್ನು ಮಾಡಿದಾಗ ಯಾವುದೇ ತಪ್ಪುಗಳು ಕಂಡುಬಂದಿಲ್ಲ. ಎಲ್ಲವೂ ಚೆನ್ನಾಗಿ ನಡೆದಿದೆ ಎಂದು ತಿಳಿಸಿದರು. ಆಡಳಿತ ಮಂಡಳಿಯೊಂದಿಗಿನ ಸಭೆಯಲ್ಲಿ ಅವರು ಎರಡು ವಿಚಾರಗಳ ಬಗ್ಗೆ ಟಿಪ್ಪಣಿ ಮಾಡಿದರು. ಬ್ಯಾಂಕ್ ಪ್ರಗತಿ ಹೊಂದಲು ಅಡ್ವಾನ್ಸ್ ಮಾಡಬೇಕು.

ಸೆಕ್ಯೂರಿಟಿ ಚಾರ್ಜಸ್ ಜಾಸ್ತಿ ಇದೆ, ಅದನ್ನು ಕಡಿಮೆ ಮಾಡಿಕೊಳ್ಳಬೇಕೆಂದು ಸಲಹೆ ನೀಡಿದರು. ವಹಿವಾಟು ಕಡಿಮೆಯಾಗಿದೆ. ಆದುದರಿಂದ ಬೇರೆಯದು ಕಡಿಮೆ ಮಾಡಿಕೊಳ್ಳಬಹುದು. ಆದರೆ ಸೆಕ್ಯೂರಿಟಿ ಚಾರ್ಜಸ್ ಹೇಗೆ ಕಡಿಮೆ ಮಾಡಬೇಕೆಂದು ಚಿಂತನೆ ನಡೆಸಿದ್ದೇವೆ ಮುಂದೆ ಕ್ರಮ ಕೈಗೊಳ್ಳುತ್ತೇವೆ.

ನಮ್ಮ ಸನ್ಮಾನ್ಯ ನಂಜುಂಡಪ್ಪನವರು ತಾವು ಸಾಲ ಕೊಡಿಸಿರುವುದರ ಬಗ್ಗೆ ಹೇಳಿದರು. ಅವರ ಬೀಗರ ಕಡೆಯವರಿಗೆ ಸಾಲ ಕೊಡಿಸಿದ್ದಾರೆ. ಆ ಸಾಲ ಆದ್ಯತೆ ಇರಲಿಲ್ಲ., ಬಹಳ ಒತ್ತಡ ತಂದರು. ನಿರ್ದೇಶಕರು ಪರಿಶೀಲಿಸಿ ಸಾಲ ನಿಡಿದರು. ಪ್ರಾಪರ್ಟಿಯಲ್ಲಿ ತೊಂದರೆ ಇರಲಿಲ್ಲ. ಚೆನ್ನಾಗಿ ಇದೆ. ಆದರೆ 50 ಲಕ್ಷ NPA ಆಗಿದೆ. ವೇದಿಕೆ ಮೇಲೆ ನಿಂತು ಹೇಳುವುದು ಸುಲಭ. ಆದರೆ ಸಾಲ ನೀಡುವುದು ಕಷ್ಟವಿದೆ. ಇದನ್ನು ಅರ್ಥ ಮಾಡಿಕೊಳ್ಳಬೇಕು. ನಾವಿಲ್ಲಿ ತಲೆ ಸವರಿ, ಮೈ ಸವರಿ ಕೆಲಸ ಮಾಡುವಂಥದ್ದು ಖಂಡಿತ ಏನು ಇಲ್ಲ. ನಮಗೆ ಇದ್ಯಾವುದು ಬೇಡ. ಆರಾಮಾಗಿ ನಾವು ನೆಮ್ಮದಿಯಾಗಿ ಇರಬಹುದು. ನೆಮ್ಮದಿ ಕಳೆದುಕೊಂಡು ಇಲ್ಲಿ ಕೆಲಸ ಮಾಡುವಂತದ್ದು ಏನೂ ಇಲ್ಲ.

ಕಳೆದ ಸಾಲಿನಲ್ಲಿ ಸಾಲವನ್ನು ಕೊಡಲು ನಿರ್ಬಂಧನೆಗಳು ಇದ್ದವು. ನಾನು ಅಧ್ಯಕ್ಷನಾದಾಗ 28 ಲಕ್ಷದ ಮೇಲೆ ಸಲ ಕೊಡಲು ಆಗುತ್ತಿರಲಿಲ್ಲ. ಸ್ವಲ್ಪ ಪ್ರಗತಿ ಸಾಧಿಸಿದ ಮೇಲೆ 48 ಲಕ್ಷದ ತನಕ ಅದರ ಮಿತಿ ಹೋಯಿತು. ಮತ್ತಷ್ಟು ಪ್ರಗತಿ ಸಾಧಿಸಿದ ಮೇಲೆ 67 ಲಕ್ಷ ಮಿತಿ ಹೋಯಿತು. ಈಗ ಮೂರು ಕಂಡೀಶನ್ ಬಿಟ್ಟರೆ ಎಲ್ಲಾ ನಿರ್ಬಂಧನೆ ತೆಗೆದಿರುವುದರಿಂದ ಒಂದು ಕೋಟಿ ನಲವತ್ತು ಲಕ್ಷದವರೆಗೂ ಸಾಲ ನೀಡಬಹುದು. ಕೆಲವರಿಗೆ ಎರಡು ಕೋಟಿ, ಮೂರು ಕೋಟಿಯವರೆಗೂ ಸಾಲ ನೀಡಿದ್ದೇವೆ. ಕಳೆದ ಸಾರಿ ನಮ್ಮ ಸ್ಟಾಫ್ ಮೀಟಿಂಗ್‌ನಲ್ಲಿ ಹದಿನೈದು ಕೋಟಿ ಸಾಲ ನೀಡುವ ಗುರಿ ಇಟ್ಟುಕೊಂಡಿದ್ದೆವು. ಅದು 19 ಕೋಟಿಗೆ ತಲುಪಿದೆ. ನಿಮಗೆಲ್ಲಾ ಈಗಾಗಲೇ ತಿಳಿದಿರುವಂತೆ 6–10–2025 ರಿಂದ 30–11–2025ರವರೆಗೂ ಕೇಂದ್ರ ಕಚೇರಿ ಮತ್ತು ನಮ್ಮ ಬ್ಯಾಂಕಿನ ಶಾಖೆಗಳಲ್ಲಿ ಸಾಲ ಮೇಳ ಆಯೋಜಿಸಲಾಗಿದೆ. ಈ ಅವಧಿಯಲ್ಲಿ ಯಾವುದೇ ಪ್ರೋಸಸಿಂಗ್ ಚಾರ್ಜ್ ಇರುವುದಿಲ್ಲ. ರೂ. 631 ಕಟ್ಟಿ ಸದಸ್ಯರಾದರೆ ಯಾವುದೇ ಇತರ ವೆಚ್ಚಗಳು ನೀಡಬೇಕಾಗಿಲ್ಲ. ಈ ಸುವರ್ಣ ಅವಕಾಶವನ್ನು ನಮ್ಮ ಸದಸ್ಯರು ಉಪಯೋಗಿಸಿಕೊಳ್ಳಬೇಕು. ನಾವು ಈ ವರ್ಷ 60 ಕೋಟಿ ಸಾಲ ನೀಡುವ ಗುರಿ ಇಟ್ಟುಕೊಂಡಿದ್ದೇವೆ. ಇಂದೇನು 161 ಕೋಟಿ ಇದೇ, ಅದನ್ನು ನಮ್ಮ ಅವಧಿಯಲ್ಲಿ 200 ಕೋಟಿಗೆ ತಲುಪಿದರೆ ಬ್ಯಾಂಕ್ ಸರಿದಾರಿಗೆ ತರಬಹುದು. ಬ್ಯಾಂಕ್ ಹಾದಿ ತಪ್ಪಲು ಮೊದಲನೆಯದಾಗಿ ಕೋವಿಡ್ ಮತ್ತು ಅದನ್ನು ಕೆಲವರು ದುರುಪಯೋಗಪಡಿಸಿಕೊಂಡರು. ಹಿಂದೆ ಸಾಲ ನೀಡುವಾಗ ಯಾರೋ ಮ್ಯಾನೇಜರ್ ಹೋಗಿ ಆಸ್ತಿ ನೋಡಿಕೊಂಡು ಬರುತ್ತಿದ್ದರು. ಅದು ಸರಿ ಇದಿಯೋ ಇಲ್ಲವೋ, ನೇರವಾಗಿ ಅರ್ಜಿ ಬೋರ್ಡಿಗೆ ಬಂದು ಬಿಡುತ್ತಿದ್ದವು. ಆದರೆ ಈಗ ಐದು ಜನರ ಕಮಿಟಿ ಮಾಡಿದ್ದೇವೆ. ಅವರು ಮೊದಲು ಹೋಗಿ ಸಾಲ ಹಿಂತಿರುಗಿಸಲು ಶಕ್ತರೆ ಎಂದು ಪರಿಶೀಲಿಸುತ್ತಾರೆ. ಎರಡನೆಯದಾಗಿ ಆಸ್ತಿಯ ಮೌಲ್ಯಮಾಪನ ಮಾಡುತ್ತಾರೆ. ಇವೆಲ್ಲ ಸರಿಯಾಗಿ ಇದ್ದರೆ ಹಂತಹಂತವಾಗಿ ಅರ್ಜಿ ಬೋರ್ಡಿಗೆ ಬರುತ್ತದೆ. ನಾನು ಅಧ್ಯಕ್ಷನಾದ ಮೇಲೆ ಎನಾನ್ಸ್

ಮಾಡಿಲ್ಲ. ಮೊದಲು ನಮ್ಮ ಹೆಸರಿನಲ್ಲಿ 5 ಲಕ್ಷ ಹೆಚ್ಚಿಗೆ ಮಾಡಿ, 6 ಲಕ್ಷ ಹೆಚ್ಚಿಗೆ ಮಾಡಿ ಎಂಬುದೆಲ್ಲ ಬಂದಿದೆ. ಬರದೇ ಇರುವುದು ಯಾವುದು ಇಲ್ಲ. ಈಗ ಆ ಪದ್ಧತಿಗೆಲ್ಲ ವಿರಾಮ ಹಾಕಲಾಗಿದೆ. ಮೊದಲು ಸಾಲದ ಅರ್ಜಿಯನ್ನು ನಮ್ಮ ಐದು ಜನರ ಕಮಿಟಿ ಪರಿಶೀಲಿಸುತ್ತದೆ. ನಂತರ ನಮ್ಮ ಇಂಜಿನಿಯರ್, ನಿರ್ದೇಶಕರ ಬಳಿ ಹೋಗುತ್ತದೆ. 2023ರ ನಂತರ ಯಾವ ಸಾಲವು ವಸೂಲಾಗದೆ ಉಳಿದಿಲ್ಲ. ಒಂದು ಕೋಟಿಯ ಮೇಲಿನ ಸಾಲಕ್ಕೆ ಅಧ್ಯಕ್ಷರು, ಬ್ಯಾಂಕಿನ ಸಿಇಓ ಎಲ್ಲರೂ ಹೋಗಿ ಪರಿಶೀಲಿಸಿಯೆ ಸಾಲ ನೀಡುತ್ತಿರುವುದು. ಈ ಎಲ್ಲಾ ಕ್ರಮಗಳಿಂದ 200 ಕೋಟಿಗೆ ನಾವು ತಲುಪಿದರೆ ಲಕ್ಕೇಗೌಡರ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂದು ನಾನಂದುಕೊಂಡಿದ್ದೇನೆ. ಲಕ್ಕೇಗೌಡರ ನೆರಳಿನಲ್ಲೆ ನಾವು ಬೆಳದಿದ್ದರಿಂದ ಆ ಒಂದು ಶಿಸ್ತಿನಲ್ಲೇ ನಾವು ಹೋಗುತ್ತಿದ್ದೇವೆ. ನನಗೆ ನಿರ್ದೇಶಕರ ಮಂಡಳಿ ಸಿಬ್ಬಂದಿ, ವರ್ಗ ಎಲ್ಲರು ಪೂರ್ಣ ಸಹಕಾರ ನೀಡಿದ್ದಾರೆ.

ಮುಖ್ಯವಾಗಿ ಕಾರ್ವೆ ಮತ್ತು ವಸೂಲಾತಿ ಬಗ್ಗೆ ನಾನು ನಿಮಗೆ ಹೇಳಿದ್ದೇನೆ. ಪಂಡರಿನಾಥ್‌ರವರು ಮಾತಾಡುತ್ತಾ ಠೇವಣಿದಾರರಿಗೆ ಸನ್ಮಾನ ಮಾಡುವ ಪ್ರಸ್ತಾಪ ಮಾಡಿದರು. ಬ್ಯಾಂಕಿನ ವ್ಯವಹಾರದಲ್ಲಿ ಇಂದು 5% ಹೆಚ್ಚು ಕೊಟ್ಟರೆ ಇಲ್ಲಿಗೆ, 5% ಕಡಿಮೆ ಕೊಟ್ಟರೆ ಅಲ್ಲಿಗೆ ಹೋಗುತ್ತಾರೆ. ಹೀಗಿರುವಾಗ ಎಷ್ಟು ಜನಕ್ಕೆ ಸನ್ಮಾನ ಮಾಡಲು ಸಾಧ್ಯ.

ಇದು ನಿಮ್ಮ ಬ್ಯಾಂಕು. ನಾವು ನಿಮಗೆ ಕರಿಯಬೇಕೇ? ನೀವು ಯಾವಾಗ ಬೇಕಾದರೂ, ಯಾರನ್ನು ಬೇಕಾದರೂ ಮಾತನಾಡಿಸಬಹುದು. ಕಾರ್ವೆ NPA ಬಗ್ಗೆ ಯಾವುದೇ ಮಾಹಿತಿ ನೀವು ಕೇಳಿ ಪಡೆಯಬಹುದು. ನಂಜುಂಡೇಗೌಡರು ಕೆಲವು ಶಾಖೆಯಲ್ಲಿರುವ ನಷ್ಟದ ಬಗ್ಗೆ ಹೇಳಿದರು. BES ಶಾಖೆ ನಷ್ಟದಲ್ಲಿದೆ ಎಂದು ಹೇಳಿದರು. ಆದರೆ ಕೆಲವು ಕ್ರಮ ಕೈಗೊಂಡಿದ್ದರಿಂದ 40 ಲಕ್ಷ ಲಾಭಕ್ಕೆ ಬಂದಿದೆ. ಬ್ಯಾಂಕು ತೆರೆಯುವುದು ಕಷ್ಟ ಮುಚ್ಚುವುದು ಅತಿ ಸುಲಭ. ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

ನಾವು ಕೆಲವೊಮ್ಮೆ ಫೇಲ್ ಆಗುತ್ತೇವೆ. ಬೇಗೂರು ಶಾಖೆ ಬಹಳ ದೊಡ್ಡದಾದ ಜಾಗದಲ್ಲಿ ತುಂಬಾ ಚೆನ್ನಾಗಿತ್ತು. ಒಂದು ಲಕ್ಷ ಚಿಲ್ಲರೆ ಬಾಡಿಗೆ, ಆದರೆ ಬಿಸಿನೆಸ್ ಆಗಲಿಲ್ಲ. ನಷ್ಟ ಉಂಟಾಯಿತು. ತಕ್ಷಣ ಬದಲಾವಣೆ ಮಾಡಿ, ಬಿ ಖಾತೆ ಹೊಂದಿದ ಖಾಲಿ ಸೈಟಿನವರಿಗೆ, ಅವರಿಗೆ ಸಾಲ ಬೇಕಾಗಿಲ್ಲದಿದ್ದರೂ ಸಾಲ ನೀಡಿ ಅಲ್ಲೇ ನಲವತ್ತು ಸಾವಿರ ಬಾಡಿಗೆಯಲ್ಲಿ ಶಾಖೆ ಬದಲಾಯಿಸಲಾಯಿತು. ಅಲ್ಲಿ ಠೇವಣಿ ಕೇವಲ 4.25 ಕೋಟಿ ಇತ್ತು. ಅಡ್ವಾನ್ಸ್ ಐದು ಕೋಟಿ ಇತ್ತು. ಇವತ್ತು ಅದು 7–8 ಕೋಟಿಗೆ ತಲುಪಿದೆ. ಅಲ್ಲಿನ ಮ್ಯಾನೇಜರ್ ಮುಂದಿನ ಸಾಲಿಗೆ ಮೂರು ಕೋಟಿ ಠೇವಣಿ ತರುತ್ತೇನೆ ಎಂದು ಹೇಳಿದ್ದಾರೆ. ನಾವು ಈ ರೀತಿ ಹುರುದುಂಬಿಸಿ ಕೆಲಸ ಮಾಡುತ್ತಿದ್ದೇವೆ.

ಮತ್ತೀಕೆರೆ ಮತ್ತು ಯಲಹಂಕ ಶಾಖೆ ಲಾಭದಲ್ಲಿದೆ. ವಿಜಯನಗರ ಶಾಖೆ ಯಾಕೆ ನಷ್ಟದಲ್ಲಿದೆ ಎಂದರೆ ಅಲ್ಲಿ NPA ಆಗಿರುವ ನಾಲ್ಕು ಕೇಸು ಇದೆ. ರೂಪ ಅಮರೇಂದ್ರ, ವಿಜಯನಗರದ್ದು, 25, 25 ಲಕ್ಷದ ಎರಡು ಕೇಸುಗಳು ಮತ್ತು ಇನ್ನೊಂದು ಎರಡು ಕೋಟಿ ಇಪ್ಪತ್ತೈದು ಲಕ್ಷ ಕೊಟ್ಟಿರುವ ಕೇಸ್ ಇದೆ. ಅದರ ಕಾಗದ ಪತ್ರ, ದಾಖಲಾತಿಯೆಲ್ಲ ಸರಿಯಾಗಿದೆ. ಆ ಆಸ್ತಿ ಹರಾಜಾಗಿ ಹಣ ಹಿಂತಿರುಗಿ

ಬರುತ್ತದೆ. ಯಾವುದೇ ಸಮಸ್ಯೆ ಇಲ್ಲ. ಅವೆಲ್ಲ ಸರಿಹೋದರೆ ಖಂಡಿತ ವಿಜಯನಗರ ಶಾಖೆ ಲಾಭಕ್ಕೆ ಬರುತ್ತದೆ. ಕೆಂಗೇರಿ ಶಾಖೆಯಲ್ಲಿ ಒಬ್ಬರದೇನು ಸಮಸ್ಯೆ ಇತ್ತು. ಅದು ಈಗ ಸರಿಹೋಗಿದೆ, ಲಾಭ ಬರುತ್ತಿದೆ.

ನಾವೀಗ ಇಬ್ಬರು ನಿರ್ದೇಶಕರಿಗೆ ಒಂದೊಂದು ಶಾಖೆಗಳನ್ನು ನೀಡಿದ್ದೇವೆ. ಅವರು ಆಯಾ ಶಾಖೆಗಳನ್ನು ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಒಂದೇ ಸಲ ಅಲ್ಲದಿದ್ದರೂ ಹಂತ ಹಂತವಾಗಿ ಎಲ್ಲವೂ ಸರಿ ಹೋಗುತ್ತದೆ ಎಂದು ಹೇಳುತ್ತೇನೆ.

ಕ್ಯಾಥೋಲಿಕ್ ಸಿರಿಯನ್ ಬ್ಯಾಂಕಿಗೆ ನೀಡದ ಹಣ ಹಿಂದಿರುಗಿ ಬಂದಿದೆ. ಕೆಲವರು ಇನ್ಸೂರೆನ್ಸ್ ಬಗ್ಗೆ ಸಲಹೆ ನೀಡಿದರು. ಖಾಸಗಿಯಾಗಿ ಮತ್ತು ಸರ್ಕಾರದಲ್ಲಿಯೇ ದೊಡ್ಡ ದೊಡ್ಡ ಸಂಸ್ಥೆಗಳು ಇರುವಾಗ ನಾವಿಲ್ಲಿ ಬ್ಯಾಂಕಿನಲ್ಲಿ ಇನ್ಸೂರೆನ್ಸ್ ನೀಡುವುದು ಅರ್ಥವಿಲ್ಲ. ಈಗಾಗಲೇ ನಾವು ಯಶಸ್ವಿನಿ ಯೋಜನೆಯನ್ನು ಎಲ್ಲರಿಗೂ ನೀಡುತ್ತಿದ್ದೇವೆ. ಮಾಲತಿಯವರು ಪ್ರಸ್ತಾಪ ಮಾಡಿದ ವಿಚಾರ ನ್ಯಾಯಾಲಯದಲ್ಲಿ ಇರುವುದರಿಂದ ಹೆಚ್ಚಿಗೆ ಏನು ಪ್ರಸ್ತಾಪಿಸಲು ಸಾಧ್ಯವಿಲ್ಲ ಎಂದರು.

ಕೆಲವು ನಿರ್ದೇಶಕರು ಬೋರ್ಡ್ ಮೀಟಿಂಗ್‌ಗೆ ಬರುತ್ತಿಲ್ಲ ಎಂದು ಹೇಳಿದ್ದೀರಿ. ಜನವರಿಯಲ್ಲಿ ಚುನಾವಣೆ ಆಗಿರುವಂತದು. ನಿಮಗೆ ಮಾಹಿತಿ ಇಲ್ಲದೆ ಇರಬಹುದು. ಆದರೆ ಇದನ್ನು ಮುಂದೆ ಸರಿಪಡಿಸಿಕೊಳ್ಳುತ್ತೇವೆ. ಕೆಲವರು ಪ್ರಶ್ನಿಸಿದ್ದೀರಿ ಆಡಳಿತ ಮಂಡಳಿಯಲ್ಲಿ ಇರುವವರ ಮಕ್ಕಳು, ಮೊಮ್ಮಕ್ಕಳನ್ನೇ ಏಕೆ ಆಯ್ಕೆ ಮಾಡಿಕೊಂಡಿದ್ದೀರಿ ಎಂದು. ಕೆಲವರು ಸಂಸ್ಥೆಯ ಸ್ಥಾಪಕ ಸದಸ್ಯರು. ಬಹಳ ಹಿಂದೆ ಅವರೆಲ್ಲ ಕಷ್ಟಪಟ್ಟಿದ್ದಾರೆ. ಸಂಸ್ಥೆ ಕಟ್ಟಿದ್ದಾರೆ. ಹೀಗಾಗಿ ಕೆಲವರನ್ನು ಗುರುತಿಸಿ ಬಲವಂತದಿಂದ ನಾವು ಕರೆದುಕೊಂಡು ಬಂದಿದ್ದೇವೆ. ಅವರಿಗೆ ಅವರದೇ ಆದ ಕೆಲಸಕಾರ್ಯಗಳಿವೆ. ಆದರೆ ನಮಗೆ ಬದ್ಧತೆ ಇದೆ. ಲಕ್ಕೇಗೌಡರ ಮನೆಯಲ್ಲಿ ಮಕ್ಕಳಾಗಿ ಇದ್ದಾಗಿನಿಂದ ಬೆಳೆದು ಬಂದಿದ್ದೇವೆ. ಸಂಸ್ಕಾರ, ಸಂಸ್ಕೃತಿ ಎಲ್ಲಾ ಬೆಳೆದಿದ್ದರಿಂದ ನಾವಿದನ್ನು ಮಾಡುತ್ತಿದ್ದೇವೆ. ಇಲ್ಲಿ ನಾವೇ ಇರಬೇಕೆಂಬುದು ಇಲ್ಲ. ಇದು ಪ್ರಜಾಪ್ರಭುತ್ವದ ವ್ಯವಸ್ಥೆ. ಲಕ್ಕೇಗೌಡರ ಹೆಸರು ಉಳಿಯಬೇಕೆಂದು ಅತ್ಯಂತ ಎಚ್ಚರಿಕೆಯಿಂದ ಹೆಜ್ಜೆ ಇರಿಸುತ್ತಿದ್ದೇವೆ. ನಮಗೆ ಲಕ್ಕೇಗೌಡರು ಕಟ್ಟಿದ ಸಂಸ್ಥೆಯ ಹೆಸರು ಉಳಿಸಬೇಕೆಂಬುದು ಬಿಟ್ಟರೆ ವೈಯಕ್ತಿಕವಾದ ಯಾವುದೇ ಆಸೆ ಇಲ್ಲ. ಉತ್ತಮವಾದ ಪ್ರಶ್ನೆ ಕೇಳಿ ಉತ್ತಮವಾದ ಉತ್ತರ ನಿರೀಕ್ಷಿಸಿ.ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ. ಧನ್ಯವಾದಗಳು.

**ವಿಷಯ: – 3 : 2024–25ನೇ ಸಾಲಿನ ವಾರ್ಷಿಕ ವರದಿ ಪರಿಶೀಲನೆ ಮತ್ತು ಅನುಮೋದನೆ.**

ಸಭಾಧ್ಯಕ್ಷರಾದ ಶ್ರೀ ಕೆ.ಎಸ್.ಸುಧಾಕರ್‌ರವರು 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸಿದರು. ಸದಸ್ಯರಾದ ಶ್ರೀ ಕೃಷ್ಣಪ್ಪನವರು ಅಂಗೀಕರಿಸಬಹುದೆಂದು ಸೂಚಿಸಿದರು. ಶ್ರೀ ಧರ್ಮಪಾಲೇಗೌಡ ಹೆಚ್.ಎಂ. ರವರು ಅನುಮೋದಿಸಿದರು. ನಂತರ ಸಭೆಯು 2024–25ನೇ ಸಾಲಿನ ವಾರ್ಷಿಕ ವರದಿಗೆ ಅನುಮೋದನೆ ನೀಡಿತು.

**ವಿಷಯ 4 : 2024–25ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಪರಿಶೀಲನೆ ಹಾಗೂ ಅಂಗೀಕಾರ.**

ಸಭಾಧ್ಯಕ್ಷರಾದ ಶ್ರೀ ಕೆ. ಎಸ್. ಸುಧಾಕರ್ ರವರು 2024–25ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಮಂಡಿಸಿದರು. ಸದಸ್ಯರಾದ ಶ್ರೀ ಪ್ರಸನ್ನರವರು ಅಂಗೀಕರಿಸಬಹುದೆಂದು ಸೂಚಿಸಿದರು. ಸದಸ್ಯರಾದ ಶ್ರೀ ಹನುಮಂತರವರು ಅನುಮೋದಿಸಿದರು. ನಂತರ ಸರ್ವಸದಸ್ಯರ ಸಭೆಯು 2024–25ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಬ್ಯಾಂಕಿನ ಲೆಕ್ಕಪತ್ರಗಳಿಗೆ ಅಂಗೀಕಾರ ನೀಡಿತು.

**ವಿಷಯ 5 : 2024–25ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚುವರಿ ಆಗಿರುವ ಖರ್ಚನ್ನು ಅನುಮೊದಿಸುವುದು.**

ಸಭಾಧ್ಯಕ್ಷರಾದ ಶ್ರೀ ಕೆ. ಎಸ್. ಸುಧಾಕರ್‌ರವರು ಮಾತನಾಡುತ್ತಾ ಅಂದಾಜುಗಿಂತ ಹೆಚ್ಚುವರಿಯಾಗಿರುವ ಖರ್ಚಿನ ವಿವರಗಳನ್ನು ವರದಿಯ ಪುಟ ಸಂಖ್ಯೆ 37 ರಿಂದ 41ರಲ್ಲಿ ನೀಡಲಾಗಿದ್ದು, ಅದಕ್ಕೆ ಅನುಮೋದನೆ ನೀಡಬೇಕೆಂದು ಕೋರಿದರು. ಸದಸ್ಯರಾದ ಶ್ರೀ ನಿಂಗಯ್ಯ ಎಂ. ರವರು ಅಂಗೀಕರಿಸಬಹುದೆಂದು ಸೂಚಿಸಿದರು. ಶ್ರೀ ಪಂಡರೀನಾಥ್‌ರವರು ಅನುಮೋದಿಸಿದರು. ನಂತರ ಸರ್ವಸದಸ್ಯರ ಸಭೆಯು 2024–25ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚುವರಿ ಆಗಿರುವ ಖರ್ಚಿಗೆ ಒಪ್ಪಿಗೆ ನೀಡಿತು.

**ವಿಷಯ 6 : 2026–27ನೇ ಸಾಲಿನ ವಾರ್ಷಿಕ ಅಂದಾಜು ಆಯವ್ಯಯ ಮಂಜೂರು ಮಾಡುವುದು.**

ಸಭಾಧ್ಯಕ್ಷರಾದ ಶ್ರೀ ಕೆ. ಎಸ್. ಸುಧಾಕರ್‌ರವರು 2026–27 ನೇ ಸಾಲಿನ ವಾರ್ಷಿಕ ಅಂದಾಜು ಆಯವ್ಯಯದ ವಿವರಗಳನ್ನು ಪುಟ ಸಂಖ್ಯೆ: 37 ರಿಂದ 42ರಲ್ಲಿ ನೀಡಲಾಗಿದ್ದು, ಅದಕ್ಕೆ ಅನುಮೋದನೆ ನೀಡಬೇಕೆಂದು ಕೋರಿದರು. ಸದಸ್ಯರಾದ ಶ್ರೀ ಮಂಜುನಾಥ್ ಬಿ.ಎಂ. ರವರು ಅಂಗೀಕರಿಸಬಹುದೆಂದು ಸೂಚಿಸಿದರು. ಸದಸ್ಯರಾದ ಶ್ರೀ ಕೃಷ್ಣ ರವರು ಅನುಮೋದಿಸಿದರು. ನಂತರ ಸರ್ವಸದಸ್ಯರ ಸಭೆಯು 2026–27ನೇ ಸಾಲಿನ ಅಂದಾಜು ಆಯವ್ಯಯವನ್ನು ಅಂಗೀಕರಿಸಿತು.

